
# ಅಪರಂಜಿ

ತಿಳಿನಗೆಯ ಕಾರಂಜಿ

ಜುಲೈ 2022




" ನಮಗೆ ಗೊತ್ತಿಲ್ಲದೇ ಇರೋದನ್ನ ಏನಾದ್ರೂ ಹೇಳಿ "

ಬಿಡಿ ಪ್ರತಿ: ರೂ. 10/-



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 39
ಸಂಚಿಕೆ - 10
ಜುಲೈ - 2022

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಲಕ್ಷನಾಮಾರ್ಚನೆ ಪ್ರಸಂಗ | ವತ್ಸನ | 3 |
| ದೃಶ್ಯಗಳು | ಜಯಶ್ರೀ ದೇಶಪಾಂಡೆ | 8 |
| ನಾನು ನಾಯಿ ಕೈಲಿ ಕಚ್ಚಿಸ್ಕೊಳ್ಳಿಲ್ಲ | ರಾಮಮೂರ್ತಿ ಎಸ್. ಕೆ. | 11 |
| ಅಂದಿನ ನವರಾತ್ರಿ | ಡಾ. ಶ್ಯಾಮಲಾ ರವಿಶಂಕರ್ | 12 |
| ಡ್ರೆಸ್ ಅಂಡ್ ಹೇರ್ ಡ್ರೆಸ್ | ಗುಂಡುರಾವ್ ದೇಸಾಯಿ | 14 |
| ಸಿನಿಮಾ ಟೈಟಲ್ | ಅರವಿಂದ ಜಿ. ಜೋಶಿ | 18 |
| ಸೌಗಂಧಿಕಾ ಪುಷ್ಪ | ಕೆ. ಎಸ್. ಸೋಮೇಶ್ವರ | 19 |
| ಸಾಲ ಬೇಕಾ ಸಾಲ | ಗೀತಾ ಕುಂದಾಪುರ | 20 |
| ತುಂತುರು | ದನಂಆ | 22 |
| ಚರ್ಚೆ ಎಂಬ ಕದನ ಕಣ | ಸುಮಾ ರಮೇಶ್ | 24 |
| ಚಿನ್ನದ ಚೌಕ | ಶಾಂತಾ ನಾಗಮಂಗಲ | 27 |
| ಅಯ್ಯೋ ಅಲ್ಲಿಡ್ರೀ | ಬೇಲೂರು ರಾಮಮೂರ್ತಿ | 29 |
| ಯಶೋಗಾಥೆ | ವಿ.ವಿಜಯೇಂದ್ರ ರಾವ್ | 32 |
| ಪೋಸ್ಟ್ ಆಫೀಸಿನಲ್ಲಿ.... | ಇ. ಆರ್. ರಾಮಚಂದ್ರನ್ | 36 |
| ಭರ್ಜರಿ ಭೋಜನ | ಮಹಂತೇಶ ಬಾಗೇವಾಡಿ | 38 |
| ಗಾದೆ ಗೌರಜ್ಜಿ | ಇಂಟರ್ನೆಟ್ ಕೃಪೆ | 40 |

ಮುಖಪುಟ : **ಇಂಟರ್‌ನೆಟ್ ಕೃಪೆ**
ವ್ಯಂಗ್ಯ ಚಿತ್ರಗಳು: ರಘುಪತಿ ಶೃಂಗೇರಿ, ಆದರ್ಶ ಪೈ

*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

" ಎಸ್.ಐ. ನೇಮಕಾತಿ ; ಫಸ್ಟ್ ರ್‍ಯಾಂಕ್ ಅಭ್ಯರ್ಥಿಯೂ ಡೀಲ್ "

– ಸುದ್ದಿ

ಬೇಲಿಯೇ ಹೊಲ ಮೇಯ್ದಂತೆ !?

***

ರಾಜ್ಯ ಆರ್ಥಿಕ ಪರಿಸ್ಥಿತಿ ಸುಭಿಕ್ಷ – ಪತ್ರಿಕೆ

ಆಹಾ! ಗಟ್ಟಿಯಾಗಿ ಹೇಳಬೇಡಿ. !?

***

ಮಹಿಳಾ ಕ್ರಿಕೆಟ್ಟನ್ನು ಉತ್ತುಂಗಕ್ಕೇರಿಸಿದ

ಮಿಥಾಲಿ ರಾಜ್ ಅವರಿಗೆ ಅಪರಂಜಿಯ ಶುಭಕಾಮನೆಗಳು

***

ಕೋವಿಡ್ ; ಹೋದೆಯಾ ಪಿಶಾಚಿ ಅಂದರೆ

ಬಂದೆ ಗವಾಕ್ಷೀಲಿ ಅಂದಿತಂತೆ !?

***

" ಶತಮಾನದ ಸುರಂಗ ಪುರುಷನ ಭಗೀರಥ ಸಾಧನೆ.

ಅಪರಂಜಿಯ ಅಭಿನಂದನೆಗಳು.

***

" ಖರ್ಗೆ ಪಟ್ಟು, ಕಾಂಗ್ರೆಸ್ ಇಕ್ಕಟ್ಟು " – ಶೀರ್ಷಿಕೆ

ಆಹಾ, ಇದು ಅನುಕರಣೀಯ !?

***

" ಪಠ್ಯ ಪುಸ್ತಕದಲ್ಲಿ ಸತ್ಯ ಬೇಕು ; ಸಿದ್ಧಾಂತವಲ್ಲ "

– ಶ್ರೀ ಎಸ್. ಎಲ್ ಭೈರಪ್ಪ

ಕಠೋರ ಸತ್ಯ ಎಂದರೆ ಇದೇ !?

***

ಟಿ ಟ್ವೆಂಟಿ ಸರಣಿಗೆ ದ್ರಾವಿಡ್ ಲಭ್ಯ – ಕ್ರೀಡಾ ಸುದ್ದಿ

ಸ್ಥಿತಪ್ರಜ್ಞರಿಗೆ ಸಂದ ಮರ್ಯಾದೆ !!

ಶರಲೇಖನ ಪುನರಾಗಮನ

# ಲಕ್ಷನಾರ್ಮಾರ್ಜನೆ ಪ್ರಸಂಗ

**– ವತ್ಸನ**

ಹತ್ತಿರದ ಖಾಸಗೀ ಆಸ್ಪತ್ರೆಯೊಂದರಲ್ಲಿ ಹಲವು ರೋಗಿಗಳನ್ನು ನೋಡಿ ನಾನು ಫ್ಲಾಟಿಗೆ ಹಿಂತಿರುಗುವಷ್ಟರಲ್ಲಿ ಸಂಜೆ ಆರು ಘಂಟೆ ಆಗಿತ್ತು. ಶರಲೇಖ ಇನ್ನೂ ಮನೆಗೆ ಬಂದಿರಲಿಲ್ಲ. ಸರೋಜಮ್ಮ ತಮ್ಮ ಕೆಲಸ ಮುಗಿಸಿ ಹೊರಟು ಹೋಗಿದ್ದರು. ವಾಟ್ಸಪ್ ನೋಡಿದೆ. " ಕಾಫಿ ಫ್ಲಾಸ್ಕಿನಲ್ಲಿ ಇಟ್ಟಿದ್ದೇನೆ. ಫ್ರಿಜ್ ನಲ್ಲಿ ಶ್ಯಾವಿಗೆ ಭಾತ್ ಇದೆ" ಅಂತ ಸರೋಜಮ್ಮ ಮೇಸೇಜ್ ಬಿಟ್ಟಿದ್ದರು. ಕೈಕಾಲು ತೊಳೆದುಕೊಂಡು ಫ್ಲಾಸ್ಕಿನಲ್ಲಿದ್ದ ಕಾಫಿಯನ್ನು ಲೋಟಕ್ಕೆ ಬಗ್ಗಿಸಿಕೊಂಡು ಇನ್ನೇನು ತುಟಿಗಿಡಬೇಕು ಅನ್ನುವಷ್ಟರಲ್ಲಿ ಫೋನು ರಿಂಗಾಯಿತು. ಆ ಕಡೆಯಿಂದ ಗಿರಿ ಮಾತನಾಡುತ್ತಿದ್ದ. " ಶರಲೇಖನನ್ನ ನೋಡಬೇಕಾಗಿತ್ತು, ಇದಾರಾ?" ಅಂತ ಕೇಳಿದ ಗಿರಿ. " ಅವ ಇನ್ನೂ ಮನೆಗೆ ಬಂದಿಲ್ಲ. ಬಂದ ಮೇಲೆ ಫೋನ್ ಮಾಡುಕ್ಕೆ ಹೇಳ್ತೇನೆ. ಏನು ಸಮಾಚಾರ? ಅರ್ಜೆಂಟ್ ಏನೂ ಇಲ್ಲಾ ತಾನೆ?" ಅಂತ ವಿಚಾರಿಸಿದೆ. " ಅಂಥಾದ್ದೇನೂ ಇಲ್ಲ. ನಮ್ಮ ಚಿಕ್ಕಪ್ಪ ಮೆಹರ್ ಚಂದ್ ಬಗ್ಗೆ ಸ್ವಲ್ಪ ಮಾತಾಡೋದಿತ್ತು. ನೀವೆಲ್ಲಾ ಹುಷಾರಾಗಿದ್ದೀರಾ?' ಅಂತ ಕೇಳಿದ ಗಿರಿ. ಲೋಕಾಭಿರಾಮವಾಗಿ ಒಂದೆರಡು ಮಾತನಾಡಿ ಸಂಭಾಷಣೆ ಮುಗಿಸಿದೆ. ಗಿರಿಧಾರಿ ಲಾಲ್ ಸ್ಟೀಲ್ ವ್ಯಾಪಾರಿ. ದಶಕಗಳ ಹಿಂದೆ ಜಟಿಲ ಸಮಸ್ಯೆಯೊಂದಕ್ಕೆ ಶರಲೇಖ ಅವನಿಗೆ ನೆರವಾಗಿದ್ದ. ಅಂದು ಪ್ರಾರಂಭವಾದ ನಮ್ಮ ಪರಿಚಯ ಕ್ರಮೇಣ ಸ್ನೇಹಕ್ಕೆ ತಿರುಗಿತ್ತು.

ಶರಲೇಖ ಮನೆಗೆ ಹಿಂತಿರುಗಿದಾಗ ಗಿರಿಧಾರಿ ಫೋನ್ ಮಾಡಿದ್ದ ವಿಷಯವನ್ನು ಹೇಳಿದೆ. ತಕ್ಷಣ ಶರಲೇಖ ಅವನನ್ನು ಸಂಪರ್ಕಿಸಿ ಮಾರನೆಯ ಬೆಳಗ್ಗೆ ಬರುವಂತೆ ಹೇಳಿದ. ಮರುದಿನ ಗಿರಿಧಾರಿ ತನ್ನ ಚಿಕ್ಕಪ್ಪ ಮೆಹರ್ ಚಂದ್ ಅವರ ಜೊತೆ ನಮ್ಮಲ್ಲಿಗೆ ಬಂದ. ಬಿಳಿಯ ಕಚ್ಚೆ ಪಂಚೆ, ಬಿಳಿಯ ಜುಬ್ಬಾ ಧರಿಸಿದ್ದ ಮೆಹರ್ ಚಂದ್ ಬಹು ಸಾತ್ವಿಕರಂತೆ ಕಾಣುತ್ತಿದ್ದರು. ಗಿರಿಧಾರಿ ನೇರವಾಗಿ ಬಂದ ವಿಷಯವನ್ನು ತಿಳಿಸಲು ಪ್ರಾರಂಭಿಸಿದ.

"ಇವರೇ ಮೆಹರ್ ಚಂದ್. ನಮ್ಮ ತಂದೆಯ ತಮ್ಮ. ಚಿಕ್ಕ ಪೇಟೆಲಿ ಅವರು ಒಂದು ಕಾಗದ ಮಾರಾಟದ ಅಂಗಡಿ ನಡೆಸುತ್ತಿದ್ದಾರೆ. ಇತ್ತೀಚೆಗೆ ಹಲವು ವಿಚಿತ್ರ ಘಟನೆಗಳಲ್ಲಿ ಅವರು ಅಚಾನಕ್ಕಾಗಿ ಸಿಲುಕಿಕೊಂಡಿದ್ದಾರೆ. ಅವರಿಂದಲೇ ಆ ವಿವರಗಳನ್ನು ಕೇಳಿ " ಅಂತ ಹೇಳಿದ ಗಿರಿ. ಮೆಹರ್ ತಮ್ಮ ವಿವರಣೆ ಪ್ರಾರಂಭಿಸಿದರು.

"ಈ ಕಾಗದ ವ್ಯಾಪಾರದ ವಹಿವಾಟನ್ನು ಪ್ರಾರಂಭಿಸಿ ಹತ್ತು ವರ್ಷಗಳಾದವು. ಅದಕ್ಕೆ ಮುಂಚೆ ನಮ್ಮಣ್ಣನಂತೆ ನಾನೂ ಸ್ಟೀಲ್ ಟ್ರೇಡಿಂಗ್ ನಲ್ಲಿದ್ದೆ. ಮಕ್ಕಳ ವಿದ್ಯಾಭ್ಯಾಸ ಮುಗಿದ ನಂತರ ಆ ವ್ಯವಹಾರಾನ ನಾನು ಅವರಿಗೆ ವಹಿಸಿಕೊಟ್ಟೆ. ಏನೂ ಕೆಲಸವಿಲ್ಲದೇ ಮನೆಯಲ್ಲಿ ಕೂರುವುದು ನನಗೆ ಒಗ್ಗುವುದಿಲ್ಲ. ಅದಕ್ಕೆ ಒಂದು ಪುಟ್ಟ ಅಂಗಡಿ ನಡೆಸುತ್ತಿದ್ದೇನೆ. ಅನೇಕ ವರ್ಷಗಳ ಕಾಲ ಅಂಗಡಿಯಲ್ಲಿ ನಾನೊಬ್ಬನೇ. ಹಲವು ತಿಂಗಳುಗಳ ಹಿಂದೆ ಒಬ್ಬ ಯುವಕ ನನ್ನ ಬಳಿ ಕೆಲಸ ಕೇಳಲು ಬಂದ. ಸಿಂಧಿ ಹುಡುಗ. ಅವನ ಹೆಸರು ದೇವಾನಂದಾನಿ. ಚೂಟಿ ತರುಣನಂತೆ ಕಾಣುತ್ತಿದ್ದ.

ಅಂಗಡಿಯಲ್ಲಿ ಸಹಾಯ ಆಗುತ್ತೆ. ಜೊತೆ ಇದ್ದಹಾಗೂ ಆಗುತ್ತೆ ಅಂದುಕೊಂಡು ಅವನಿಗೆ ಕೆಲಸ ಕೊಟ್ಟೆ. ಎರಡು ತಿಂಗಳಿಂದ ಅವನು ನಮ್ಮ ಅಂಗಡಿಯಲ್ಲೇ ಕೆಲಸ ಮಾಡುತ್ತಿದ್ದಾನೆ. ತುಂಬಾ ಒಳ್ಳೇ ತರುಣ. ಕೊಟ್ಟಷ್ಟು ಸಂಬಳ ಸಾಕು. ನಿಮ್ಮ ಹತ್ತಿರ ಕೆಲಸ ಕಲಿಯ ಬೇಕು ಅಂತ ಹೇಳ್ತಾನೇ ಇರ್ತಾನೆ. ಅವನು ಕೆಲಸಕ್ಕೆ ಸೇರಿದ ಮಾರನೆಯ ದಿನ ಬೆಳಗಿನ ವಾಕಿಂಗಿನಲ್ಲಿ ಒಬ್ಬ ಹಿರಿಯರು ನನಗೆ ಪರಿಚಿತರಾದರು. ಎಷ್ಟು ಒಳ್ಳೆಯ ಜನ ಅಂತೀರಿ ಅವರು. ದೇವರು ಅಂದರೆ ಅತೀವ ಭಕ್ತಿ. ಅವರೊಂದಿಗೆ ನನ್ನ ಸ್ನೇಹ ಸಹಜವಾಗಿಯೇ ಬೆಳೆಯಿತು. ಅವರೂ ನನ್ನಂತೆಯೇ ವಿಧುರರು. ಒಮ್ಮೆ ಅವರು ನನ್ನ ಬಳಿ ಬಂದು, " ಮೆಹರ್ ನಿನ್ನಂದ ಒಂದು ಸಹಾಯ ಆಗಬೇಕು "ಅಂತ ಕೇಳಿದರು. " ಕೈಲಾಗೋದಾದ್ರೆ ಖಂಡಿತ ಮಾಡ್ತೇನೆ. ಏನು ಹೇಳಿ " ಅಂತ ಹೇಳಿದ ನಂತರ, ಅವರು, " ನನ್ನ ಹೆಂಡತಿ ತೀರಿಕೊಂಡು ಒಂದು ವರ್ಷವೇ ಆಗ್ತಾ ಬಂತು. ಈಚೆಗೆ ಒಂದು ತಿಂಗಳಿನಿಂದ ಅವಳು ನನ್ನ ಕನಸಿನಲ್ಲಿ ಬಂದು, " ನನಗೆ ಶಾಂತಿಯೇ ಇಲ್ಲ " ಅಂತ ಗೋಳಾಡುಕ್ಕೆ ಶುರುಮಾಡ್ತಾಳೆ. ಕನಸು ದಿನಾ ಬೀಳುಕ್ಕೆ ಶುರುವಾದಾಗ ನಾನು ನಮ್ಮ ಗುರುಗಳ ಹತ್ತಿರ ಹೋದೆ. ಅವರು ಜ್ಯೋತಿಷದಲ್ಲಿ ನಿಸ್ಸೀಮರು. ನನ್ನ ಹೆಂಡತಿಯ ಆತ್ಮಕ್ಕೆ ಶಾಂತಿ ದೊರಕಬೇಕಾದರೆ ಯಾರಾದರೊಬ್ಬ ದೈವಭಕ್ತರು ನಮ್ಮ ಮನೆಯ ದೇವರಮನೆಯಲ್ಲಿ ಕುಳಿತು ಲಕ್ಷನಾಮಾರ್ಚನೆ ಮಾಡಬೇಕು. " ಅಂತ ಹೇಳಿದರು. " ಲಕ್ಷನಾಮಾರ್ಚನೆ ಅಂದರೇನು? ಹೇಗೆ ಮಾಡೋದು ?' ಅಂತ ಕೇಳಿದೆ " ಗೋವಿಂದ ಮುಕುಂದ ಮುರಾರೇ" ಅಂತ ಒಂದು ಲಕ್ಷ ಬಾರಿ ಬರೆದು ಹಾಗೆ ಬರೆದ ಕಾಗದವನ್ನ ಸಂಗಮದಲ್ಲಿ ಅರ್ಪಿಸಬೇಕು " ಅಂತ ಹೇಳಿದರು. ನನಗೆ ಗೊತ್ತಿರುವ ದೈವಭಕ್ತರು ಅಂದರೆ ನೀವೇ. ಇದಕ್ಕೆ ಸಂಭಾವನೆಯ ರೂಪದಲ್ಲಿ ಹತ್ತು ಸಾವಿರ ರೂಪಾಯಿ ಕೊಡಲು ಸಿದ್ಧನಿದ್ದೇನೆ. ಯೋಚಿಸಿ ಹೇಳಿ" ಅಂತ ನನ್ನ ಮಿತ್ರರು ಹೇಳಿದರು. ನನಗೋ ಇಬ್ಬಂದಿ. ಪ್ರತಿ ದಿನ ಅವರ ಮನೆಯಲ್ಲಿ ವಾರಗಟ್ಟಲೆ ಕೂತಿದ್ದರೆ ಅಂಗಡಿಯ ಗತಿ ಏನು? ಎಂಬ ಚಿಂತೆ ಕಾಡಿತು. ಆಗ ದೇವಾನಂದಾನಿ ಒಂದು ಸಲಹೆ ಮಾಡಿದ. ಮಧ್ಯಾಹ್ನ ಊಟವಾದ ನಂತರ ಆವರ ಮನೆಗೆ ಹೋಗಿ ಸಂಜೆಯವರೆಗೂ ಇದ್ದು ನಾಮಾರ್ಚನೆ ಬರೆಯುವುದು. ಆ ವೇಳೆಯಲ್ಲಿ ಅಂಗಡಿಯ ವ್ಯವಹಾರವನ್ನ ತಾನೇ ನೋಡಿಕೊಳ್ಳುತ್ತೇನೆ ಅಂತ ಅವನು ಸಲಹೆ ನೀಡಿದ. ನನಗೂ ಅದು ಸರಿ ಅನ್ನಿಸಿತು. ಹಾಗಾಗಿ ಕಳೆದ ತಿಂಗಳು ಹತ್ತನೆಯ ತಾರಿಖಿನಿಂದ ಬರೆಯಲು ಪ್ರಾರಂಭಿಸಿದೆ." ಇಷ್ಟು ಹೇಳಿ ಮೆಹರ್ ತಮ್ಮ ಮಾತು ನಿಲ್ಲಿಸಿ, ಪಕ್ಕದ ಮೇಡಿನ ಮೇಲಿದ್ದ ಲೋಟದಿಂದ ಒಂದು ಗುಟುಕು ನೀರನ್ನು ಕುಡಿದರು.

"ಅವರ ಮನೆ ಎಲ್ಲದೆ?" ಅಂತ ಶರಲೇಖ ಕೇಳಿದ.

" ಗೊರಗುಂಟೇ ಪಾಳ್ಯದಲ್ಲಿ. ಪುಟ್ಟ ಬಾಡಿಗೆ ಮನೆ ಅದು. ಹೆಂಡತಿಯನ್ನು ಕಳೆದುಕೊಂಡ ಮೇಲೆ ಆತನಿಗೆ ತೀರ ವೈರಾಗ್ಯ. ದೇವರ ಮನೆಯಲ್ಲಿ ಹಲವು ದೇವರುಗಳ ಚಿತ್ರಗಳು. ಅವನ ಮಲಗುವ ಕೊಠಡಿಯಲ್ಲಿ ಒಂದು ಹಾಸಿಗೆ ಮತ್ತು ಹಲವು ಪರಿಕರಗಳು. ಇವಿಷ್ಟೇ ಅವನ ಆಸ್ತಿ. ನಿನ್ನೆ ಬೆಳಗ್ಗೆ ಎಂದಿನಂತೆ ಅವರ ಮನೆಗೆ ಹೋದಾಗ ಬಾಗಿಲಿಗೆ ಬೀಗ ಹಾಕಿತ್ತು. ಪಕ್ಕದ ಮನೆಯಲ್ಲಿ ವಿಚಾರಿಸಿದಾಗ ಹಿಂದಿನ ರಾತ್ರಿ ಯಾರೋ ಬಂದು ಒಂದು ಆಟೋವಿನಲ್ಲಿ ಹಲವು ಸಾಮಾನುಗಳನ್ನು ತುಂಬಿಕೊಂಡು ಮನೆಗೆ ಬೀಗ ಹಾಕಿಕೊಂಡು ಹೋದರು ಅಂತ ಹೇಳಿದರು.

ನನಗೆ ಹೆದರಿಕೆ ಶುರುವಾಯಿತು. ಮುಖ್ಯವಾಗಿ ಆ ಮನುಷ್ಯನಿಗೆ ಏನಾದರೂ ಅಪಾಯವಾಗಿರಬಹುದೇನೋ ಎಂಬ ಭಯ. ಏನೇ ಆಗಿರಲಿ ಇದನ್ನೆಲ್ಲಾ ಯಾರಿಗಾದರೂ ತಿಳಿಸೋದು ವಾಸಿ ಅಂದುಕೊಂಡು ಗಿರಿಗೆ ಫೋನ್ ಮಾಡಿದೆ. ಈಗ ಇಲ್ಲಿ ಬಂದಿದ್ದೇವೆ" ಎಂದು ಮೆಹರ್ ತಮ್ಮ ವೃತ್ತಾಂತವನ್ನು ಮುಗಿಸಿದರು.

" ಈಗ ಅಂಗಡಿಯಲ್ಲಿ ಯಾರಿದ್ದಾರೆ?" ಶರಲೇಖ ಕೇಳಿದ. " ಇವತ್ತು ಭಾನುವಾರ. ಅಂಗಡಿಗೆ ರಜಾ." ಎಂದು ಮೆಹರ್ ಉತ್ತರಿಸಿದರು.

ಶರಲೇಖ ಎರಡು ನಿಮಿಷ ಸುಮ್ಮನಿದ್ದು ಅನಂತರ " ದೇವಾನಂದಾನಿ ಫೋಟೋ ಸಿಗಬಹುದೇ?" ಅಂತ ಕೇಳಿದ. ಮೆಹರ್ " ಕಳೆದ ತಿಂಗಳು ಅಂಗಡೀಲಿ ಪೂಜೆ ಇಟ್ಟುಕೊಂಡಿದ್ದಾಗ ತೆಗೆದ ಫೋಟೋ ಇರಬಹುದು. ಅದನ್ನ ನಿಮಗೆ ವಾಟ್ಸಪ್ ನಲ್ಲಿ ಕಳಿಸುವೆ. " ಎಂದು ಉತ್ತರಿಸಿದರು. ಅನಂತರ ಶರಲೇಖ " ಹಾಗೆಯೇ ನಿಮ್ಮ ಅಂಗಡಿಯ ಲೊಕೇಷನ್ ಸಹಾ ವಾಟ್ಸಪ್‌ನಲ್ಲಿ ಕಳಿಸಿಬಿಡಿ. ಇನ್ನು ನೀವು ಹೊರಡಬಹುದು. ಇನ್ನೇನಾದರೂ ಮಾಹಿತಿ ಬೇಕಾದರೆ ಗಿರಿಧರನಿಗೆ ತಿಳಿಸುವೆ" ಎಂದನಂತರ ಅವರಿಬ್ಬರೂ ಹೊರಟರು. ಶರಲೇಖ ಗಾಢವಾದ ಚಿಂತೆಯಲ್ಲಿದ್ದಂತೆ ಕಂಡಿತು. " ಇನ್ನು ಅರ್ಧ ಘಂಟೆಯಲ್ಲಿ ಚಿಕ್ಕಪೇಟೆಯಲ್ಲಿರುವ ಮೆಹರ್ ಪೇಪರ್ ಮಾರ್ಟ್ ಗೆ ಹೋಗಬೇಕು. ರೆಡಿಯಾಗಿರು " ಎಂದು ಹೇಳಿ ಫೋನ್ ಕಾಲ್ ಗಳನ್ನು ಮಾಡಲು ತೊಡಗಿದ.

ಓಲಾ ಕ್ಯಾಬ್ ಒಂದನ್ನು ಹತ್ತಿ ಚಿಕ್ಕ ಪೇಟೆ ಸೇರಿದಾಗ ಘಂಟೆ ಹನ್ನೆರಡಾಗಿತ್ತು. ಬೆಳ್ಳಿ ಬಸವಣ್ಣ ರಸ್ತೆಯಲ್ಲಿ ಮೆಹರ್ ಪೇಪರ್ ಮಾರ್ಟ್ ಇತ್ತು. ಅದರ ಮುಂದೆ ಶರಲೇಖ ಸ್ವಲ್ಪ ಠಳಾಯಿಸಿ ಅನಂತರ ಅಂಗಡಿಯ ಪಕ್ಕದ ಓಣಿ ಯಲ್ಲಿ ನಡೆದು ಮುಂದಿನ ಅಡ್ಡ ರಸ್ತೆಯಲ್ಲಿ ಎಡಕ್ಕೆ ತಿರುಗಿದ. ಸ್ವಲ್ಪ ದೂರ ನಡೆದ ನಂತರ ಎಡಭಾಗದಲ್ಲಿದ್ದ ಅಂಗಡಿಯ ಮುಂದೆ ನಿಂತ ಶರಲೇಖ. ಭಾನುವಾರವಾದ್ದರಿಂದ ಅಂಗಡಿ ಮುಚ್ಚಿತ್ತು. ಅಂಗಡಿಯ ಮುಂದೆ ವಿಜಯಲಕ್ಷ್ಮಿ ಜಿವೆಲ್ಲರ್ಸ್ ಎಂಬ ಫಲಕ ಕಂಡುಬಂತು. ಅಲ್ಲಿಂದ ನಾವಿಬ್ಬರೂ ನೇರವಾಗಿ ಉಪ್ಪಾರಪೇಟೆ ಪೋಲೀಸ್ ಸ್ಟೇಷನ್ನಿಗೆ ಹೋದೆವು. ಅಲ್ಲಿ ಇನ್ಸ್‌ಪೆಕ್ಟರ್ ಭುವನ್ ನಮಗಾಗಿ ಕಾಯುತ್ತಿದ್ದರು. ಶರಲೇಖ ಅವನಿಗೆ ಮುಂಚಿತವಾಗಿಯೇ ಫೋನ್ ಮಾಡಿದ್ದ. ಭುವನ್ ನಮ್ಮ ಹಳೆಯ ಪರಿಚಯ. ಎಲ್ಲರೂ ಭುವನ್ ಅಫೀಸಿನಲ್ಲಿ ಕುಳಿತನಂತರ ಶರಲೇಖ ಭುವನ್ ಗೆ ಮೆಹರ್ ಹೇಳಿದ್ದನ್ನೆಲ್ಲಾ ಸವಿವರವಾಗಿ ಹೇಳಿ " ದೇವಾನಂದಾನಿ ಫೋಟೋ ನೋಡಿದಾಕ್ಷಣ ಅವನು ಕುಖ್ಯಾತ ರೌಡಿ ಕುಬೇರ್ ಸಿಂಗ್ ಅಂತ ತಿಳಿಯಿತು. ಈ ದೇವಾನಂದಾನಿ ಮೆಹರ್ ನ ನಂಬಿಕೆ ಗಳಿಸಿ ತಾನೇ ಅವರ ಅಂಗಡಿಯಲ್ಲಿ ಬಹುಕಾಲ ಕಳೆಯಲು ಸಾಧ್ಯವಾಗುವಂತೆ ಮಾಡಿಕೊಂಡಿದ್ದ. ಇದಕ್ಕೆ ಮುಖ್ಯ ಕಾರಣ ಇವರ ಕಾಗದದ ಅಂಗಡಿಯ ಹಿಂದಿನ ಗೋಡೆಗೆ ಅಂಟಿಕೊಂಡಂತೆ ವಿಜಯಲಕ್ಷ್ಮಿ ಜಿವೆಲ್ಲರ್ಸ್ ಇದೆ. ಈ ಕಾಗದ ಮಾರಾಟದ ಅಂಗಡಿಯಿಂದ ಒಡವೆ ಅಂಗಡಿಗೆ ಸುರಂಗವೊಂದನ್ನು ಕೊರೆದು ಅದರ ಮೂಲಕ ಭಾರಿ ಕಳ್ಳತನ ನಡೆಸುವ ಹಂಚಿಕೆ ಅವನದ್ದು. ನೀನು ತಕ್ಷಣವೇ ವಿಜಯಲಕ್ಷ್ಮಿ ಜಿವೆಲ್ಲರ್ಸ್ ಮಾಲಿಕರನ್ನ ಸಂಪರ್ಕಿಸಿ ಪರಿಸ್ಥಿತಿಯನ್ನು ಅವರಿಗೆ ತಿಳಿಸಬೇಕು. ಮೆಹರ್‌ನನ್ನು ಅಂಗಡಿಯಿಂದ ದೂರವಿಡಲು ಆಯೋಜಿಸಿದ್ದ ಲಕ್ಷ ನಾಮಾರ್ಚನೆಯನ್ನ ಹಠಾತ್ತನೆ ನಿಲ್ಲಿಸಿರುವುದನ್ನು ನೋಡಿದರೆ ಇವತ್ತು ರಾತ್ರಿಯೇ

ಪೇಪರ್ ಮಾರ್ಟ್ ನಿಂದ ಒಡವೆ ಅಂಗಡಿಗೆ ನಿರ್ಮಿಸಿರುವ ಸುರಂಗದ ಮೂಲಕ ಕಳ್ಳತನದ ಪ್ರಯತ್ನ ನಡೆಯುವ ಸಾಧ್ಯತೆ ಇದೆ. ಇವತ್ತು ಸಂಜೆ ಎಂಟು ಘಂಟೆಯ ಹೊತ್ತಿಗೆ ನಾವು ಆ ಒಡವೆ ಅಂಗಡಿಯಲ್ಲಿ ಹೊಂಚು ಕುಳಿತು ಆ ಕಳ್ಳರನ್ನು ಕೃತ್ಯನಡೆಸುತ್ತಿರುವಾಗಲೇ ಹಿಡಿದರೆ ಒಂದು ದೊಡ್ಡ ತಿಮಿಂಗಿಲವನ್ನು ಬಲೆಗೆ ಬೀಳಿಸಬಹುದು." ಎಂದು ಹೇಳಿದ ಶರಲೇಖ.

ಸಂಜೆ ಎಂಟು ಘಟೆಯ ಹೊತ್ತಿಗೆ ಭುವನ್ ಬಂದು ನಮ್ಮಿಬ್ಬರನ್ನು ವಿಜಯಲಕ್ಷ್ಮಿ ಜಿವೆಲ್ಲರ್ಸ್ ಗೆ ಕರೆದೊಯ್ದ. ಯಾರಿಗೂ ಸಂಶಯ ಬರದಂತೆ ಅಂಗಡಿಗೆ ಅರ್ಧ ಕಿಲೋಮೀಟರ್ ದೂರದಲ್ಲಿಯೇ ಪೋಲೀಸ್ ಜೀಪನ್ನು ನಿಲ್ಲಿಸಿ ಒಬ್ಬೊಬ್ಬರಾಗಿ ನಡೆದು ಅಂಗಡಿ ಸೇರಿದೆವು. ಅಂಗಡಿಯ ಮಾಲಿಕ ಪ್ರೇಮನಾಥ್ ನಮಗಾಗಿ ಕಾಯುತ್ತಿದ್ದರು. ಅಂಗಡಿಯ ಹಿಂದಿನ ಗೋಡೆಗೆ ಅಂಟಿದಂತಿದ್ದ ತಿಜೋರಿ ಕೊಠಡಿಯಲ್ಲಿ ಕೋಟ್ಯಾಂತರ ರೂಪಾಯಿ ಬೆಲೆಯ ಒಡವೆಗಳು ತುಂಬಿದ್ದವು. ಶರಲೇಖ ಎಲ್ಲರನ್ನು ಒಂದು ಪಕ್ಕದಲ್ಲಿ ಸದ್ದಿಲ್ಲದೆ ಕೂರುವಂತೆ ಆಜ್ಞೆ ಮಾಡಿದ. ರಾತ್ರಿ ಸುಮಾರು ಒಂದು ಘಂಟೆಯ ಹೊತ್ತಿಗೆ ಗೋಡೆಯ ಆಚೆಯಿಂದ ಗುದ್ದಲಿ ಪಿಕಾಸಿ ಶಬ್ದ ಕೇಳಿಸಿತು. ಭುವನ್ ತನ್ನ ರಿವಾಲ್ವರ್ ಸಿದ್ಧಪಡಿಸಿಕೊಂಡ. ಸ್ವಲ್ಪ ಹೊತ್ತಿನಲ್ಲೇ ಗೋಡೆಯಲ್ಲಿ ಒಂದು ಕನ್ನ ಮೂಡಿತು. ಅದು ಒಬ್ಬ ಮನುಷ್ಯ ತೂರುವಷ್ಟು ಅಗಲವಾದ ತಕ್ಷಣ ಒಬ್ಬ ವ್ಯಕ್ತಿ ಅದನ್ನ ತೂರಿ ಒಳಕ್ಕೆ ಬಂದು ನಮ್ಮ ಮುಂದೆ ನಿಂತ. ಶರಲೇಖ ತನ್ನ ಕೈಲಿದ್ದ ಬೃಹತ್ ಟಾರ್ಚನ್ನು ಅವನ ಮುಖದ ಮೇಲೆ ಬೆಳಗುವಷ್ಟರಲ್ಲಿ ಭುವನ್ ಅವನ ಕೈಗಳಿಗೆ ಬೇಡಿ ತೊಡಿಸಿದ್ದ. ಕುಬೇರ್ ಸಿಂಗ್ ಯಾನಿ ದೇವಾನಂದಾನಿ "ಬೇಗ ಓಡಿ ಹೋಗು" ಅಂತ ಗೋಡೆಯಾಚೆ ಇದ್ದ ತನ್ನ ಗೊರಗುಂಟೇ ಸಹಚರನಿಗೆ ಕೂಗಿ ಹೇಳಿದ. ನಾನು ಭುವನ್ ಕಡೆ ಗಾಬರಿಯಿಂದ ನೋಡಿದೆ. ಅವನು ನಸುನಕ್ಕು " ಅವನೇನೂ ಬಹು ದೂರ ಹೋಗಲಾರ. ನಮ್ಮ ಸ್ವಾಗತ ಸಮಿತಿ ಅವನಿಗಾಗಿ ಕಾಯುತ್ತಿದೆ " ಎಂದ.

ಮಾರನೆಯ ದಿನ ಇನ್ಸ್‌ಪೆಕ್ಟರ್ ಭುವನ್ ಜೊತೆ ನಾವೆಲ್ಲಾ ಮೆಹರ್‌ನ ಅಂಗಡಿಗೆ ಹೋದೆವು. ಗಿರಿಧಾರಿ ಮತ್ತು ಪ್ರೇಮನಾಥ್ ಸಹಾ ನಮ್ಮೊಂದಿಗಿದ್ದರು. ಅಂಗಡಿಯಲ್ಲಿ ಹಿಂಭಾಗದ ನೆಲದಲ್ಲಿ ಒಂದು ಸುರಂಗವನ್ನು ಕೊರೆದಿತ್ತು. ಟಾರ್ಚ್ ಬೆಳಕಿನಲ್ಲಿ ನಾವೆಲ್ಲಾ ಒಬ್ಬೊಬ್ಬರಾಗಿ ಸುರಂಗದಲ್ಲಿ ಇಳಿದೆವು. ಹತ್ತು ಅಡಿ ನಡೆದ ನಂತರ ಮೇಲಕ್ಕೆ ಹೋಗಲು ಮೆಟ್ಟಲುಗಳು ಕಾಣಿಸಿದವು. ಹತ್ತಿ ಮೇಲೆ ಬಂದಾಗ ಒಡವೆ ಅಂಗಡಿಯ ಹಿಂಭಾಗದ ಗೋಡೌನನನ್ನು ಸೇರಿದೆವು. ಅದರ ಗೋಡೆಯಲ್ಲಿ ನಿನ್ನೆ ರಾತ್ರಿ ಕೊರೆದ ಕನ್ನ ಸ್ಪಷ್ಟವಾಗಿ ಕಾಣುತ್ತಿತ್ತು. ಭುವನ್ ಎಲ್ಲದರ ಫೋಟೋ ಕ್ಲಿಕ್ಕಿಸಿದ ನಂತರ ನಾವೆಲ್ಲಾ ಹೊರಬಂದು ಮೆಹರ್ ಅಂಗಡಿಯಲ್ಲೇ ಕುಳಿತೆವು. ಶರಲೇಖ ಎಂದಿನಂತೆ ತನ್ನ ವಿವರಣೆ ಪ್ರಾರಂಭಿಸಿದ.

" ಮೆಹರ್ ದೇವಾನಂದಾನಿಯನ್ನು ನೇಮಿಸಿಕೊಂಡ ಮಾರನೆಯ ದಿನವೇ ಇವರಿಗೆ ಆ ಲಕ್ಷನಾಮಾರ್ಚನೆ ಮಿತ್ರರು ಸಿಕ್ಕಿದ್ದು ಕಾಕತಾಳೀಯ ಅಂದುಕೊಂಡೆ. ಆದರೆ ದೇವಾನಂದಾನಿ ಅರ್ಧದಿನ ಅವರ ಅಂಗಡಿಯಲ್ಲೇ ಇದ್ದು ಅಂಗಡಿ ನೋಡಿಕೊಳ್ಳುವ ಔದಾರ್ಯತೆ ತೋರಿದಾಗ ಇದರಲ್ಲೇನೋ ಕೃತ್ರಿಮ ಇದೆ ಎಂಬುದು ಖಂಡಿತವಾಯಿತು. ದೇವಾನಂದಾನಿ ಫೋಟೋ ನೋಡಿ ಅವನು ಕುಬೇರ್ ಸಿಂಗ್

ಅಂತ ಗೊತ್ತಾದ ಮೇಲೆ ಅವನು ಯಾವುದೋ ಒಂದು ದೊಡ್ಡ ಕಳ್ಳತನ ಪ್ಲಾನ್ ಮಾಡಿದ್ದಾನೆ ಎಂಬುದು ಖಂಡಿತವಾಯಿತು. ನಿನ್ನೆ ಅಂಗಡಿಯ ಬಳಿ ಸ್ಪಾಟ್ ಇನ್ಸ್‌ಪೆಕ್ಷನ್‌ಗೆ ಹೋದಾಗ ಇವರ ಅಂಗಡಿಯ ಹಿಂಭಾಗದ ಗೋಡೆಗೆ ಅಂಟಿಕೊಂಡಂತೆ ವಿಜಯಲಕ್ಷ್ಮಿ ಜಿವೆಲ್ಲರ್ಸ್ ಇರುವುದನ್ನು ಗುರುತಿಸಿದೆ.

ನಿನ್ನೆ ಹಠಾತ್ತಾಗಿ ಇವನ ಸಹಚರ ಗೊರಗುಂಟೇ ಪಾಳ್ಯದಿಂದ ಮನೆ ಖಾಲಿಮಾಡಿದ್ದು ತಿಳಿದಾಗ, ಹಾಗೂ ನಿನ್ನೆ ಭಾನುವಾರವಾಗಿರುವುದರಿಂದ ಇವತ್ತೇ ಅವರು ತಮ್ಮ ಪ್ರಾಜೆಕ್ಟ್ ನ ಕಾರ್ಯರೂಪಕ್ಕೆ ತರುವುದು ಖಾತರಿಯಾಯಿತು. ಹಾಗಾಗಿ ಭುವನ್ ಗೆ ಎಲ್ಲ ತಿಳಿಸಿ ಒಂದು ದೊಡ್ಡ ಅಪರಾಧವನ್ನು ತಡೆಯುವುದು ಸಾಧ್ಯವಾಯಿತು." ಎಂದು ಶರಲೇಖ ವಿವರಿಸಿದ.

" ಲಕ್ಷನಾಮಾರ್ಚನೆಯ ಕಾಗದದಲ್ಲಿ ನಲವತ್ತೆಂಟು ಸಾವಿರ ಮಾತ್ರ ಮುಗಿದಿದೆ. ಅದನ್ನ ಏನು ಮಾಡಲಿ?" ಅಂತ ಮೆಹರ್ ಕೇಳಿದರು.

" ಏನೂ ಯೋಚನೆ ಬೇಡ ಚಿಕ್ಕಪ್ಪಾ, ಈ ಶನಿವಾರ ಹೇಗೂ ಮೈಸೂರಿಗೆ ಹೋಗೋದಿದೆ. ನೀನೂ ಬಾ. ಅದನ್ನ ಸಂಗಮದಲ್ಲಿ ಹಾಕಿಬಿಡೋಣ. " ಎಂದು ಉತ್ತರಿಸಿದ ಗಿರಿಧಾರಿ.

ಲಕ್ಷ್ಮಣ್ ಕೊರವಂಜಿ

**ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.**

**ಅವುಗಳಲ್ಲಿ ಇದೂ ಒಂದು – ನಿಮಗಾಗಿ.**



ಕಾಲ ಬಳಿಯಲ್ಲಿರುವ ಬಾಳೇಹಣ್ಣಿನ ಸಿಪ್ಪೆಯನ್ನು ಕಾಣದೆ –
**"ಮುಂದೇನು ಬರುವುದೆಂದು ಯಾರಿಗೆ ಈ ಕಾಲದಲ್ಲಿ ಹೇಳುವುದಕ್ಕೆ ಸಾಧ್ಯ ಸ್ವಾಮೀ?**

# ದೃಶ್ಯಗಳು...

**– ಜಯಶ್ರೀ ದೇಶಪಾಂಡೆ**

**ದೃಶ್ಯ ಒಂದು.**

(ಒಂದು ಸಾಹಿತ್ಯದ ಕಾರ್ಯಕ್ರಮ)

'ಓ..ಮ್ಯಾಡಮ್  ನಿಲ್ಲಿ ನಿಲ್ಲಿ, ಅಯ್ಯೋ ಎಷ್ಟ್ ದಿನಕ್ಕೆ ಸಿಕ್ರಲ್ಲಾ. ಅಬ್ಬಾ ನಂಗೆಷ್ಟು ಖುಶಿ ನೋಡಿ. ಹೇಗಿದ್ದೀರಿ?'

(ಮಿಕಮಿಕ ನೋಡೋದು ಸರಿ ಅಲ್ಲ ಅಲ್ವಾ...ದೃಷ್ಟಿ ಕಂಟ್ರೋಲ್ ಮಾಡಿದೆ)

'????.....'ನಾನು.

'ರೀ ನನ್ ಗುರ್ತು ಸಿಕ್ತು ತಾನೇ??'

(ಸಿಕ್ಕಿಲ್ಲ ..ಸಿಗ್ತಾ ಇಲ್ಲ,  ಆದರೆ ಹಾಗಂತ ಹೇಳಬಾರ್ದಲ್ಲ, ಅಸೌಜನ್ಯ.)

'ಹಾಂ..ಹಾಂ..ಹುಂ...ಹ ಹ...'

"ಅದೇ ಸಾವಿರದೊಂಬೈನೂರಾ ತೊಂಬತ್ತೈದರ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಸಿಕ್ಕಿರಲಿಲ್ವಾ ನಾವೂ ನೀವೂ?"

ಇಲ್ಲ ಖಂಡಿತ ನೆನಪಾಗ್ತಿಲ್ಲ. (ಹೇಳಲು ಸೌಜನ್ಯ ಅಡ್ಡಬರೋದು ಮಾಮೂಲಿ ಅಲ್ವಾ?)

"ಓ.ಅದಾ..ಹಾಂ,ಹೌದೌದು.."

"ಮತ್ತೆ ಆವಾಗ ನಾವಿಬ್ರೂ ಭೋಜನ ಪೆಂಡಾಲ್ನಲ್ಲಿ ವಡೆ ಸಾಂಬಾರ್ ತಿಂತಾ ಇದ್ವಲ್ಲ  ಬೆಳಿಗ್ಗೆ...ಆಗ ನಿಮ್ಮ ಸೀರೆ ಮೇಲೆ ನಾನು ಕೈತಪ್ಪಿ ಸಾಂಬಾರ್ ಚೆಲ್ಲಿ ಬಿಟ್ಟೆ ಅಲ್ವಾ?ನೆನಪಿದೆಯಾ? ಹೆ ಹೆ ಹೆ.."

"ಅರೆ..ಹೌದಲ್ಲಾ...ಏನ್ ಭಾರಿ ನೆನಪು ಕಣಮ್ಮಾ ನಿಮ್ದು..."

''ನಾನಿರೋದೆ ಹಾಗೆರೀ ನಂದೊಂಥರಾ ಕಂಪ್ಯೂಟರ್ ಬ್ರೇನು. ಹಹಹ..ಅಂಥಾಗೆ ಅದೇ ಅವೊತ್ತು ನಿಮ್ ಬೆಳ್ಳಗಿನ ಸೀರೆ ಸಾಂಬಾರ್ ಕಲೆ ಆಯ್ತಲ್ಲ ಕೆಂಪು ಕೆಂಪಗೆ..ಅದು ಹೋಯ್ತಾ? ಹಿ ಹಿ."

"ಕಲೇನಾ ಸೀರೇನಾ?"

"ಏನ್ರೀ ತಮಾಷೆ ಮಾಡ್ತೀರಾ? ಕಲೆ ಕಣ್ರೀ..ಏನು ದಟ್ಟ ಬಿದ್ದಿತ್ತಲ್ಲಾ..ಒಳ್ಳೇ..ಕೆಂ..."

(ಎಲ್ಲಿಂದ ಗಂಟು ಬಿದ್ಲಪ್ಪ ಇವಳು...)

"ಹೂಂ ಹೋಯ್ತು  ಹೋಗೇಬಿಟ್ತು.. ನಾ ಬರಲೇ? ಕೆಲಸ ಇದೆ.."

"ಅಯ್ಯೋ ಅಷ್ಯಾಕೆ ಅರ್ಜಂಟ್ ಮಾಡ್ತೀರಿ? ಅಂಥಂಗೆ ರೀ, ಅವರೊಬ್ರು ನಿಮ್ಜೊತೆ ನೀಲಿ ರೇಷ್ಮೆ ಉಟ್ಟು ಬಂದಿದ್ರಲ್ಲ.ಅದೇ ಅವೊತ್ತು  ವಯರೋ ಏನೋ ಎಡವಿಕೊಂಡು ಅಲ್ಲಿ ವೇದಿಕೆ ಹತ್ರ  ಧಡಾರಂತ ಉರುಳಿ ಬಿದ್ರಲ್ಲ? ಅವ್ರು ಹೇಗೆ?

ಚನ್ನಾಗಿದ್ದಾರಾ? ನಿಮ್ತಂಗೀನಾ ಅವ್ರು?"

"..........."

(ನಮ್ಮಮ್ಮ ಇನ್ನೂ ನನಗೊಂದು ತಂಗಿ ಹೆತ್ತಿಲ್ಲ ಕಣೇ.. ಮುಂದಿನ ಜನ್ಮಕ್ಕೆ ಪೋಸ್ಟ್ ಪೋನ್ ಅಂತೆ??)

"ಹ್ಹ..ಹ್ಹ..ಹ..ಹೂಂ ಅವ್ರು ಚೆನ್ನಾಗಿದ್ದಾರೆ. ಬರ್ಲಾ?"

"ಅಯ್ಯೋ ..ಯಾಕೆ ಹೊಂಟುಬಿಟ್ರಲ್ಲ. ಹೊಸ್ತು ಏನ್ ಬರೆದ್ರಿ. ಅದೇ ಒಕ್ಕಲಿಗರ ಬೆಳೆ–ಕೊಳೆ ಬಗ್ಗೆ ಮತ್ತೆ ರಸಗೊಬ್ಬರ...ಅಂಥಂಗೆ ರೇಷ್ಮೆ ಹುಳದ ಬಗ್ಗೆ ಬರೀತೀರಲ್ವ ನೀವು?? ಇತ್ತೀಚೆಗೆ ಹೊಸ್ತು ಏನು ಬರದ್ರಿ. ನಾನಂತೂ ನಿಮ್ಮ ಲೇಖನ ತಪ್ಪದೆ ಓದ್ತೀನಿ. ಯಾಕಂದರೆ ನಂಗೆ ರೇಷ್ಮೆ ಸೀರೆ ಅಂದ್ರೆ ಪ್ರಾಣ ಕಣ್ರೀ."

"ಛೆ..ಛೆ..ಅದೆಲ್ಲಾ ನಾನು ಬರೆಯಲ್ಲ. ನಾನು ಕತೆ,ಕಾದಂಬರಿ ಕವನ..."

"ಅಯ್ಯೋ ನೀವು ತ್ರಿಪುರಸುಂದರಿ ಅಲ್ವೇನ್ರೀ...ಹಾಗಾದ್ರೆ?"

"ಅಲ್ಲಮ್ಮಾ ನಾನು ..."

"ಛೆ..ಛೆ.. ಸುಮಸುಮ್ನೆ ಟೈಂ ವೇಸ್ಟ್ ಮಾಡ್ಸಿದ್ರಲ್ಲ ಥೀ ಏನ್ ಜನವಪ್ಪಾ..? ಮೊದಲೇ ಹೇಳೋಕ್ಕೇನು ಧಾಡಿ." ಬುಸುಗುಟ್ಟಿ ಧಡಾ ಧಡಾ ಬಾಗಿಲಿಗೋಡಿದಳು. ಯಾಕೆ ಗೊತ್ತೇ? ಲಂಚ್ ಬ್ರೇಕ್.

ಬುಸುಗುಡುವುದು ಸರ್ಪ ಮಾತ್ರ ಅಲ್ಲ, ಮನುಷ್ಯರೂ!

ಅವಳಿಗೆ ಇಷ್ಟು ಕೆಂಡಾಮಂಡಲ ಯಾಕೆ ಬಂತೋ?

ಬಂದ್ರೆ ಬರ್ಲಿ ಬಿಡಿ, ಯಾರೇನು ಮಾಡಕ್ಕಾಗುತ್ತೆ? ??

***

**ದೃಶ್ಯ ಎರಡು.**

(ಕಲ್ಯಾಣಮಂಟಪ)

ಮದುವೆ ಮನೆ...ನಿಮಗಲ್ಲಿ ಬಲು ಇಂಪಾರ್ಟೆಂಟ್ ಅಂತ ಅಂದುಕೊಂಡಿರುವ ಏನೋ ಒಂದು ಕಾರ್ಯ ಇರುತ್ತೆ, ಅದನ್ನು ಮಾಡಹೊರಟು ಆ ಕಡೆ ಕೂತಿರುವ, ಅದಕ್ಕೆ ಬೇಕಾಗಿರುವವರತ್ತ ನಡೆಯುತ್ತಿರುವಾಗ ಬಾದರಾಯಣ ಸಂಬಂಧದ ಒಬ್ಬಾಕೆ ನಡುದಾರಿಯಲ್ಲಿ ತರುಬಿ ಅವರ ಪತಿಯ ಅಕ್ಕನ ಮಗಳ ಅತ್ತೆಯ ಹಳೆಯ ಕಾಯಿಲೆಯ ಸುದೀರ್ಘ ವಿವರಣೆಯೊಂದಿಗೆ ತಮ್ಮದೂ ಯಾವುದೋ ಕಾಯಿಲೆಯ ವೈದ್ಯಕೀಯ ಕಷ್ಟಗಳ ವಿವರಗಳನ್ನು ಚರ್ಚಿಸತೊಡಗುತ್ತಾಳೆ...

"ಭಾಮಾತ್ಯಾಗೆ ಇನ್ನೂ ಆರಾಮಾಗಿಲ್ರೀ.."

ಮೊದಲ್ನೇ ಸಲ ಕೇಳಿದ ಹೆಸರಿದು ಅಂತ ಅನಿಸಿದ್ದು ಖರೆ.

"ಯಾವ ಭಾಮಾತ್ಯಾ.." ನಾಲಿಗೆ ಕಚ್ಕೊಂಡು ಮಾತು ತಡೆಯೋವಷ್ಟರಲ್ಲಿ ನಾಲಿಗೆ ಕೆಲಸ ಮುಗಿಸಿರುತ್ತೆ.

" ಅಯ್ಯೋ ಹಿಂಗ್ಯಾಕ್ರೀ? ಮೂರು ವರ್ಷಾತಲ್ರೀ ಅಕಿ ಹಾಸಿಗೀ ಹಿಡಿದು ಮಲಗೀ"

ಇದೂ ನೆನಪಿಲ್ಲದಿರೋದು ನಿಮ್ದೇ ತಪ್ಪು!

"ಹಾಂ..ಹೌದೌದು ಯಾರೊ ಹೇಳಿದಂಗಿತ್ತು."

"ಯಾರೋ ಯಾಕ್ರೀ ನಮ್ಮ ಅಕ್ಕನೇ ಹೇಳಿಲ್ಲೇನು? ಎಲ್ಲಾರಿಗೂ?"

"ಹೌದಲ್ಲಾ.. ಛೇಛೇ. ಇನ್ನೂ ಯಾಕ ಅರಾಮಾಗಿಲ್ಲೋ?"

"ಪಾಪೀ ಚಿರಾಯು ಕೇಳೀರಿಲ್ಲೋ? ನಮ್ಮ ಹುಡಿಗಿನ್ನ ಹುರಿದು ಮುಕ್ಕಿದಾಕಿ ಈ ಭಾಮಿ."

"ಭಾಮಾತ್ಯಾ ಹೋಗಿ ಈಗ ಭಾಮಿ?!"

"ಹೌದೂ ಯಾವ ಹುಡಿಗಿನ್ನ ಹುರಿದು ಮುಕ್ಕಿದ್ಲು?"

"ಇಷ್ಟೂ ಮರೆತಿರೇನ್ರೀ...ಅದೇ ನಮ್ಮ ಶಾಮಾವ್ವೆನೀ ಮಗಳು ರುದ್ರಾಣಿ..ಅಕಿನ್ನೇ ಭಾಮೀ ಮಗನಿಗೆ ಕೊಟ್ಟಿಲ್ಲೇನು?"

ತಲೆ ಗಿರ್ ಗಿರ್ ಗಿರ್!

"ಅಲ್ಲಬಿಡ್ರಿ.. ನಿಮಗ ನೆನಪಿನ ಶಕ್ತೀನೆ ಹೋದಂಗದ. ಮನಷಾಗ ಜಡ್ಡು ಜಾಪತ್ರೆ ಬರೂದು ಖರೆ. ನನಗೂ ಭಾಮೀಗೆ ಆದ ಜಡ್ಡೇ ಆಗಿತ್ತು. ಆದರ ನಾ ನೋಡ್ರಿ ಔಷಧ ತೊಗೊಂಡು ಈಗ ಹೆಂಗ ಆರಾಮ ಠಣಠಣೀತ (ಗಟ್ಟಿಮುಟ್ಟಾಗಿ) ಅಡ್ಡಾಡತೀನಿ."

ಠಣಠಣೀತ ಅಂದ್ರ ಆ ತೊಂಬತ್ತೊಂಬತ್ತು ಕೇಜಿಗೆ ಖಂಡಿತವಾಗಿ ಕಡಿಮೆ ಇಲ್ಲದ ಈ ಕಾಯಕ್ಕೆ ಕಾಡಿದ ಜಡ್ಡಾದರೂ ಏನು?

ಕಣ್ಣು ಬೆಳ್ಳಗಾಗಿ ಫ್ಯಾನು ಇನ್ನಷ್ಟು ತಿರುಗಿ ಥಣ್ಣಗಾಗಬಾರದೇನು... ಅನಿಸುವಾಗ ಬಾದರಾಯಣಿ ಧಡಾರನೆದ್ದು "ಏ ಶಾಮಾ ನಾನೂ ಬರ್ತೀನಿ ತಡಿಯೇ ಊಟಕ್ಕ ಇಬ್ರೂ ಕೂಡೇ ಹೋಗೂಣು.." –ಎಕ್ಸಿಟ್!

ತಲೆನೋವು, ಬಾದರಾಯಣಿ, ಶಾಮಾ ಭಾಮಾ ಎಲ್ಲ ಮಾಯ ಆಗಿ ಥಣ್ಣಗಾದಂತೆ! ■

---

ಗುಂಡ ಎರಡು ಲಾಟರಿ ಟಿಕೆಟ್ ತಗೊಂಡಿದ್ದ. ಅದರಲ್ಲಿ ಒಂದು ಟಿಕೇಟಿಗೆ ಅವನಿಗೆ ಲಾಟರಿಯಲ್ಲಿ ಒಂದು ಕೋಟಿ ರೂಪಾಯಿ ಬಹುಮಾನ ಬಂದಿತ್ತು. ಆದರೂ ಅವನು ಸಂತೋಷವಾಗಿರಲಿಲ್ಲ.

**ಸ್ವಾಮಿ :** ಯಾಕೋ ಗುಂಡ ಲಾಟರಿಯಲ್ಲಿ ಒಂದು ಕೋಟಿ ಬಂದರೂ ಮಂಕಾಗಿದೀಯ

**ಗುಂಡ :** ನಾನು ಬಹುಮಾನ ಬರುವ ಒಂದು ಟಿಕೆಟ್ ತಗೊಂಡಿದ್ರೆ ಸಾಕಾಗಿತ್ತು. ಇನ್ನೊಂದು ಟಿಕೆಟ್ ತಗೊಂಡು ದುಡ್ಡು ವೇಸ್ಟ್ ಮಾಡಿದೆ ಅನಿಸ್ತಿದೆ

# ನಾನು ನಾಯಿ ಕೈಲಿ ಕಚ್ಚಿಸ್ಕೊಳ್ಳಿಲ್ಲ ! . . . .

**– ರಾಮಮೂರ್ತಿ ಎಸ್. ಕೆ.**

ಸಾಯಂಕಾಲದ ನನ್ನ ನಿತ್ಯದ ವಾಯು ವಿಹಾರ ಮುಗುಸ್ಕೊಂಡು, ತರಕಾರಿ ಚೀಲ ಹಿಡ್ಕೊಂಡು ಮನೇಗೆ ಬಂದಾಗ ಸ್ವಲ್ಪ ತಡವಾಗಿತ್ತು. ಬಂದಕೂಡಲೇ ನಮ್ಮ ಶ್ರೀಮತಿಯವರು, – ರೀ, ನಿಮ್ಮ ಸ್ನೇಹಿತ ಭದ್ರಾವತಿ ಚಿದಂಬರ ನಾಯಿ ಕೈಲಿ ಕಚ್ಚಿಸ್ಕೊಂಡರಂತೆ, ಇಂಜೆಕ್ಷನ್ ತಗೋತಿದ್ದಾರಂತೆ! ಸುಶೀಲಾ ಹೇಳಿದ್ರು ಅಂತಂದ್ರು.

ಅಯ್ಯೋ, ಪಾಪ ಅನ್ನಿಸ್ತು. ತಕ್ಷಣವೇ ಫೋನಾಯಿಸಲಾಗಲಿಲ್ಲ. ಮಾರನೇದಿನ ಫೋನಾಯ್ಸಿದೆ. ಹಲೋ . . . ಚಿದಂಬರ, ಹೇಗಿದೀಯ, ನಾಯಿ ಕೈಲಿ ಕಚ್ಚಿಸ್ಕೊಂಡ್ಯಂತೆ – ಅಂದೇ.

ಹಲೋ . . ನಿಂಗ್ಯಾರೋ ತಪ್ಪು ಹೇಳಿದಾರೆ, ನಾನು ನಾಯಿ ಕೈಲಿ ಕಚ್ಚಿಸ್ಕೊಳ್ಳಿಲ್ಲ – ಅಂತಂದ.

ನನಗೆ, ನಮ್ಮ ಶ್ರೀಮತಿಯವರ ಮೇಲೆ ಸಿಟ್ಟು ಬಂತು. ಮನಸ್ನಲ್ಲೇ, ಈ ಹೆಂಗಸ್ರೇ ಹೀಗೆ. ಸರಿಯಾಗಿ ತಿಳ್ಕೊಳ್ದಲೇ ಏನೋ ಹೇಳಿ ಬಿಡ್ತಾರೆ ಅಂದ್ಕೊಂಡು, ಹಾಗೂ ಮತ್ತೆ ಕೇಳ್ದೆ – ಸಾರಿ, ನಮ್ಮ ಮನೆಯವರು ತಪ್ಪಾಗಿ ಹೇಳಿರ್ಬೇಕು, ಇಂಜೆಕ್ಷನ್, ಮಾತ್ರೆ ತಗೋತಿದಾರೆ ಅಂತಾನೂ ಅಂದ್ರು, ನಿಮ್ಮನೆಯವ್ರೇ ಹೇಳಿದ್ದು ಅಂತಾನೂ ಅಂದ್ರು ಅದಕ್ಕೆ ಕೇಳ್ದೆ – ಅಂದೇ.

ಹಲೋ . . . ಹಾಗೇನಿಲ್ಲ, ಅವ್ರು ಹೇಳಿರೋದ್ರಲ್ಲಿ ಅರ್ಧ ಸತ್ಯ ಅರ್ಧ ಸುಳ್ಳು. ಇಂಜೆಕ್ಷನ್, ಮಾತ್ರೆ ತಗೋತಿರೋದು ನಿಜ. ನಾನು ನಾಯಿ ಕೈಲಿ ಕಚ್ಚಿಸ್ಕೊಳ್ಳಿಲ್ಲ!. ಹೀಗೇ, ನೆನ್ನೆ ಸಾಯಂಕಾಲ ವಾಕ್ ಹೋಗಿದ್ದೆ. ಬರೋವಾಗ ಕತ್ಲೆ ಆಗಿತ್ತು, ಸ್ವಲ್ಪ ಲೇಟ್ ಆಗಿತ್ತು, ಕರೆಂಟ್ ಬೇರೆ ಇರ್ಲಿಲ್ಲ. ಮನೇ ಹತ್ರ ಬರ್ತಿದ್ದಾಗ ಯಾವ್ದೋ ಬೀದಿ ನಾಯಿ ಹಿಂದ್ಗಡೆಯಿಂದ ಬಂದು ಕಚ್ಚಿಬಿಡ್ತು. ನಾನ್ಯಾಕೆ ಅದ್ರ ಹತ್ರ ಕಚ್ಚಿಸ್ಕೊಳೋಕೆ ಹೋಗ್ಲಿ ಹೇಳು!



ನೀನು, ನಾಯಿ ಕಚ್ತಂತೆ ಅಂದಿದ್ರೆ ಹೌದು ಅಂತಿದ್ದೆ, ನೀನು ಕಚ್ಚಿಸ್ಕೊಂಡ್ಯಂತೆ ಅಂದ್ಯಲ್ಲ ಅದು ತಪ್ಪು ಅಂದಿದ್ದು ನಾನು ಅನ್ನೋದೇ!!.

ನಾನು ಮನಸ್ನಲ್ಲೇ ಅದು ಕಚ್ಚಿದ್ರೂ – ಕಚ್ಚಿಸ್ಕೊಂಡಿದ್ದು ಅವ್ನೇ ಅಲ್ವೇ ಅನ್ಕೊಂಡ್ರೂ, ಹೇಳಕ್ಕೆ ಹೋಗ್ಲಿಲ್ಲ. ಹೇಳಿದ್ರೆ ಕನ್ನಡ ವ್ಯಾಕರಣ, ಸಂಧಿ ಸಮಾಸ ಎಲ್ಲದರ ಪಾಠ ಶುರು ಹಚ್ಕೊತಾನೆ ಅಂತ, ಆದ್ರೂ ಹುಷಾರಪ್ಪ, ಇಂಜೆಕ್ಷನ್, ಮಾತ್ರೆ ಎಲ್ಲಾ ಸರ್ಯಾಗಿ ತಗೋ ಅಂತ ಹೇಳಿ ಫೋನ್ ಇಟ್ಟೆ. ■

# ಅಂದಿನ ನವರಾತ್ರಿ

**– ಡಾ. ಶ್ಯಾಮಲಾ ರವಿಶಂಕರ್**

ನಾವು ಚಿಕ್ಕವರಿದ್ದಾಗ ಹಬ್ಬಹರಿದಿನಗಳ ಸಂಭ್ರಮ ಇಂದಿನವರ ಊಹೆಗೂ ನಿಲುಕದು. ಹೋಗಲಿ, ತಿಳಿಸಾದ್ರೂ ತಿಳಿಸೋಣ ಅಂದ್ರೆ ಕೇಳೋ ತಾಳ್ಮೆನೇ ಇಲ್ಲವಲ್ಲಾ ಈ ಜೆನ್ ಮಕ್ಕಳಿಗೆ! ಕೇಳಿ ನಕ್ಕಾದ್ರೂ ನಗರೋ ಬಕ್ರಾಗಳ್ರಾ ಅಂದ್ರೆ "ಇದೂ ಒಂದು ಜೋಕಾ" ಅಂದು ಬಿಡ್ತಾರೆ. ನೀವೆಲ್ಲ ದೊಡ್ಡವರಾದ ಮೇಲೆ ಮುಂದಿನ ಪೀಳಿಗೆಗೆ ಹೇಳೋಕೆ ಏನಾದ್ರೂ ಇರತ್ತಾ, ಇದ್ರೂ ಹೇಳೋಕೆ ಬರತ್ತಾ ನಿಮಗೆ ಅಂತ ಕೇಳೋಣ ಅಂತ ಅನ್ನಿಸಿದ್ರೂ ಸುಮ್ಮನೆ ಇದ್ದು ಬಿಡ್ತೀನಿ.

ಅದೇ ನಾನು ನಾಕೋ ಐದೋ ವರ್ಷದವಳಿದ್ದಾಗ ನಮ್ಮ ನೆರೆಹೊರೆಯಲ್ಲಿ ನವರಾತ್ರಿ ತೊಗೊಳ್ಳಿ. ಹೇಗೆ ನಡೀತಿತ್ತು ನಾನು ಎಷ್ಟು ಬೀಜಿ ಇರ್ತಿದ್ದೆ, ಏನ್ಕಥೆ. ಅಬ್ಬಬ್ಬಾ .!! ಈಗ್ಲೂ ನೆನೆಸಿಕೊಂಡ್ರೆ. ಉತ್ಸಾಹ ಬಂದು ಬಿಡತ್ತೆ. ನನಗೆ ಹತ್ತು ಹನ್ನೆರಡು ಸ್ನೇಹಿತೆಯರಿದ್ರು. ಎಲ್ಲರ ಮನೇಲೂ ಬೊಂಬೆ ಕೂಡಿಸುವ ಸಂಭ್ರಮ. ಪ್ರತಿ ವರ್ಷ ಎಲ್ಲರಲ್ಲೂ ಒಂದೇ ಮಾದರಿ ಜೋಡಣೆ. ವರ್ಷ ವರ್ಷ ಹೊಸ ಬೊಂಬೆ ಕೊಂಡ್ಕೊಳ್ಳೋ ಅಂತ ಶಾಸ್ತ್ರ ನಮ್ಮಲ್ಲಿ ಇರಲಿಲ್ಲ. ಹಾಗೆ ಇಷ್ಟೇ ಮೆಟ್ಟಲು ಅಂತಲೂ ಇರಲಿಲ್ಲ. ಬಹುಶಃ ಅವೆಲ್ಲ ನಮ್ಮಲ್ಲಿ ವಲಸೆಗೆ ಬಂದ ತಮಿಳರ ಐಡಿಯಾ ಆಮದಾಗಿರಬೇಕು ಎಲ್ಲರ ಮನೇಲೂ ಪ್ರತಿ ಬೊಂಬೆನೂ ತನ್ನದೇ ಆದ ನಿರ್ದಿಷ್ಟ ಸ್ಥಳದಲ್ಲಿ ಇರುತ್ತಿತ್ತು. ಹಾಗಾಗಿ ಯಾವುದಾದರೂ ಬೊಂಬೆ ಮುರಿದು ಹೋದರೋ ಅಥವಾ ಕಳೆದು ಹೋದರೋ ನನ್ನಂಥ ಪಟ್ಟಾ ಆಹ್ವಾನಿತರಿಗೇ ತಿಳಿದು ಹೋಗುತ್ತಿತ್ತು. ಎಷ್ಟೋ ಕಳಕಳಿಯಿಂದ ಆ ಬೊಂಬೆಯ ಯೋಗ ಕ್ಷೇಮ ವಿಚಾರಿಸುತ್ತಿದ್ದೆವು. 'ಏನಾಯ್ತೆ ಅಷ್ಟು ಮುದ್ದಾಗಿದ್ದ ನಾಯಿ ಮರಿ, ಯಾರೋ ಕದ್ದು ಕೊಂಡು ಹೋದರಾ ಅಂತ ಅವುಗಳನ್ನ ಮಿಸ್ ಮಾಡಿ ಸಂತಾಪ ಸೂಚಿಸಿ ಕೆಲವೊಮ್ಮೆ ಕಣ್ಣೀರು ಕೂಡ ಹರಿಸಿದ್ದುಂಟು.

ಈ ವಿಷಯ ಕುರಿತು ಸುದೀರ್ಘ ಸಮಾಲೋಚನೆ ನಡೆಸಿ ಆ ಮೂರನೇ ಮೆಟ್ಟಲಲ್ಲಿ ಇಡ್ತಿದ್ದ ಚನ್ನಪಟ್ಟಣದ ಬೊಂಬೆ ಎಲ್ಲೆ ಕಾಣತಾ ಇಲ್ಲವಲ್ಲೇ, ಪಟ್ಟದ ಬೊಂಬೆಗಳ ಪಕ್ಕ ಇಡ್ತಿದ್ರಲ್ಲ ಆ ಶೆಟ್ಟಿ ಎಲ್ಲೀ ಅಂತ ಎಷ್ಟೋ ವ್ಯಾಕುಲತೆ ಪಡ್ತಿದ್ವಿ. ಸರಿ, ಅಮ್ಮಂದಿರಿಗೆ ಪೂಜೆ ಪುನಸ್ಕಾರ ಜೊತೆಗೆ ಬೊಂಬೆ ಬಾಗಿನ, ಅರ್ಥಾತ್ ಮಿನಿ ಸೈಜ್‌ನ ತಿಂಡಿ ಪದಾರ್ಥಗಳನ್ನ ಮಾಡೋದು, ದಿನಕ್ಕೊಂದು ಬಣ್ಣಬಣ್ಣದ ರಂಗೋಲಿ ಬಿಡಿಸೋದು ತಮ್ಮ ಮಕ್ಕಳಿಗೆ ಅಲಂಕಾರ ಮಾಡಿ ಬಂದ ಮಕ್ಕಳಿಗೆ ಬಾಗಿನ ಕೊಡ್ಸೋದು ಇತ್ಯಾದಿ ಕೆಲಸಗಳು.

ಆಗಿನ ಕಾಲದಲ್ಲಿ ಮದುಮಗಳಿಗೆ ಒಂದಾದರೂ ಎಂಟು ಗಜದ ಸೀರೆ ಉಡಿಸ್ತಿದ್ರು. ಆಮೇಲೆ ಆ ಹುಡುಗಿಯರು ಹಿರಿಯರ ಕಣ್ಣು ತಪ್ಪಿಸಿ ಅದ್ರಲ್ಲಿ ಎರಡು ಗಜ ಕತ್ತರಿಸಿ [ಹಿರಿಯರ ಕಣ್ಣು ಬಿದ್ರೆ ಊದುಬತ್ತಿ ಇಂದ ಸುಟ್ಟುಹೋಯ್ತು ಅಂತಲೋ ಇನ್ನೂ ಏನೇನೋ ಸುಳ್ಳು ಹೇಳಿ] ಎಲ್ಲೆಲ್ಲೋ ಮುಚ್ಚಿಟ್ಟಿದ್ದ ಕಂಚಿನೋ ಧರ್ಮಾವರಂದೋ ಅಥವಾ ಕಾಶಿ ಪೀತಾಂಬರದ್ದೋ ತುಂಡುಗಳ ಉತ್ತರಾಧಿಕಾರಿಣಿ ನಾನು. ಹೀಗಾಗಿ ನಾಕಾರು ಜರಿ ಲಂಗಗಳ ಒಡತಿ ನಾನು. ಯಾವತ್ತು ಯಾವ ಲಂಗ ಹಾಕ್ಕೊಳ್ಳ ಬೇಕು ಅನ್ನೋ ಮಹಾನ್ ನಿರ್ಧಾರ ಬಹಳ ಮುಂಚೇನೇ

ಮಾಡಿರ್ತಿದ್ದೆ, ಅಮ್ಮ ಬೇರೆ ಹಾಕ್ಕೊ ಅಂದ್ರೆ ರಗಳೆ ರಾದ್ಧಾಂತ ಮಾಡಿ ನನ್ನಿಷ್ಟ ನೆರವೇರಿಸಿ ಜೀವನದ ಸಾರ್ಥಕ ಪಡೆದಂತೆ ಮೆರೆಯುತ್ತಿದ್ದೆ. ಆಮೇಲೆ ಕೇಶಾಲಂಕಾರ, ಕಂಡ ಕಂಡ ಹೂವೆಲ್ಲ ನನ್ನ ತಲೆಮೇಲೆ ಹೇರಿ ಕೊಂಡು ಇಕಬಾನನೋ ಪೆಕ್ರಬಾನನೋ ಅನ್ನೋ ಹಾಗೆ ನಾನು ರೆಡೀ ಆಗೋ ವೇಳೆಗೆ ಸಂಜೆ ನಾಲ್ಕು ಘಂಟೆ. ನನ್ನ ಅಂಗರಕ್ಷಕನಾಗಿ ನನಗಿಂತ ಎರಡು ವರ್ಷ ದೊಡ್ಡವನಾದ ಅಣ್ಣ ಸಿದ್ಧನಾಗಿರಬೇಕು ಇನ್ನು ಅವನ ವಸ್ತ್ರಭೂಷಣ; ಅವನ ಹತ್ತಿರ ಒಂದು ಕೋಟು ಇತ್ತು. ಅದು ಬಹಳ ಚೆನ್ನಾಗಿತ್ತು. ನಮ್ಮ ಮಾತಾಮಹ ನಿವೃತ್ತಿ ಹೊಂದಿದಾಗ ಅವರ ಪ್ರಾಣ ಸ್ನೇಹಿತರು ನೀಡಿದ ಉಡುಗೊರೆ. ಒಂದು ಉಲ್ಲನ್ ಸೂಟ್ ಲೆಂಗ್ತ್. ಅದರಲ್ಲಿ ಉಳಿದ ಬಟ್ಟೆಯಲ್ಲಿ ಅಣ್ಣನಿಗೆ ಪುಟ್ಟದಾದ ಮುದ್ದಾದ ಕೋಟು ತಯಾರಿಸಲ್ಪಟ್ಟು ಊರಿಗೊಬ್ಬಳು ಪದ್ಮಾವತಿಯೋಪಾದಿಯಾಗಿ ಅವನು ಅದನ್ನ ಧರಿಸಲೇಬೇಕು. ಇದು ಒಂಥರಾ ಡ್ರೆಸ್ ಕೋಡ್. ತಲೆಯಲ್ಲಿ ಹಿಡಿಸಲಾರದಷ್ಟಿದ್ದ ಕೂದಲನ್ನು ಎಣ್ಣೆ ಹಚ್ಚಿ ತೀಡಿತೀಡಿ ಬಾಚಿದರೆ ಅವ್ನೂ ಕೂಡ ರೆಡಿ. ಆಗ ನಾವಿಬ್ಬರೂ ಹೊರಡುವುದು ಅಕ್ಕ ಪಕ್ಕ ಎದುರು ಬದರು ಆಚೆ ಈಚೆ 8-10 ಮನೆಗಳು ಅಲ್ಲಿಗೆ ಮುಗಿಯುತ್ತಿತ್ತು ನಮ್ಮ ಆಹ್ವಾನಿತರ ಪಂಕ್ತಿ.

ಪ್ರತಿ ಮನೆಗೆ ಹೋದಾಗಲೂ ಅಣ್ಣಾ ಒಳಗೆ ಬರುತ್ತಿರಲಿಲ್ಲ, ಗಂಡಸಲ್ಲವೇ ಅವನು? ಎಲ್ಲೇ ಅದ್ರೂ ಒಳಗೆ ಬರ್ಬಾರದು. ನಾನು ಒಳಗೆ ಹೋಗಿ ಆ ಮನೆಯ ಹೆಣ್ಣು ಮಕ್ಕಳನ್ನ ಆಹ್ವಾನಿಸೋದು, ಹೋಗ್ತೀನಿ ಕಣೇ ಅಂದಾಗ ಕೂತ್ಕೊಳ್ಳೆ ಕಣೇ ಅಂತ ಅವರು ಅನ್ನೋವರ್ಗೂ ನಿಂತೆ ಇರೋದು, ಆಗ ಅವ್ರು ಕುಂಕುಮ ಬಾಗಿನ ಕೊಡೋದು, ಆಗ ಹಾಡು ಹೇಳೆ ಅಂದಾಗ ನನಗೆ ಬರ್ತಿದ್ದ ಒಂದೇ ಒಂದು ಹಾಡನ್ನ ದಿನಾ ಎಲ್ಲರ [ಸೇವ್ ಕ್ರೌಡ್ನ] ಮುಂದೆ ಹಾಡೋದು : "ಗೌರೀರಮಣಾ."...ಅಂತ ಸಾಧ್ಯವಾದಷ್ಟು ಮಟ್ಟಿಗೆ ಗಟ್ಟಿಯಾಗಿ ಹಾಡೋದು. ಇದು ಅವ್ಯಾಹತವಾಗಿ ನಡೆದು ಬಂದ ಪದ್ಧತಿ. ಕೆಲ ಗೆಳತಿಯರು 'ನಿಮ್ಮಣ್ಣನಿಗೂ ಕೊಡೆ" ಅಂತ ಇನ್ನೊಂದು ಚಕ್ಕುಲೀನೊ, ಮೈಸೂರು ಪಾಕೋ ಕೊಡೋವ್ರು. ಬೇಡ ಬೇಡ ಅಂತಲೇ ಇಸ್ಕೊಂಡು ಜಾಗ ಖಾಲಿ ಮಾಡೋದು. ಅಣ್ಣಾ ಲೋಡ್ ಕ್ಯಾರೀ ಬೇರೆ ಮಾಡೋವ್ನು. ಸೇಮ್ ಸ್ಟೋರೀ ರಿಪೀಟ್ಸ್ ಫಾರ್ ಆಲ್ ಹೌಸಸ್. .ಕಡಕಡೆಗೆ ಎಲ್ಲರ ಮನೆ ಬಾಗಿನಾಗ್ಲಿಂದ ನಮ್ಮಿಬ್ಬರ ಪುಟ್ಟ ಕೈಗಳು ತುಂಬಿ ತುಳುಕುತ್ತಿದ್ದರೂ ನಾವು ಮಾತ್ರ ಬೀದೀಲೊ, ಮತ್ತೊಬ್ಬರ ಮನೆಲೋ ತಿಂನ್ತಾ ಇರಲಿಲ್ಲ. ಅದೊಂದು ಶ್ರೀಮದ್ಗಾಂಭೀರ್ಯ! ನಮ್ಮ ಮನೆಗೆ ಹೋಗಿ ಎಲ್ಲರೂ ಬಂದು ಹೋದ ಮೇಲೆ ಇಬ್ಬರೂ ಎದುರು ಬದ್ರಾಗಿ ಕೂತ್ಕೊಂಡು ನ್ಯೂಸ್ ಪೇಪರ್ ಚಿಕ್ಕ ತುಂಡಾಗಿ ಅಣ್ಣಾ ಕತ್ತರಿಸಿ ಕೊಡುವ. ಆಗ ನಿನಗರ್ಧ, ನನಗರ್ಧ ಅಂತ ಪ್ರತಿ ಬಾಗಿನನೂ ಹಂಚಿ ಕೊಂಡು ತಿಂತಿದ್ದ ರುಚೀನೇ ರುಚಿ! ವಿಜಯ ದಶಮಿ ಆದ ಮೇಲೆ ಇನ್ನೆರಡು ದಿವಸವಾದ್ರೂ ಇದೇ ಮಾತು ಕಥೆ ವಿಶ್ಲೇಷಣೆ ನಡೆಯುತ್ತಿತ್ತು.

ಎಷ್ಟೋ ವರ್ಷ ಆದ ಮೇಲೆ ರೋಡ್ನಲ್ಲಿ ಯಾರೋ ಸಿಕ್ಕಿ ನೀನು ಗೌರಿ ರಮಣಾ ಶ್ಯಾಮಲಾ ಅಲ್ವೇನೆ ಅಂದಾಗ ಈ ಎಲ್ಲಾ ನೆನಪುಗಳ ಸುರುಳಿ ಬಿಚ್ಚಿ ಗುಡ್ ಓಲ್ಡನ್ ಡೇಸ್ ಅಂತ ನಸು ನಕ್ಕೆ.

■

# ಡ್ರೆಸ್ & ಹೇರ್ ಡ್ರೆಸ್

**– ಗುಂಡುರಾವ್ ದೇಸಾಯಿ**

ಈಗಿನ ಕಾಲನ ಛಲೋ..... ಎಲ್ಲಲ್ಲೂ ಸಮಾನತೆ ತಂದದ. ಬಡವ ಶ್ರೀಮಂತ ಅನ್ನೊ ಫೀಲಿಂಗೂ ಇಲ್ಲದಂಗ ಮಾಡ್ಯಾದ. ನಾವು ಚಿಕ್ಕೊರಿರೋ ಕಾಲಕ್ಕ ಅಪ್ಪ ಮೇಷ್ಟ್ರಾಗಿ ರಿಟೈರ್ಡ್ ಆಗಿದ್ರೂ ಒಡಹುಟ್ಟಿದವರಿಗೆ ಉದಾರತೆ ಮೆರೆದ ಕಾರಣಕ್ಕೆ ನಾವು ಬಡತನದಲ್ಲೆ ಹೊದ್ದು ಮಲಗಬೇಕಾಗಿತ್ತು. ಈಗ ಮಕ್ಕಳು ಕೊಡಿಸಿದ ವರ್ಷಕ್ಕೆ, ಆರು ತಿಂಗಳಿಗೆ ಬಿಟ್ಟು ಹೊಸದನ್ನು ತೆಗೆದುಕೊಳ್ಳೊದನ್ನ ನೋಡಿದ್ರ ಮನಸ್ಸಿಗೆ ತ್ರಾಸ ಅನಸ್ತದ. ಆವಾಗ ನಮಗೆ ಬಟ್ಟೆ ಹೊಲಸೋದಾ ಎರಡು ಮೂರು ವರ್ಷಕ್ಕೊಮ್ಮೆ. ಈಗಿನಂಗ ಶಾಲ್ಯಾಗ ಡ್ರಸ್ ಬೂಟು ಏನೂ ಇರಲಿಲ್ಲ. ಬಿಸಿ ಊಟ ಸೌಲಭ್ಯನೂ ಇರಲಿಲ್ಲ. ಹಾಗ ನೋಡಿದ್ರ ಈಗಿನ ಮಕ್ಕಳೆ ಅದೃಷ್ಟವಂತರೂ. ಸ್ವಾತಂತ್ರ ಸಿಕ್ಕು ಮೂವತ್ತ ವರ್ಷದ ಮ್ಯಾಗ ಹುಟ್ಟಿದ ಆ ಸಮಯಕ್ಕ ಬಡತನದ ಸ್ಥಿತಿ ರಾಷ್ಟ್ರಗಳಿಗೂ.

ಶಾಲಿ ಡ್ರಸ್ ಕಷ್ಟ ಪಟ್ಟು ಹೊಲಸಿದ ಮೇಲೆ ಅದನ್ನು ಕನಿಷ್ಠ ಮೂರು ನಾಲ್ಕು ವರ್ಷವಾದ್ರೂ ಜ್ವಾಪಾನ ಮಾಡಬೇಕಿತ್ತು. ಉಳಿದ ಡ್ರಸ್‌ಗಳಿಗೆ ನಮ್ಮ ಸಂಬಂಧಿಕರು ಉಟ್ಟುಬಿಟ್ಟ ಬಟ್ಟೆಗಳೆ ನಮಗೆ ಆಧಾರ. ಮೆಟ್ರಿಕವರೆಗೂ ನಾನು ಶಾಲಿಗೆ ಹೋಗಿದ್ದು ಚಡ್ಡಿ ಮೇಲೆನೆ ಅದೂ ಬರಗಾಲಲ್ಲಿ. 'ಕರಿಯದೆ ಬರುವವನ, ಬರೆಯದಲೆ ಓದುವವನ, ಬರಿಗಾಲಲ್ಲಿ ನಡೆಯುವವನ ಕರೆದು ಕೆರದಿಂದ ಹೊಡೆಯಂದ ಸರ್ವಜ್ಞ' ಅಂತ ಸರ್ವಜ್ಞ ಹೇಳಿದ್ರೂ ಮೊದಲ ಎರಡನ್ನು ಫಾಲೋ ಮಾಡೊಕೆ ಆಗಿದ್ರು ಬರಿಗಾಲಲ್ಲಿ ನಡೆಯುವವನ ಮಾತಿಗೆ ನನಗೆ ವಿರೋಧವಿತ್ತು. ಈಗಿನಂಗ ಇಪ್ಪತ್ತು ಮೂವತ್ತಕ್ಕೆ ಸಿಗುವ ಚಪ್ಪಲಿ ಸಹಿತ ಇರಲಿಲ್ಲ. ಬರುವ ಮೂನ್ನುರು ರೂಪಾಯಿಯಲ್ಲಿ ಮನೆಯನ್ನು ನಿರ್ವಹಿಸಬೇಕಾಗಿದ್ದರಿಂದ ಕೊಡಿಸಿದಾಗ ತೊಟಗಂತಿದ್ವಿ ಅನ್ನೊದಕ್ಕಿಂತ ಚಪ್ಪಲಿ ಖಯಾಲೆ ಆಗಿರಲಿಲ್ಲ. ಹಾಗಾಗಿ ಪಿಯುಸಿ ಬರೋ ಹೊತ್ತಿಗೆಲ್ಲ ಕಾಲಗೆಲ್ಲ ಏಳೆಂಟು 'ಆನಿ' ಆಗಿದ್ವು... 'ಆನಿ' ಅಂದ್ರ ಮುಳ್ಳು ನೆಟ್ಟಾಗ ಸರಿಯಾಗಿ ಇಂತಿಜಾಮ ಮಾಡದಿದ್ದಕ್ಕಾಗಿ ಹಾಗೆ ಉಳಿದು ಆಗುವ ನೆಟ್ಟೆಜ್ಜೆಗಳು. ಪಾದದಲ್ಲಿ ಅದನ್ನು ನೋಡಿದ್ರೆ ಆನಿ ಹೆಜ್ಜೆಗಳಂಗೆ ಕಾಣೊವು. ಒಂದು ಸಣ್ಣ ವಸ್ತು ಆನಿ ಆದ ಜಾಗಕ್ಕ ತಾಗಿದ್ರು ಜೀವಹೋದಂಗ ಆಗುತಿತ್ತು. ಅಷ್ಟು ನೋವು ಕೊಡವು. ನೌಕರಿ ಸಿಗುವವರೆಗೂ ಸ್ವಲ್ಪ ಅದಕ್ಕೆ ಭಾರ ಬಿದ್ದರೂ ಅಸಾಧ್ಯ ನೋವು ತಡೆದುಕೊಂಡಿದ್ದು ಅದನ್ನು ತೆಗೆಯಲು ದುಡ್ಡು ಖರ್ಚಾಗುತ್ತವೆ ಎನ್ನುವ ಭಯಕ್ಕೆ.

ಇರಲಿ ಹರಿದ ಬಟ್ಟಿಗೆ ಆ ದಿನದಾಗ ಬಾಳ ಅವಮಾನ ಅನುಭವಿಸಬೇಕಾದ ಟೈಮಿತ್ತು. ಸ್ವಲ್ಪ ಹರಿದ್ರ ಗೆಳೆಯರ ಮಾತುಗಳು ಚುಚ್ಚಿದಾಂಗ ಆಗುವವು. ನಮ್ಮ ಡ್ರೆಸ್ ನೋಡಿ ಶ್ರೀಮಂತ ಗೆಳೆಯರು ಹತ್ತಿರ ಸಹ ಸುಳಿತಿರಲಿಲ್ಲ. ಕಾಲೇಜಿಗೆ ಸೇರಿದಾಗ ಒಂದು ಪ್ಯಾಂಟ್ ತೊಗೊಂಡಿದ್ದೆ. ಈಗಿನಂಗೆ ಪಿಯುಸಿ ವಿಜ್ಞಾನ ವಿಭಾಗಕ್ಕ ಮಕ್ಕಳನ್ನು ಸೇರಸಬೇಕಾದ್ರೆ ಲಕ್ಷಗಟ್ಟಲೆ ಬೇಕು. ನಾವು ಆಗ ಅಡ್ಮಿಷನ್ ಆಗಿದ್ದು ಬರಿ ಮೂನ್ನೂರು ರೂಪಾಯಿಯಲ್ಲಿ. ಈಗ ಅದು ಬಿಜಿನೆಸ್ ಆಗಿದ್ದು ಗೊತ್ತಿದ್ದ ಸಂಗತಿ ಆಗಿದ್ದರೂ ಇರುಳ ಕಂಡ ಭಾವಿಯಲ್ಲಿ ಬೀಳುತ್ತಿರುವುದು ಅಷ್ಟೆ ವಾಸ್ತವ. ಅಲ್ಲಿಯೂ ಸಂಬಂಧಿಗಳು ಬಿಟ್ಟ ಷರ್ಟ ಪ್ಯಾಂಟ್ ಬಟ್ಟೆಗಳೆ ನಮ್ಮ ಬದುಕಿಗೆ ಆಧಾರ. ದೊಡ್ಡವರ ಪ್ಯಾಂಟುಗಳು ಷರ್ಟಗಳು ಚಿಕ್ಕವನಾದ ನನಗೆ ಹೇಗೆ ಆಗಬೇಕು..

ಟೇಲರ್ ಹತ್ತಿರ ಹೋಗಿ ಅದನ್ನ ಒಂದು ಆಕಾರಕ್ಕ ಮಾಡಿಕೊಂಡು ಹಾಕಿಕೊಂಡರೂ...ಅದು ಲೊಳಗ ಬಳಗ ಆಗಿ ಆಕಾರ ವಿಕಾರಳ ಕಂಡು ನನ್ನ ಸಹಪಾಠಿಗಳು ಒಂದು ನಮೂನಿ ನೋಡುಹಾಂಗ ಮಾಡ್ತಿತ್ತು... ನಾನು ಓದಿನಲ್ಲಿ ಒಂದು ಲೆಕ್ಕಕ್ಕ ಇದ್ದುದ್ದಕ್ಕಾಗಿ ನನ್ನ ಆ ಬಟ್ಟೆ ಹೇಗಿದ್ದರೂ ಹತ್ತಿರ ಬರುತ್ತಿದ್ದರು.. ಹಾಸ್ಟೇಲ್ ಡೇ.....ಇತರ ಸಮಾರಂಭಗಳಲ್ಲಿ ಸ್ನೇಹಿತರ, ಸೀನಿಯರ್ ಅವರ ಮಾತು ಕೇಳಿ ಅವರು ಹೇಳಿದ ಕೆಲಸ ಮಾಡಿ ಬೇಡಿ ಹಾಕುತ್ತಿದ್ದೆವು. ಟಿ.ಸಿ.ಹೆಚ್ ಮಾಡುವ ನನ್ನ ಗೆಳಯನೋರ್ವ ತಿಂಗಳಿಗೆ ಆಗುವಷ್ಟು ಬಟ್ಟೆ ತರುತ್ತಿದ್ದ ಒಂದು ದಿನವೂ ಒಗೆತಿರಲಿಲ್ಲ. ಆದರೆ..ಅವನು ಮಾಡುವ ಫ್ಯಾಷನ್ ನೋಡಿ ನನಗೆ ಅಳುಬರುತ್ತಿತ್ತು.. ಎರಡನೆ ವರ್ಷದಲ್ಲಿ ಅವನು ನನ್ನ ರೂಮೆಂಟ್ ಆದ ಕಾರಣಕ್ಕಾಗಿ ಅವನು ನನಗೆ ಬಟ್ಟೆ ಹಾಕಿಕೊಳ್ಳಲು ಕೊಡುತ್ತಿದ್ದ ನಾನು ರುಚಿಕರವಾದ ಅಡುಗೆ ಮಾಡಿಕೊಟ್ಟಾಗ ಮಾತ್ರ...

ಇನ್ನೂ ಹೇರ್ ಡ್ರೆಸ್ ಅಷ್ಟೆ ತಿಂಗಳಿಗೆ ಕೂದಲ ಬರತಾವ ಅಂತ ಎಲ್ಲಿ ರೊಕ್ಕ ಬಡಿಬೇಕು ಅಂತ ಪೂರ್ತಿ ಸಣ್ಣಾಗಿ ಒಮ್ಮೊಮ್ಮೆ ನುಣ್ಣಗ ಅಪ್ಪ ಹಜಾಮತಿ ಮಾಡೋ ಹಡಪದ ಆದಪ್ಪನನ್ನೊ ತಿಪ್ಪಣ್ಣನನ್ನೋ ಕರೆಸಿ ಬೋಳಸ್ತಿದ್ದ. ಹಡಪದ ಆದಪ್ಪ ಕುಂಟಿ ಹಿಡಿದು "ಹುಲಿ ಬಂತಲೆ ಹುಲಿ ಬಂತಲೆ" ಅಂತ ಅತ್ತ ನೋಡಷ್ಟಗೆ ಕರಕ್..ಕರಕ್..ಕರಕ್.. ಅಂತ ಒಂದುಸೈಡು ಬೋಳಿಸಿಬಿಡುತ್ತಿದ್ದ. ಒಮ್ಮೊಮ್ಮೆ ಹಳೆಕಾಲದ ಆ ನಾಪಿತನ ಇನಸ್ಟ್ರುಮಿಂಟುಗಳು ಕೂದಲಿನ ಬೇರು ಸಮೇತ ಬರೋಹಾಂಗ ಮಾಡತಿದ್ವು. ಈಗಿನಂತೆ ಸ್ಮೂತ್ ಮಿಶನ್..ಟ್ರಿಮರ್‌ಗಳು ಇರಲಿಲ್ಲ. ಅಪ್ಪ ಗೋಣು ಬೇರೆ ಗಟ್ಟಿಯಾಗಿ ಹಿಡಿದಿರುತ್ತಿದ್ದ. ಮತ್ತೆ ಹುಲಿ ಬಂತಲೆ ಅನ್ನುವಷ್ಟರಲ್ಲಿ 'ಕರಕ್...ಕರಕ್...ಕರಕ್...ಮತ್ತೊಂದು ಕಡೆ ಕುಂಟಿ ಸಾಗೋದು.. ಹೀಗಾಗಿ ಗಾಂಧಿ ಕಟಿಂಗ್ ಕಾಮನ್. ಗಾಂಧಿ ಕಟಿಂಗ್ ಆದ್ರೆ ಬೇಗ ಕೂದಲು ಬರುವುದಿಲ್ಲ...ಖರ್ಚು ಆಗೋಲ್ಲ ಅನ್ನೊದು ಅಪ್ಪನ ವಿಚಾರ. ಅವರು ಅದೆ ದಾರಿ ಹಿಡಿದಿದ್ದರು.

ಸಣ್ಣವರಿರೊಕಾಲಕ್ಕ ಒಂದು ಬಿಳಿಕೂದಲ ಬಂತೂ ಅಂದ್ರ ಸಾಕು ನಿದ್ದೆ ಗೆಡಸ್ತಿತ್ತು. ಮನೆಯವರ ಮನಸನ್ನ ಕದಲಸ್ತಿತ್ತು. ಅದಕ್ಕಾಗಿ ಶತಾಯ ಗತಾಯ ಪತ್ತೆ ನಡಿತಿತ್ತು. ಹುಡುಕಿ ಹುಡುಕಿ ಪತ್ತೆ ಮಾಡಿ ಬೇರು ಸಮೇತ ನೋವನ್ನು ಸಹಿಸಿಕೊಂಡು ಕಿತ್ತಿಗೋತ್ತಿದ್ರು. ಹೆಣ್ಮಕ್ಕಳಿಗೆ ಒಂದು ನೆರೆಗೂದಲು ಬಂದ್ರೆ ಆಕಿಗೆ ಮುದುಕಿ ಅಂತ ಸರ್ಟೀಫಿಕೇಟ್ ಕೊಡತಿದ್ರು. ಅವಳ ಬಾಳಿನ ಗೋಳು ಹೇಳತಿರದು. ನೆರೆಗೂದಲು ಒಂದೆರಡು ಬಂದು ಕಿತ್ತುಕೊಂಡ್ರು ಗೊತ್ತಾಗಿ ಆದ ಎಂಗೇಜಮೆಂಟ್ ಕ್ಯಾನ್ಸಲ್ ಆಗತಿತ್ತು. ಬಿಳಿಕೂದಲು ಆಗ ವಯಸ್ಸಾದ ಸಂಕೇತ ತೋರಸ್ತಿದ್ವು. ಅದು 18 ವರ್ಷದ ಹುಡುಗಿಯನ್ನು 81 ವರ್ಷದ ಮುದುಕಿ ತರಹ ಬಿಂಬಸ್ತಿತ್ತು. ನನ್ ಗೆಳೆಯ ಪಿ.ಯು.ಸಿ ಯಲ್ಲಿ ಇದ್ದ. ಅವನ ತಲೆ ಬಹುತೇಕ ಬಿಳಿ. ಅವನು ಓದವುದುಕ್ಕಿಂತ ಹೆಚ್ಚಾಗಿ ನನ್ನ ಜೀವನ ಮುಗಿತಲೆ ನಾನು ಏನು ಓದಿ ಏನು ನೌಕರಿ ಮಾಡಿದ್ರ ಏನದ. ನನಗ್ಯಾರ ಹುಡುಗಿ ಕೊಡತಾರ. ನನ್ನ ಕತಿ ಮುಗುದುಹೋಯ್ತು. ನಾನು ಬದುಕಿದ್ರು ವ್ಯರ್ಥ ಅಂತ ಅಳತಿದ್ದ. ಒಬ್ಬನಂತೂ ಸುಸೈಡ ಮಾಡಿಕೊಳ್ಳಕ ಹೋಗಿದ್ದ.

ಆದರೆ ಈಗ ಕಾಲ ಬದಲಾಗದಿದ್ರೂ ಮನಷ್ಯರ ಮನಸ್ಥಿತಿ ಬದಲಾಗಿದೆ. ಡ್ರೆಸ್ ಆಂಡ್ ಹೇರ್ ಡ್ರೆಸ್‌ನಲ್ಲಿ ಅಗಾಧ ರೀತಿಯಲ್ಲಿ ಬದಲಾವಣೆ ಬಂದದ.

ಹರದ ಪ್ಯಾಂಟುಗಳೆ ಶೋರೂಮ್‌ನಲ್ಲಿ ಅತಿ ಹೆಚ್ಚಿನ ಬೆಲೆಗೆ ದೊರಕುವಂತಹವು. ಹೆಚ್ಚು ಹರಿದಷ್ಟು ಅದಕ್ಕೆ ಹೆಚ್ಚಿನ ಬಾಬತ್ತು. ಜೀನ್ಸ್ ಅನ್ನೊ ಉಡುಪನ್ನು ಅದ್ಯಾರು ಕಂಡುಹಿಡಿದರೊ ಆ ಮಹಾಶಯನಿಗೆ ಪ್ರಣಾಮ ಸಲ್ಲಿಸಬೇಕು. ಅದು ಹಾಕಿಕೊಂಡರೆ ಎಲ್ಲಾದಕ್ಕೂ ಮಾಫಿ. ಹೊಲಸು ಆಗಿದ್ರು ತುಂಡಾಗಿದ್ರು. ಕೆಳಗ ಹರದಿದ್ರು ಫ್ಯಾಶನ್ನೆ. ನನ್ನ ಅಣ್ಣನ ಮಗನೊಬ್ಬ ಸಾಫ್ಟವೇರ ಇಂಜಿನಿಯರ್. ಅವನದು ವಾರಕ್ಕೊಮ್ಮೆ ಸ್ನಾನ, ಹದಿನೈದು ದಿನಕ್ಕೆ ಎರಡು ಪ್ಯಾಂಟು ಚೇಂಜ್ ಮಾಡೋದು. ಮೊನ್ನೆ ನಮ್ಮ ಟೀಚರ್ ಮಗ ಅದೆಂತದೊ ಕಟ್ಟಾಗಿರುವ 'ಕ್ರಷ್ ಜೀನ್ಸ್' ಅಂತೆ ಹಾಕ್ಕೊಂಡು ಬಂದಿದ್ದ. ನಾನು ಇದೆಂತದೊ ಫ್ಯಾಶನ್ನು ಅಂದೆ ಸರ್ ಇದರ ಬೆಲೆ 3000ರೂ ಅಂದ. ನಾನು ಮಾತಾಡಲಿಲ್ಲ. ಮೊನ್ನೆ ನನ್ನ ಮಗನ ಜೊತೆ ಬಟ್ಟೆ ಅಂಗಡಿಗೆ ಹೋಗಿದ್ದೆ. ಇಂತಹ ಡ್ರಸ್ ಕಣ್ಣಿಗೆ ಬೀಳಬೇಕೆ? ಅಲ್ಲಲ್ಲಿ ಹರಿದಿದ್ದ ಡ್ರೆಸ್‌ಗೆ 700ರೂ ಕೊಟ್ಟು ತರಲಾಯಿತು. ನಾನು ಸ್ವಲ್ಪ ಹೊಲಕ್ಕೆ ಕೈ ಹಾಕಿ ಲಾಸ ಆಗಿ ಹೊಸ ಪ್ಯಾಂಟು ಷರ್ಟ ಹೊಲಸಿಕೊಳ್ಳುವುದಕ್ಕೂ ಕಷ್ಟ ಎದುರಾಗಿ ರೆಡಿಮೇಡ್ಗೆ ಮೊರೆಹೋಗಿದ್ದೆ. ಅದರಲ್ಲಿ ಕಡಿಮೆ ಬೆಲೆಯಲ್ಲಿ ಸಿಗುವ ಜೀನ್ಸ ಪ್ಯಾಂಟು ತೊಗೊಂಡಿದ್ದೆ. ಅವು ಯಾಕೋ ಕಮ್‌ಫರ್ಟ ಎನಿಸಿದವು. ಕೆಲವರು 'ಮೇಷ್ಟ್ರ ಫ್ಯಾಷನ್‌ಗೆ ಬಿದ್ದಾರ' ಅಂದ್ರು. ಮುದುಕರ ತೊಟ್ಟು ಕೊಳ್ಳುತ್ತಿರುವಾಗ ಮಧ್ಯಮ ವಯಸ್ಕ ನನಗೇನು ಅನಕೊಂಡೆ. ಕೆಲವರು ಕೇಳಿದಾಗ ಬಜಟ್ ಕೊರತೆಪ ಅಂತ ತಿಳಿಸಿನೂ ಹೇಳಿದೆ.

ಇನ್ನೂ ಹೆಣ್ಣಮಕ್ಕಳ ಬಟ್ಟೆ ವಿಷಯಕ್ಕೆ ಬಂದ್ರಂತೂ ಮುಗುದುಹೋಯ್ತು. ತಿಂಗಳು ತಿಂಗಳಿಗೆ ಮೊಬೈಲ್ ಫೋನಗಳಂಗ ಡ್ರೇಸ್ ಔಟ್‌ಡೇಟೆಡ್ ಆಗಲಿಕತಾವ. ಮಕ್ಕಳಿಗೂ ದೊಡ್ಡವರಿಗೂ ಡ್ರೆಸ್ ರೇಟಿನಲ್ಲಿ ಫರಕ ಇಲ್ಲ. ಇನ್ನೂ ಎಷ್ಟೇಷ್ಟು ಬಟ್ಟೆ ಸಣ್ಣದಾಗುತ್ತೊ ಅಷ್ಟಷ್ಟು ರೇಟು. ಕುಪ್ಪಸ ಹರದ್ವು, ಮಿಡಿ ಹರದ್ವು ಒಂದ ಎರಡ ಆ ಕಥಿ. ಮಗಳು ಇಂತಹ ಡ್ರಸ್ ತೊಗೊಂಡಾಗ ಎದೆನ ಒಡೆದಿದ್ದೆ. ಹಾಕಿಕೊಳ್ಳೊದು ದೂರ ಉಳಿತು ಅದರ ಬೆಲೆ ಕೇಳಿಯೆ ಹೌಹಾರಿದ್ದೆ.

ಇನ್ನೂ ಹೇರ್ ಸ್ಟೈಲ್ಗೆ ಬಂದ್ರಂತೂ ಮುಗದು ಹೋಯ್ತು. ಬಿಳಿಕೂದಲು ಬಂದ್ರೆ ಚಿಂತಿ ಮಾಡ ಅವಶ್ಯಕತೆನ ಇಲ್ಲ, ಅದು ಫ್ಯಾಷನ್ನು......! ನಾನಾ ನಮೂನಿ ಹೇರ ಕಲರ್ ಬಂದಿವೆ, ಮೆಹಂದಿ ಇವೆ. ಹೆಣ್ಣುಮಕ್ಕಳಿಗಂತೂ ಅವರ ಕೂದಲ ಅಂದಹೆಚ್ಚಿಸುವ ನಾನಾ ನಮೂನಿ ಪ್ರೊಡಕ್ಟ ಬಂದಿವೆ. ನನಗ ಶ್ರೀಲಂಕಾದ ಆಟಗಾರ ಲಸಿತ್ ಮಲಿಂಗ್ ಕ್ರಿಕೇಟ್ ಗೆ ಪಾದಾರ್ಪಣೆ ಮಾಡಿದಾಗ ಅವನ ಕೂದಲು ಬಗ್ಗೆ ಬಲು ಕೂತೂಹಲವಿತ್ತು. ಹುಟ್ಟಾ ಹಾಂಗವೇನೋ ಅಂತ ಅನಕೊಂಡಿದ್ದೆ. ಮೊದಲ ಅವನ ಬಾಲಿಂಗನೆ ವಿಚಿತ್ರ ಜೊತೆಗೆ ಅವನು ಕೂದಲು ಬೇರೆ. ಇತ್ತೀಚಿಗೆ ನಮ್ಮೂರಗೂ ಅಂತಹ ಕೆಲವು ಮುಖಗಳನ್ನು ನೋಡಿದಾಗ ಬಿಳಿಕೂದಲು ಆ ಭಾಗಕ್ಕೆ ಮಾತ್ರವೆ ಆಗರತಾವೇನೊ ಅಂದುಕೊಂಡಿದ್ದೆ . ಆದರೆ ನಮ್ಮ ಸಲೂನ್ ಗೆಳೆಯ 'ಇಲ್ಲ ಸರ್..... ಅಂತಹ ಕೆಮಿಕಲ್ ಪೇಂಟ ಬರತಾವೆ' ಅಂದಾಗಲೆ ಗೊತ್ತಾಗಿದ್ದು. ಅದೆನೋ ಹುಚ್ಚು ಈ ವಯಂಡೆವಕ್ಕೆ.... ಚಂದ ಇರೊ ಕೂದಲಿಗೆ ಅದೇನು ಬಡಕೊಂತಾವೋ....ನಮ್ಮ ಶಾಲಿಗೂ ಬಿಟ್ಟಿಲ್ಲ.. ಇಬ್ಬರೂ ಹಿಂಗ ಮುಂದ ಹಿಂದ ನೆತ್ತಿ ಮೇಲೆ ಬಿಳಿ ಪೇಂಟ್ ಹಚ್ಚಿಕೊಂಡು ಬಂದಿದ್ದಾಗ ಅವರಿಗೆ ಕಟ್ಟು ಮಾಡಿಕೊಂಡು ಬರ್ರೆಲೆ ಎಂದು ಆವಾಜ ಹಾಕಿದೆ ಅವರು ಕೇಳಲಿಲ್ಲ. ಸಾಮೋಪಾಯ ಬೇಧೋಪಾಯ ಆಯ್ತೂ ದಂಡೋಪಾಯನೂ 'ಸರ್ ರೊಕ್ಕಕೊಟ್ಟು ಹಚ್ಚೊಗೊಂಡು ಬಂದ್ವಿ..

ಬಿಟ್ಟುಬಿಡಿ" ಅಂದ್ರು ನಾನು "ಮುಗುಸಟ್ಟೆ ಕಟಿಂಗ್ ಮಾಡತನಪ್ಪ ರೊಕ್ಕ ತೊಗೊಲ್ಲೇಳು" ಅಂತ ಹಿಡಿದು ಕಟ್ ಮಾಡಿಯೇ ಬಿಟ್ಟೆ.

ಹಿಂದೆ ಪ್ರಾಣಿಗಳಿಗೆ ಗುರುತು ಹಿಡಿಲಿಕ್ಕೆ ಬಾರ್ ಬಾರ್ ಪಟ್ಟಿ ಹಾಕತಿದ್ರು. ಇಲ್ಲ ಬರಿ ಹಾಕತಿದ್ರು. ಕೈದಿಗಳನ್ನು ಗುರುತಿಸಲಿಕ್ಕೆ ಕೆಲವೊಂದು ಮಾರ್ಕ ಮಾಡತಿದ್ರು. ಈಗ ಯಾವನೊ ನಟ, ಕ್ರಿಕೇಟರ್ ಅಡ್ಡ ಗೆರು ಹಾಕಿಸಕೊಂಡನೆಂದು ಆ ಸ್ಟೈಲ್‌ಗೂ ಮಕ್ಕಳು ಗಂಟುಬಿದ್ದಿರತಾವ. ಫಿಲ್ಮನ್ಯಾಗ ಏನು ಆಗಿರುತ್ತ ಅದೆ ಆಗಬೇಕು ಕ್ರಿಕೇಟ್ ದೇವರುಗಳು ಏನು ಸ್ಟೈಲ್ ಮಾಡತಾರೋ ಅದನ್ನೆ ಮಾಡಬೇಕು. ಕೋಹ್ಲಿ ಸ್ಟೈಲ್ ಬೇರೆ, ಹೆಬ್ಬುಲಿ ಸ್ಟೈಲ್ ಬೇರೆ ಮೊನ್ನೆ ಸೆಲ್ಯೂನ್ಗೆ ಹೋದಾಗ ನಮ್ಮ ವೆಂಕಟೇಶನನ್ನು ವಿಚಾರಿಸಿದಾಗ ಅವನು ಕೊಟ್ಟ ಪಟ್ಟಿ ಹೌಹಾರಿದೆ... ಮೊನ್ನೆ ಮಗನೂ ಅಪ್ಪಾ ನನಗ ಒನ್ ಸೈಡ್ ಕಟ್ ಮಾಡಸಪಾ, ಹೆಬ್ಬುಲಿ ಕಟ್ ಮಾಡಸಪಾ, ಅಡ್ಡ ಗೇರು ಹೊಡಸಪ ಅಂದಾಗ ಗಾಬರಿ ಬಿದ್ದಿದ್ದೆ. ನಾನು ಏನೊ ಹೇಳಿ ಕ್ರಾಪ ಬಾಚಂಗಿರಲ್ಲಪ್ಪ ಟಿ.ವಿಯಲ್ಲಿ ಬರೊ ರೌಡಿಗಳ ಚಿತ್ರ ತೋರಿಸಿ 'ಹೀಂಗ ಕಾಣತೀ ನೋಡು' ಎಂದು ತೋರಿಸಿದಾಗ ಅವನಿಗೆ ಏನು ಅನಿಸ್ತೊ....ಬಿಟ್ಟ – ನಾನು ಗೆದ್ದೆ. ಈಗಿನ ಕಾಲೇಜು ಹುಡುಗರೋ ಅವರ ಫ್ಯಾಶನ್ನೊ....ಒಂದು ರೀತಿ ನಾಪಿತ ವೃತ್ತಿ ಮಾಡೋರಿಗೆ ಅನುಕೂಲ ಆಗ್ಯಾದ. ಹಿಂದ ಇದ್ದ ಆರ್ಥಿಕ ತೊಂದರೆ ಅವರಿಗಿಲ್ಲ. ಒಂದು ಕಾಲಕ್ಕೆ ಎಲ್ಲರೂ ಎರಡ ಮೂರು ತಿಂಗಳಿಗೊಮ್ಮೆ ಸೆಲೂನ್‌ಗೆ ಭೇಟಿ ಕೊಡುವ ಹಾಗೆ ಕತ್ತರಿಸಿಕೊಳ್ಳೋರು.. ಆದರೆ ಈಗ ಅವರ ಬದುಕಿನ ಭಾಗ್ಯ ತೆಗೆದಿದೆ. ಅವರು ಈಗ ಹೈಲಿ ಇಂಪ್ರೂವ್ ಆಗ್ಯಾರ. ಅವನು ಎ.ಸಿ ರೂಮಗಳಾಗ್ಯಾವ, ನಾನಾ ನಮೂನಿ ಕಟಿಂಗ್ ಹೇರ್ ಡ್ರೈ ..ಜೊತೆಗೆ ಯುವಕರು ವಾರಕ್ಕೊಮ್ಮೆ ಸೆಲೂನ್‌ಗೆ ನಾನಾ ನಮೂನಿ ಸ್ಟೈಲ್ ನಲ್ಲಿ ಹೇರ್ ಕಟ್ ಮಾಡಿ ಬರುವ ಯುವಜನತೆಯಿಂದಾಗಿ ಉದ್ಧಾರ ಆಗತಿದ್ದಾರೆ. ನಾಲ್ಕು ಕೂದಲ ಕಟ್ಟು ಮಾಡಿ ಮೂನ್ನೂರು ನಾಲ್ಕುನೂರು ಅವರಿಂದ ಜಬರದಸ್ತಾಗಿ ಕಿತ್ತುಕೊಳ್ಳತಾರ ಫುಜಲ್ ವೇಸ್ಟ ಮಾಡಬ್ಯಾಡರಿ ಅಂತ...ಆದ್ರೂ ಕೇಳೊ ಜಾಯಮಾನದವರಲ್ಲ ಈಗಿನ ಯುವಟ್ರೆಂಡು....

ಮೊನ್ನೆ ಬೆಂಗಳೂರು ನಗರದಲ್ಲಿರುವ ಗೆಳೆಯನ ಮನೆಗೆ ಭೇಟಿ ಕೊಟ್ಟಿದ್ದೆ. ಇತ್ತೀಚಿಗೆ ಅವನು ಸಂಪ್ರದಾಯವಾದಿಯಾಗಿ ಕರ್ಮಠನಾಗಿದ್ದ...ಮನೆಯಲ್ಲೂ ಅದೆ ವಾತಾವರಣ ನಿರ್ಮಿಸಿದ್ದ. ಮಗನನ್ನು ನೋಡಿದಾಗ ಆಶ್ಚರ್ಯ ನಿಸಿತು. ಅವನು ಅಪ್ಪನ ಹಾಗೆ ಶಿಖಾ (ಚಂಡ್ರಿಕೆ) ಬಿಟ್ಟಿದ್ದ. 'ಶಾಲೆಗೆ ಹೋಗೊ ಹುಡುಗ..ಹೀಗೆ ಮಾಡಿದ್ರ ಹೇಗೋ... ಚುಡಾಯಿಸುವುದಿಲ್ಲವೇ' ಎಂದೆ... 'ಇಲ್ಲ ಗೆಳೆಯ, ಹೀಗೆ ಹೋಗೊದಿಂದ್ರನೆ ಶಾಲೆಯಲ್ಲಿ ವಿಶೇಷ ಗೌರವ ಇದೆ ಅವನಿಗೆ. ಅವನ ಗೆಳೆಯರೆಲ್ಲ ವಿಶೇಷವಾಗಿ ಕಾಣ್ತಾರೆ' ಎಂದ. ನನಗೆ ಮಾತು ಹೊರಡಲಿಲ್ಲ.

ಕಾಲಾಯಾ ತಸ್ಮೈ ನಮಃ. ■

---

**ಸಿಂಗ :** ಏನೋ ಮಂಗ್ಯಾ ಬೆಳಗ್ಗೆ ಬೆಳಗ್ಗೆ ಎಣ್ಣೆ ಅಂಗಡಿ ಮುಂದೆ ನಿಂತಿದೀಯ.

**ಮಂಗ್ಯಾ :** ನನ್ನ ಹೆಂಡ್ತಿ ಅಡಿಗೆಗೆ ಎಣ್ಣೆ ಮುಗಿದು ಹೋಗಿದೆ ಹೋಗಿ ತಗೊಂಡು ಬನ್ನಿ ಅಂದಳು. ಹೇಗೂ ಬಂದಿದೀನಲ್ಲ. ಅವಳ ಎಣ್ಣೆನೂ ನನ್ನ ಎಣ್ಣೆನೂ ಒಟ್ಟಿಗೇ ತಗೊಂಡು ಹೋಗೋಣ ಅಂತ.

# ಸಿನಿಮಾ ಟೈಟಲ್

**– ಅರವಿಂದ.ಜಿ. ಜೋಷಿ**

ಇದುವರೆಗೂ, ನಾಲ್ಕೈದು ಚಲನಚಿತ್ರ ನಿರ್ಮಿಸಿ, ಕೈ ಸುಟ್ಟು ಕೊಂಡ, ಶ್ರೀನಿವಾಸ ಅಲಿಯಾಸ್ ಶೀನಿ, ತನ್ನ ಹೊಸ ಚಿತ್ರಕ್ಕೆ ಅಪರೂಪದ, ಆಕರ್ಷಕ ಟೈಟಲ್ ಇಡುವುದರ ಬಗ್ಗೆ ತುಂಬಾ ತಲೆ ಕೆಡಿಸಿಕೊಂಡಿದ್ದ. ಮಿತ್ರನೋರ್ವನ (ಬಿಟ್ಟಿ)ಸಲಹೆಯಂತೆ ಊರಿನ ಪ್ರಸಿದ್ಧ ಹಿರಿಯ ಸಾಹಿತಿಯೊಬ್ಬರನ್ನು ಭೇಟಿ ಮಾಡಿ ಅವರ ಮಾರ್ಗದರ್ಶನ ಪಡೆಯಲು ತೀರ್ಮಾನಿಸಿದ.

ಅಂತೂ ಹರ ಸಾಹಸ ಪಟ್ಟು, ಅವರೇ ನಿಗದಿ ಪಡಿಸಿದ ದಿನಾಂಕಿನಂದು ಅದೂ, ಅರ್ಧ ಗಂಟೆ ಮಾತ್ರ ಚರ್ಚಿಸಲು ಅನುಮತಿ ಪಡೆದುಕೊಂಡಿದ್ದ.

ನಿಗದಿ ಪಡಿಸಿದ ದಿನಾಂಕದಂದು, ಶೀನಿ ತನ್ನ ಐದಾರು ಚೇಲಾಗಳೊಂದಿಗೆ, ಚಿತ್ರಕ್ಕೆ ಪೂರಕವಾಗಿರುವ ಕತೆಗಳನ್ನು ಹೊತ್ತು ತಂದು ಅವರೆದುರು ಕುಳಿತಿದ್ದ.ಉಭಯ ಕುಶಲೋಪರಿ ಮಾತು ಪೂರೈಸಿದ ನಂತರ ಆ ಹಿರಿಯ ಸಾಹಿತಿ, ಗಂಭೀರವಾಗಿ ಆತ ಕೊಟ್ಟ ಕತೆ ಓದಿ ಮುಗಿಸಿ, ಶೀನಿಯನ್ನು ನೋಡುತ್ತ "ಹಾಂ....ಚೆನ್ನಾಗಿದೆ ನೀವೇನು ಹೆಸರಿಡಬೇಕೆಂದಿದ್ದೀರಿ" ಎನ್ನುವ ಪ್ರಶ್ನೆ ಇಟ್ಟರು.ಅದಕ್ಕೆ ಶೀನಿ "ನೀವೇ ಹೇಳಿ" ಎಂದ. ಪುನಃ ಸಾಹಿತಿಗಳು"ಮೊದ್ಲು ನೀವ್ ಹೇಳ್ರಿ.. ಅದು ಸರೀನಾ ತಪ್ಪಾ ಅಂತ ನಾ ಆಮೇಲೆ ಹೇಳ್ತೇನೆ" ಎಂದರು. ಶೀನಿ ಪುನಃ "ನೀವೇ ಹೇಳಿ" ಎಂದು ಮುಂಚಿನ ತನ್ನ ಡೈಲಾಗ್ ಪುನರುಚ್ಚಿಸಿದ.

ಹೀಗೇ ಇವರ ಚರ್ಚೆಯಲ್ಲಿ ನಿಗದಿ ಪಡಿಸಿದ ಅರ್ಧ ಗಂಟೆ ಅವಧಿ ಖತಂ ಆಗಿತ್ತು.ಈಗ ಸಾಹಿತಿಯ ಟೇಬಲ್ ಮೇಲಿದ್ದ ಫೋನ್ ರಿಂಗಣಿಸಲಾರಂಭಿಸಿತು . ನಿಧಾನವಾಗಿ ಎತ್ತಿಕೊಂಡು "ಹಲೋ.." ಎಂದರು. ಆ ಬದಿಯಿಂದ "ಏ.. ಮೂರ್ತೀ.. ನಾನು ಕಣಯ್ಯ ಗೋಪಾಲಾ, ಇದೇನಾ..ನೀ ಟೈಂ ಕೀಪಪ್ ಮಾಡೋ ರೀತಿ? ಅಲ್ಲಯ್ಯಾ ಅರ್ಧ ಗಂಟೆ ಮೇಲಾಯ್ತುಲ್ಲಯ್ಯಾ ನಾನು ಬಂದು" ಎಂದಾಗ ಸಾಹಿತಿಯ ಮುಖ ಗಂಟಿಕ್ಕಿಕೊಂಡಿತು.ಅದೇ ಮೂಡ್‌ನಲ್ಲಿ ಶೀನಿಯತ್ತ ತಿರುಗಿ "ನೋಡ್ರಿ.. ನಿಮ್ಗೆ ಕೊಟ್ಟ ಟೈಂ ಮುಗೀತು, ಅದೇನ್ ಬೇಗ ಹೇಳ್ರಿ." ಎಂದು ಕೊಂಚ ಸಿಡುಕುತ್ತಲೇ ನುಡಿದಾಗ, ಶೀನಿ "ನೀವೇ ಹೇಳಿ." ಎಂದ. ಸಾಹಿತಿ ಮಹಾಶಯನಿಗೆ ರೋಸಿ ಹೋಯ್ತು, ಕೋಪ ತಾಳದೇ "ರೀ..ಎದ್ಹೋಗ್ರೀ" ಎಂದು ಕೂಗಿ ಸಾಗಹಾಕಿದರು.

ಸಪ್ಪೆ ಮುಖ ಹೊತ್ತ, ಶೀನಿ ಆಚೆಗೆ ಬಂದನಾದರೂ ಆತನ ತಲೆತುಂಬ ಮೂರು ಮಾತುಗಳು ವಿಷ್ಣು ಚಕ್ರದಂತೆ ಸುತ್ತುತ್ತಲೇ ಇದ್ದವು. ಮೊದಲನೇಯದು ಸಾಹಿತಿಗೆ ಪದೇ ಪದೇ, ತಾನು "ನೀವೇ ಹೇಳಿ" ಎನ್ನುವುದು, ಎರಡನೇಯದು ಸಾಹಿತಿ ಅವನಿಗೆ "ರೀ. ನಿಮ್ಮ ಟೈಂ ಮುಗೀತು" ಹಾಗೂ ಮೂರನೇಯದು ಅವರೇ ಹೇಳಿದ್ದು "ರೀ..ಎದ್ಹೋಗ್ರೀ.." ಎನ್ನುವ ಮಾತು. ಹೀಗೆ ಯೋಚನೆಗೊಳಗಾದ ಶೀನಿಯ ತಲೆಗೆ ಇದ್ದಕ್ಕಿದ್ದಂತೆ "ಛಕ್"ಎಂದು ಐಡಿಯಾ ಹೊಳೆದಂತಾಯ್ತು. ಮುಖದಲ್ಲಿನ ಮ್ಲಾನ ಕಳೆ ಮಾಯವಾಗಿ ಮಂದಹಾಸ ಮೂಡಿತು. ಅದೇ ಖುಷಿಯಲ್ಲಿ ಬಂದವ, ತನ್ನ ಹೊಸ ಚಿತ್ರಕ್ಕೆ "ನೀವೇ ಹೇಳಿ" ಎಂದು ಹೆಸರಿಟ್ಟ. ಅದು ಅಭೂತಪೂರ್ವ ಯಶಸ್ಸು ಕಂಡಿತು. ಅದರ ಲಾಭದ ಹಣದಲ್ಲಿ ಮರುವರ್ಷ ರ್ರೀ.. ನಿಮ್ಮ ಟೈಂ ಮುಗೀತು" ಎನ್ನುವ ಚಿತ್ರ ನಿರ್ಮಿಸಿದ. ಅದೂ ಬೊಂಬಾಟ್ ಆಗಿ ಓಡಿ, ಲಾಭ

ತಂದಿತು. ಮತ್ತೆ ಮರುವರ್ಷ "ರ್ರೀ.. ಎದ್ದೋಗ್ರೀ.." ಎನ್ನುವ ಸಿನಿಮಾ ನಿರ್ಮಿಸಿದ.

ಇಷ್ಟು ದಿನ ಬರೀ ನಷ್ಟದಲ್ಲೇ ಒದ್ದಾಡಿದ ಶೀನಿ ಈ ವಿಚಿತ್ರ ಟೈಟಲ್ ಹಾಕಿ, ಸಿನಿಮಾ ಮಾಡಿದವ ಫೀನಿಕ್ಸ್ ತರಹ ಎದ್ದು ಇಡೀ ಚಿತ್ರ ಲೋಕದ ತುಂಬ ಮಿರಮಿರನೇ ಮಿಂಚಲಾರಂಭಿಸಿದ. ■

---

# ಸೌಗಂಧಿಕಾ ಪುಷ್ಪ

**– ಕೆ.ಎಸ್.ಸೋಮೇಶ್ವರ**

ಪಾಪ ಆ ಬಡಪಾಯಿ ಬಲ ಭೀಮ! ಯಾರು ಗೊತ್ತಾಯಿತೇ ಅದೇ ಮಹಾಭಾರತದ ವಲಲ. ಹೆಣ್ಣು ವೇಷ ಹಾಕಿಕೊಂಡು ಕೀಚಕನಿಗೆ ಮರುಳು ಮಾಡಿದ ಧೀರ. ಈ ಶೂರ ಆ ಒಂದು ಸೌಗಂಧಿಕಾ ಪುಷ್ಪಕ್ಕಾಗಿ ಕಾಡು ಮೇಡೆಲ್ಲ ಅಲೆದು ಅದನ್ನು ತಂದಿಟ್ಟ ಅಂತ ನಮ್ಮ ಪುರಾಣದ ಕಥೆಗಳು ಹೇಳುತ್ತವೆ. ಅವರಿಗೆ ಬಿಡಿ ವನವಾಸದಲ್ಲಿ ವನವಾಸವೇ ಗತಿಯಾಗಿರುವಾಗ ಯಾವ ಕಾಡಾದರೇನು. ನಮ್ಮ ಪಶ್ಚಿಮ ಘಟ್ಟಗಳೋ, ಇಲ್ಲ ಆಫ್ರಿಕಾದ ನಿತ್ಯ ಹರಿದ್ವರಣ ಕಾಡುಗಳೋ ಯಾರೂ ಸರಿಯಾಗಿ ಚಿತ್ರಿಸಿಲ್ಲ. ಆಗ ಎಲ್ಲಿ ಫಿಲ್ಮ್ ಷೂಟಿಂಗ್ ಬಹಳ ಕಷ್ಟವಾಗಿತ್ತು. ಈ ಸೌಗಂಧಿಕಾ ಪುಷ್ಪ ಯಾರಿಗಾಗಿ ? ಇನ್ನು ಯಾರು ಮುದ್ದಿನ ಮಡದಿ ದ್ರೌಪದಿಗೆ ತಾನೇ. ಹಿಡಿಂಬಿ ಅವರೆಲ್ಲ ಒಂತರಾ ಹಾಲ್ಫ್ ಅಂಡ್ ಪ್ರೊಸೀಡ್ !

ಪಾಪ ಆ ದ್ರುಪದ ರಾಜನ ಪುತ್ರಿ, ದ್ರೌಪದಿ ಪಂಚ ಪಾಂಡವರ ಮನೋ ವಲ್ಲಭೆ ಇನ್ಯಾರನ್ನು ಕೇಳ ಬೇಕು. ಆ ಧರ್ಮರಾಯನೋ ಬಹಳ ಸೋಂಭೇರಿ. ಅವನಿಗೆ ಪಗಡೆ ದಾಳ ಸಿಕ್ಕಿದರೆ ಸಾಕು ಕಾಯಿಗಳನ್ನು ನಡೆಸುತ್ತ ಹಳ್ಳಕ್ಕೆ ಬೀಳುತ್ತಿರುತ್ತಾನೆ. ಇನ್ನು ಹೆಚ್ಚು ಕೆಲಸ ಬೊಗಸೆ ಏನೂ ಇಲ್ಲದ ನಕುಲ ಸಹದೇವರು. ಇವರು ಮೇಲಿನ ಮೂವರಿಗೆ ಹೋಲಿಸಿದಲ್ಲಿ ಶುದ್ಧ ಎಳಸು ಮತ್ತು ಜನರಲ್ ನಾಲೆಡ್ಜ್ ತುಸು ಕಡಿಮೆಯೇ. ಇನ್ನು ಉಳಿದದ್ದು ರಣ ಧೀರ ಪಾರ್ಥ ಅಂದರೆ ಅರ್ಜುನ. ಅವನೋ ಭಾರಿ ಅಡ್ವೆಂಚುರಸ್. ಪುಷ್ಪ ಹುಡುಕಲು ಹೋಗಿ ಎಲ್ಲೆಲ್ಲೋ ತಗಲು ಹಾಕಿಕೊಳ್ತಾನೆ. ಅವನಿಗೆ ಜೀವಂತ ಪುಷ್ಪಗಳೇ ಬೇಗ ಕಣ್ಣಿಗೆ ಕಾಣುತ್ತವೆಯಂತೆ.

ನೋಡಿ ಈಗಿನ ದ್ರೌಪದಿಯರಿಗೆ ಅಂದರೆ ಪಂಚ ಪಾಂಡವರ ಪತ್ನಿಯಲ್ಲ. ನಮ್ಮ ಯುಗದ ಪತ್ನಿಯರಿಗೆ ಇವೆಲ್ಲ ಆಗಲ್ಲ ಸೌಗಂಧಿಕಾ ಪುಷ್ಪ ಬೇಕೆಂದರೆ ಮನೆಯ ಅಂಗಳದಲ್ಲೇ ದೊರೆಯಬಹುದು. ನಮ್ಮ ತೋಟಗಾರಿಕಾ ಇಲಾಖೆಯವರು ಹೊಸ ಹೊಸ ಅವಿಷ್ಕಾರಗಳ ಮಾಡಿ ಅದನ್ನ ಮಾಡಿದ್ದಾರಂತೆ. ಈಗಿನ ವರ್ಕ್ ಫ್ರಮ್ ಹೋಮ್ ಯುಗದಲ್ಲಿ ಅವರಿಗೆ ಹೋಮ್ ವರ್ಕೇ ಜಾಸ್ತಿ. ಪಾಪ ಬಡಪಾಯಿಗಳು . ಕಡಲಿನ ಆಳವ ತಿಳಿದವರಾರು, ಹೆಣ್ಣಿನ ಮನಸನು ಅರಿತವರಾರು, ಮೀನಿನ ಹೆಜ್ಜೆ ಬಲ್ಲವರಾರು ಎನ್ನುತ್ತ ತಲೆ ಮೇಲೆ ಕೈ ಇಟ್ಟು ಕುಳಿತಿವೆ .

ಇಷ್ಟಕ್ಕೂ ಈ ಸೌಗಂಧಿಕಾ ಪುಷ್ಪಗಳೆಂದರೆ ಯಾವುದು ಅಂತೀರಾ! ಅವು ಈಗ ನಮ್ಮ–ನಿಮ್ಮ ಮನೆಯಂಗಳದಿ ದೊರೆಯುವ ಬಿಳಿ ಮತ್ತು ನೀಲಿ ಲಿಲಿ ಹೂಗಳೇ ಅಂತ ತೋಟಗಾರಿಕಾ ಇಲಾಖೆ ಧೃಢೀಕರಿಸಿದೆ. ಇವೆಲ್ಲ ಮೊದಲೇ ಗೊತ್ತಿದ್ದರೆ, ಆ ಬಲಶಾಲಿ ಭೀಮನಿಗೆ ಜಿ.ಪಿ.ಎಸ್. ಓದಲು ಬಂದಿದ್ದರೆ ಸುಲಭವಾಗಿ ಹುಡುಕಿ ತರುತ್ತಿದ್ದನೇನೋ ಯಾರು ಬಲ್ಲರು ಇವರುಗಳ ಭುಜ ಬಲ ಪ್ರತಾಪ. ■

# ಸಾಲ ಬೇಕಾ ಸಾಲ?

**– ಗೀತಾ ಕುಂದಾಪುರ**

ಮಧ್ಯಾಹ್ನ ಮೂರು ಗಂಟೆ, ಹೊಟ್ಟೆ ತುಂಬಾ ಉಂಡು, ಕೂತ ಸೋಫಾದಲ್ಲೇ ಒರಗಿ ಗಾಡ ನಿದ್ದೆಯಲ್ಲಿದ್ದೆ. ಮೊಬೈಲ್ ರಿಂಗಾಯಿತು "ಹಲ್ಲೋ" ಎಂದೆ, "ಹಲ್ಲೋ ನಿಮ್ಮ ಸೆಲರಿಯೋ ಕಾರಿನ ಮೇಲೆ ಲೋನ್ ಸ್ಯಾಂಕ್ಷನ್ ಆಗಿದೆ, ಪೇಪರ್ ತೆಗೆದುಕೊಂಡು ಸೀದಾ ಬ್ಯಾಂಕಿಗೆ ಬನ್ನಿ" ನಿದ್ದೆ ಒಂದೇ ಗಳಿಗೆಯಲ್ಲಿ ಹಾರಿ ಹೋಯಿತು. ನಾನು ಲೋನು ಬೇಕೆಂದು ಬ್ಯಾಂಕನ್ನು ಸಂಪರ್ಕಿಸಿರಲಿಲ್ಲ, ಆದರೂ ಲೋನ್ ಕೊಡುತ್ತಿದ್ದಾರೆ. ಅಪ್ಪಯ್ಯ ಚಿಕ್ಕ ಪ್ರಾಯದಲ್ಲೇ 'ಸಾಲ ಶೂಲ ಮಗಳೇ ನೆನಪಿಟ್ಟುಕೊ' ಎಂದಿದ್ದರು, ಲೋನ್ ಇರಲಿ, ವಸ್ತುಗಳನ್ನೂ ಕಂತಿನಲ್ಲಿಯೂ ಕೊಂಡವಳಲ್ಲ. ಆದರೆ ಹಠ ತೊಟ್ಟ ಬ್ಯಾಂಕುಗಳಿಂದ ಲೋನ್ ತೆಗೆದುಕೊಳ್ಳಿ ಎನ್ನುವ ಕಾಲ್ ಬರುತ್ತಿದೆ, ಅದರೊಂದಿಗೆ ಮಧ್ಯಾಹ್ನ 3–4 ಗಂಟೆಗೆ ಫೋನ್ ಮಾಡಿ ನಿದ್ದೆಯನ್ನೂ ಹಾಳು ಮಾಡುತ್ತಿದ್ದಾರೆ.

ಕಾಲಚಕ್ರ ಉರುಳುತ್ತದೆ ಎನ್ನುವುದು ಸತ್ಯವಾದ ಮಾತು, "ಒಂದು ಡೆಪೊಸಿಟ್ ಇಡಿ ಮಾರಾಯ್ರೇ, ಟಾರ್ಗೆಟ್ ಅಚ್ಯೂವ್ ಆಗಿಲ್ಲ" ಎನ್ನುತ್ತಾ ಹಿಂದೆ ಮುಂದೆ ಸುತ್ತುತ್ತಿದ್ದ ಬ್ಯಾಂಕ್, ಫೈನಾನ್ಸ್ ಕಂಪೆನಿಗಳು, ಕೋ–ಓಪರೆಟ್ಯೂ ಸೊಸೈಟಿಗಳು ಕೆಲವೇ ವರ್ಷಗಳಲ್ಲಿ "ಕಾರು ಲೋನು, ಮನೆ ಲೋನು, ಗೋಲ್ಡ್ ಲೋನ್, ಎಜುಕೇಶನ್ ಲೋನು, ಹಸು ಲೋನು ಯಾವುದು ಬೇಕು ಹೇಳಿ? ಎಂದು ಕೇಳುತ್ತಿದ್ದಾರೆ.

ಕಷ್ಟಗಳು ಹಿಂದೆಯೂ ಇತ್ತು, ಈಗಲೂ ಇದೆ, ಎದುರಾಗುತ್ತಿರುವ ಕಷ್ಟಗಳು ಕೊರೋನಾದಂತೆ ರೂಪಾಂತರಿಯಾಗಿದೆ. ಹಿಂದೆ ಲೋನ್ ಸಿಗುವುದು ಕಷ್ಟವಾಗಿದ್ದರೆ ಈಗ ಲೋನ್ ಕೊಡುವವರ ಕಾಟದಿಂದ ತಪ್ಪಿಸಿಕೊಳ್ಳುವುದು ಸುಲಭವಲ್ಲ. ಒಮ್ಮೆ ಕೋ–ಒಪರೇಟ್ಯೂ ಸೊಸೈಟಿಯೊಂದರಿಂದ ಪ್ರತೀ ದಿನವೆಂಬಂತೆ ಫೋನ್ ಬರತೊಡಗಿತು, ನಮ್ಮಿಂದ ಯಾವುದಾದರೂ ಲೋನ್ ತೆಗೆದುಕೊಳ್ಳಿ ಎನ್ನುವ ದಯನೀಯ ಬೇಡಿಕೆ. ನನ್ನ ಮಟ್ಟಿಗೆ ಹೇಳಬೇಕೆಂದರೆ ಮಕ್ಕಳು ಓದುತ್ತಿದ್ದಾರೆ, ಕಷ್ಟ ಪಟ್ಟು ಕಟ್ಟಿದ ಸ್ವಂತ ಮನೆಯಲ್ಲಿದ್ದೇವೆ, ಚಿನ್ನದ ಬಗ್ಗೆ ಆಸೆ ಇಲ್ಲ, ಕಾರು ಮನೆಯ ಮುಂದೆ ನಿಂತಿದ್ದು, ಎಲ್ಲಿಗಾದರೂ ಹೊರಡಬೇಕೆಂದರೆ ಸ್ಕೂಟರನ್ನೇ ಸ್ಟಾರ್ಟ್ ಮಾಡುತ್ತಾರೆ ಗಂಡ, ಕಾರಿನಲ್ಲಿ ಹೊರಡೋಣವೆಂದರೆ ಪೆಟ್ರೋಲಿನ ದರ ಏರಿದೆ ಎನ್ನುತ್ತಾರೆ, ಆರಕ್ಕೇರದ, ಮೂರಕ್ಕೆ ಇಳಿಯದ ಮಧ್ಯಮ ವರ್ಗದ ಮಹಿಳೆಯ ಅಸಹಾಯಕತೆ ನನಗೇ ಗೊತ್ತು, ಈ ಚಂದಕ್ಕೆ ಲೋನ್ ತೆಗೆದುಕೊಂಡು ಮಾಡುವುದೇನು? ಅವರ ಅಸಹಾಯಕತೆಯ ಬಗ್ಗೆ ಪಾಪ ಎನಿಸಿದರೂ ದಿನಾ ಫೋನ್ ಮಾಡಿ ಉಪದ್ರ ಕೊಟ್ಟವರು ಎದುರಿಗೆ ಬಂದರೆ ಸೀಳಿ ಹಾಕುವಷ್ಟು ಸಿಟ್ಟೂ ಇತ್ತೆನ್ನಿ "ಲೋನ್ ಬೇಡವೆಂದು ಎಷ್ಟು ಸಲ ಹೇಳಬೇಕು? ನಿಮ್ಮ ಫೋನ್ ನಂಬರನ್ನು ಪೋಲಿಸರಿಗೆ ಕೊಟ್ಟುವುದೇ ಸೈ" ಎಂದೆ, ಅತ್ತ ಫೋನ್ ಕುಕ್ಕಿದ ಶಬ್ದ. ನನ್ನ ಬೆದರಿಕೆ ಕೆಲಸ ಮಾಡಿತು, ಮತ್ತೆ ಫೋನ್ ಬರಲಿಲ್ಲ.

ಒಂದೆರಡು ವರ್ಷಗಳಿಂದ ಈ ಕೊರೋನಾ ಕಾಟದಿಂದ ಲೋನ್ ಕೊಡುವವರ ಕಾಟ ಕಡಿಮೆಯಾಗಿತ್ತು. ಕೊರೋನಾ ಕಡಿಮೆಯಾಗುತ್ತಿದ್ದಂತೆ ಮತ್ತೆ ಮಧ್ಯಾಹ್ನ

ಮೂರು ಗಂಟೆಗೆ ಫೋನ್ ಬರಲು ಶುರುವಾಯಿತು. ಸಿಟ್ಟು ತಡೆಯಲಾರದೆ ಮಾಡಿಸುತ್ತೇನೆ ಇವರಿಗೆ ಎಂದುಕೊಂಡು "ಒಂದು ಕೋಟಿ ಸಾಲ ಬೇಕು" ಎಂದೆ, ಮ್ಯಾನೇಜರ್ ಹತ್ತಿರ ಕೇಳಿ ನೋಡುತ್ತೇನೆ ಎಂದು ಫೋನ್ ಇಟ್ಟಳು, ನನ್ನ ಬುದ್ಧಿವಂತಿಕೆಗೆ ನಾನೇ ಬೆನ್ನು ತಟ್ಟಿಕೊಂಡೆ. ಸಂಜೆ ಕಾಫಿ ಲೋಟವನ್ನು ತುಟಿಗಿಡುತ್ತಿದ್ದಂತೆ ಕಾಲಿಂಗ್ ಬೆಲ್ ಶಬ್ದವಾಯಿತು. "--- ಬ್ಯಾಂಕಿನಿಂದ ಬಂದದ್ದು, ಇವರು ನಮ್ಮ ಮ್ಯಾನೇಜರ್, ಈ ಲೋನ್ ಅಪ್ಲಿಕೇಶನ್ನಿಗೆ ಸೈನ್ ಹಾಕಿ ಬಿಡಿ, ಒಂದು ವಾರದ ನಂತರ ಹಂತ, ಹಂತವಾಗಿ ಒಂದು ಕೋಟಿಯನ್ನು ನಿಮ್ಮ ಬ್ಯಾಂಕ್ ಅಕೌಂಟಿಗೆ ಹಾಕಲಾಗುವುದು". ಮೆಟ್ಟಿ ಬಿದ್ದೆ, ಸುಮ್ಮನೆ ತಮಾಷೆಗೆಂದರೆ ವಿಳಾಸ ಹುಡುಕಿಕೊಂಡು ಸೀದಾ ಮನೆಗೇ ಬಂದು ಬಿಡುವುದೇ? ಯಾವುದಕ್ಕಾಗಿ ಲೋನು ಎನ್ನುವ ಪ್ರಶ್ನೆ ಇಲ್ಲ, ಸೆಕ್ಯೂರಿಟಿ ಬೇಡವೇ ಇವರಿಗೆ, ತಾಳಲಾರದೇ ಅದೇ ಪ್ರಶ್ನೆಯನ್ನು ಅವರ ಮುಂದಿಟ್ಟೆ. "ನೀವು ನಂಬಿಕಸ್ತ ಕಸ್ಟಮರ್, ಒಳ್ಳೆಯ ಉದ್ದೇಶಕ್ಕೇ ಇರುಬಹುದು, ಹೇಳಬೇಕೆಂದು ನಿರ್ಬಂಧಿಸುತ್ತಿಲ್ಲ" ಎನ್ನುತ್ತಾ ಮತ್ತೊಂದು ಕಾಗದವನ್ನು ಮುಂದಿಟ್ಟು, ಈ ಜಾಗದಲ್ಲಿ ಸೈನ್ ಮಾಡಿ ಎಂದರು, ಇದೇನಿದು ಎಂದೆ "ಮತ್ತೇನಿಲ್ಲ, ನಿಮ್ಮ ಸಂಬಳ ನಮ್ಮ ಬ್ಯಾಂಕಿನಲ್ಲಿರುವ ಅಕೌಂಟಿಗೇ ಟ್ರಾನ್ಸಫರ್ ಮಾಡಲು ಕಾಗದ ಪತ್ರ, ನಿಮ್ಮ ಸಂಬಳ ಮತ್ತು ಲೋನಿಗೆ ಲಿಂಕ್ ಮಾಡುತ್ತೇವೆ. ಎಂದರು, ತಲೆ ಚಚ್ಚಿಕೊಳ್ಳತೊಡಗಿದೆ. ನಾನು ಕೆಲಸದಲ್ಲಿ ಇದ್ದದ್ದು ಹೌದು, ಈಗ ಕೆಲಸ ಬಿಟ್ಟು ಮನೆಯಲ್ಲಿದ್ದೇನೆ, ಸಂಬಳವೂ ಇಲ್ಲ, ಗಿಂಬಳವೂ ಇಲ್ಲ.. ಅದನ್ನೇ ಅವರೊಡನೆಂದೆ. "ಮೊದಲೇ ಹೇಳುವುದಲ್ಲವೇ" ಎನ್ನುತ್ತಾ ತಟ್ಟನೆ ಮೇಲೆದ್ದು ಹೊರಟೇ ಬಿಟ್ಟರು.

ಟೀವಿ ತಿರುಗಿಸಿದರೆ ಅಲ್ಲೂ ಲೋನಿನ ವಿಚಾರಗಳೇ "ನಮ್ಮದೇ ಫೈನಾನ್ಸಿಗೆ ಬನ್ನಿ ಚಿನ್ನ ಅಡವಿಟ್ಟು ಸಾಲ ಕೊಡತ್ತೇವೆ" ಎನ್ನುವ ತುಂಬು ಉತ್ಸಾಹದ ಪ್ರೋತ್ಸಾಹಕ ಜಾಹಿರಾತುಗಳು. ಪೇಪರ್ ಮೊಗಚಿದರೆ ಇ.ಎಮ್.ಐ. ಮೇಲೆ ವಸ್ತುಗಳನ್ನು ಖರೀದಿಸಿ ಎನ್ನುವ ಜಾಹಿರಾತುಗಳು, ಒಟ್ಟಿನಲ್ಲಿ ಎಲ್ಲರನ್ನೂ ಸಾಲಗಾರರನ್ನಾಗಿ ಮಾಡುವುದಲ್ಲದೆ ಕೊಳ್ಳುಬಾಕರನ್ನಾಗಿಯೂ ಮಾಡುತ್ತಿದ್ದಾರೆ. ಪಕ್ಕದಲ್ಲಿ ಹೊಸತಾಗಿ ತೆರೆದ ಫೈನಾನ್ಸ್ ಕಂಪೆನಿಯವರು ಬೆನ್ನು ಹತ್ತಿ "ಎಮ್ಮೆ ಸಾಲ ತೆಗೆದುಕೊಳ್ಳಿ ಮೇಡಂ, ಕಡಿಮೆ ಬಡ್ಡಿ ದರ", ಅದಕ್ಕೆ ಎಮ್ಮೆ ಸಾಕಬೇಕಲ್ಲವೇ ಎಂದರೆ, "ಅದಕ್ಕೇನು ಕಟ್ಟಿಬಿಡಿ, ಒಳ್ಳೆಯ ತಳಿಯ ಎಮ್ಮೆಗಳನ್ನು ನಾವೇ ಕೊಡಿಸುತ್ತೇವೆ" ಎಂದರು. ಹಿತ್ತಲಿನ ಜಾಗವಿಲ್ಲದ ಪುಟ್ಟ ಮನೆಯಲ್ಲಿ ನಮಗೇ ಓಡಾಡಲು ಜಾಗವಿಲ್ಲ, ಇನ್ನು ಎಮ್ಮೆಯನ್ನು ಎಲ್ಲಿ ಕಟ್ಟುವುದು? ಪಕ್ಕದವರ ಮನೆಯಲ್ಲೇ?

ಒಂದು ಬೆಳಿಗ್ಗೆ ಗಡಿಬಿಡಿಯಲ್ಲಿ ಮನೆ ಕೆಲಸ ಮಾಡುತ್ತಿದ್ದೆ, ಬ್ಯಾಂಕಿನಿಂದ ಫೋನು ಬಂತು, ಈ ಸಲ ಮಧ್ಯಾಹ್ನವಲ್ಲ ಎನ್ನುವುದೇ ಸಮಾಧಾನ "ಕ್ರೆಡಿಟ್ ಕಾರ್ಡ್ ಬಂದಿದೆ ಎರಡು ದಿನದೊಳಗೆ ಬಂದು ಕಲೆಕ್ಟ್ ಮಾಡಿಕೊಂಡು ಹೋಗಿ" ಎಷ್ಟು ತಲೆ ಕೆರೆದುಕೊಂಡರೂ ಕ್ರೆಡಿಟ್ ಕಾರ್ಡಿಗಾಗಿ ಅಪ್ಲೈ ಮಾಡಿದ್ದು ನೆನಪಾಗಲಿಲ್ಲ, ಇರಲಿ ಸಂತೋಷದಿಂದ ಕೊಡುತ್ತಿದ್ದಾರಲ್ಲ, ತೆಗೆದುಕೊಂಡರೇನಡ್ಡಿ ಎಂದುಕೊಂಡು ಬ್ಯಾಂಕಿಗೆ ಹೊರಟೆ. "ಕ್ರೆಡಟ್ ಕಾರ್ಡ್ ಗೆ ಪ್ರತ್ಯೇಕ ಚಾರ್ಜುಗಳಿವೆ, ವಿಚಾರಿಸಿದ್ದೀಯಾ? ನೆನಪಿಟ್ಟುಕೊ ಈ ಲೋಕದಲ್ಲಿ ಯಾವುದೂ ಬಿಟ್ಟಿ ಬಾರದು" ಪೇಪರಿನೊಳಗೆ ತಲೆ ಹುದುಗಿಸಿಕೊಂಡೇ ಗುಡುಗಿದರು ಪತಿ ರಾಯರು. ಹೌದಲ್ಲವೇ ತಲೆ ತುರಿಸಿಕೊಂಡು ವಿಚಾರಿಸಿದಾಗ ಹಲವಾರು ಕಂಡಿಶನ್ನುಗಳು ಹೊರ ಬಂದವು.

ಒಟ್ಟಿನಲ್ಲಿ ಸಾಲ ಶೂಲವೇ, ಸಾಲ ಮಾಡಿದರೂ, ಸಾಲ ಬೇಡದಿದ್ದರೂ.

■

। ದಂನಆ

- ನಮ್ಮ ಪೂರ್ವಿಕರು ಸಾವಿಗೆ ಮದ್ದು ಕಂಡುಹಿಡಿದಿದ್ದರೆ ಪ್ರಪಂಚ ಈಗಿರುವಂತೆ ಇರುತ್ತಿತ್ತೆ?
- ಕತೆಯ ಆಚೆಗೆ ಪಾತ್ರಗಳು ಏನಾಗುತ್ತವೆ ಎಂಬುದು ಕತೆಗಾರನಿಗೆಲ್ಲಿ ಗೊತ್ತಿರುತ್ತದೆ?
- ಅವರ ಮನೆ ಎಷ್ಟು ದೊಡ್ಡದಿದ್ದಿತೆಂದರೆ ಅಡಿಗೆ ಮನೆಯಲ್ಲಿ 9 ಗಂಟೆ ಆಗಿದ್ದರೆ ವೆರಾಂಡದಲ್ಲಿ 11 ಗಂಟೆ ಆಗಿರುತ್ತಿತ್ತು.
- ನನಗೆ ಸಹಾಯ ಬೇಡ ಎಂದು ನಿಜವಾಗಿಯೂ ನಂಬಿರುವವರಿಗೆ ಸಹಾಯ ಮಾಡುವುದು ಅಸಾಧ್ಯ.
- ದಿ ಕಾಸ್ ಆಫ್ ಇನ್‌ಡೈಜಷನ್ ಈಸ್ ಆಫನ್ ಎ ಸ್ಕ್ವೇರ್ ಮೀಲ್ ಇನ್ ರೌಂಡ್ ಸ್ಟಮಕ್.
- ಕೆಲವರು ಅನುಭವದಿಂದ ಮಾತನಾಡುತ್ತಾರೆ. ಇನ್ನು ಕೆಲವರು, ಅನುಭವದಿಂದ, ಸುಮ್ಮನಿರುತ್ತಾರೆ.
- ಉದ್ದನೆಯ ಅನುಭವದ ಮೇಲೆ ರೂಪುಗೊಂಡಿರುವ ಸಣ್ಣ ವಾಕ್ಯವೇ ಗಾದೆ.
- ಇತ್ತೀಚಿನ ದಿನಗಳಲ್ಲಿ ನಾವೆಲ್ಲರೂ ಕ್ರಿಯಾಶೀಲರಾಗಿರುವದಕ್ಕಿಂತ ಹೆಚ್ಚಾಗಿ ಪ್ರತಿಕ್ರಿಯಾಶೀಲರಾಗುತ್ತಿದ್ದೇವೆ ಎಂದು ಅನಿಸುತ್ತಿಲ್ಲವೆ?
- ರೋಗವೊಂದು ನಮ್ಮನ್ನು ಆಕ್ರಮಿಸುವುದು ವೈರಾಣುವಿನ ಸಾಮರ್ಥ್ಯದಿಂದಲ್ಲ. ನಮ್ಮದೇ ನಿರೋಧಕ ಶಕ್ತಿಯ ಕೊರತೆಯಿಂದ.
- ಐಡಿಯಾಸ್ ಡೋಂಟ್ ವರ್ಕ್ ವಿಥೌಂಟ್ ಯು ಡುಯಿಂಗ್ ದಿ ವರ್ಕ್.
- ಮನುಷ್ಯ ಇಲ್ಲದಾಗ ನೆನಪಿಸಿಕೊಂಡು ಪ್ರೀತಿಸುವುದು ಅವನು ಇದ್ದಾಗ ಪ್ರೀತಿಸಿದ್ದಕ್ಕಿಂತ ದೊಡ್ಡದು.
- ರಿಲಿಜಿಯನ್ ಅನ್ನೋದು ಬರಿ ಮೇಲಂಗಿ ಮಾತ್ರ. ಆ ಮೇಲಂಗಿಗೂ ನಮ್ಮ ನಡವಳಿಕೆಗೂ ಯಾವಾಗಲೂ ಸಂಬಂಧ ಇರುತ್ತದೆ ಅನ್ನೋ ಗ್ಯಾರಂಟಿ ಇಲ್ಲ.
- ಫೈಲ್ಯೂರ್ಸ್ ಶುಡ್ ನಾಟ್ ಬಿ ಸ್ಟಾಪಿಂಗ್ ಸ್ಟೋನ್ಸ್ ಟು ಸಕ್ಸೆಸ್.
- ಕಂಬಳಿ ಹುಳಗಳನ್ನೆಲ್ಲ ಕೊಂದು ಚಿಟ್ಟೆಗಳೇ ಇಲ್ಲ ಎಂದು ಹಲುಬಿದರೆ?
- ಮಾಸ್ಟರ್ ದಿ ತ್ರೀ ಮಂಕೀಸ್ – ಮೊಬೈಲ್, ಮನಿ ಅಂಡ್ ಮೂಡ್.
- ನಾವು ಬದುಕೇ ಇರಲು ಸಾಧ್ಯವಿಲ್ಲ. ಆದರೆ ಬದುಕುಳಿಯಬಹುದಾದಂತಹ ಸಾಧನೆ ಮಾಡಲು ಸಾಧ್ಯ. ■

TEMPLE OF KNOWLEDGE

# BEECHI Systems & Services

Email: admin@beechi.in
Web: www.beechi.in
Mob: 98452 64304

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

# Beechi Prakashana ಬೀಚಿ ಪ್ರಕಾಶನ



**Books Available**

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

**BUY Books online and get 10% discount.**

Email : admin@beechi.in | **www.beechi.in** | 98452 64304

You could also request any book of your choice by WhatsApp

# ಚರ್ಚೆ ಎಂಬ ಕದನ ಕಣ

**– ಸುಮಾ ರಮೇಶ್**

ದೂರದರ್ಶನದಲ್ಲಿ ಪ್ರಚಲಿತ ವಿದ್ಯಮಾನದ ಬಗ್ಗೆ ಬಿರುಸಿನ ಚರ್ಚೆ ನಡೆಯುತ್ತಿತ್ತು. ವಿಷಯದ ಪರ ಹಾಗು ವಿರೋಧ ಗುದ್ದಾಡಲು ಕೆಲವು ಗಣ್ಯರು ಹಾಗು ವಿದ್ಯಾರ್ಥಿಗಳನ್ನು ಕರೆತಂದು ಕೋಳಿ ಜಗಳಕ್ಕೆ ಬಿಟ್ಟಂತೆ ಕುಳ್ಳಿರಿಸಿದ್ದರು. ಹೊಸಚಿಗುರು ಹಳೆ ಬೇರು ಒಂದೇ ವೇದಿಕೆಯಲ್ಲಿ ಕುಳಿತು ಫೈರಿಂಗ್‌ಗೆ ಅಣಿಯಾಗಿದ್ದವು. ಮಧ್ಯದಲ್ಲಿ ಕಾರ್ಯಕ್ರಮದ ನಿರೂಪಕರು ಊದುಕೊಳವೆಯ ಪಾತ್ರ ವಹಿಸಿದ್ದರು. ಅಲ್ಲಿ ಡಿಬೇಟಿಗಿಂತಲೂ ಹೆಚ್ಚಾಗಿ ದ್ವೇಷದ ದಳ್ಳುರಿಯೇ ಕಾಣುತ್ತಿತ್ತು. ವಾದ ವಿಕೋಪಕ್ಕೆ ಹೋಗಿ ಕೈ ಕೈ ಮಿಲಾಯಿಸುವ ಹಂತ ತಲುಪಿದಾಗ ಜಾಹಿರಾತುಗಳು ಹರಿದು ಬಂದು ಮಾನ ಕಾಪಾಡುತ್ತಿದ್ದವು. ಹತ್ತು ಹದಿನೈದರ ಪ್ರಾಯದ ಕೂಸುಗಳ ಕಣ್ಣಲ್ಲೂ, ಅವುಗಳ ವಿಷಯ ಮಂಡನೆಯಲ್ಲೂ ಮುಗ್ಧತೆ ಮರೆಯಾಗಿ ರೋಷ, ಆಕ್ರೋಶಗಳೇ ತುಂಬಿದ್ದವು. ಅದೊಂದು ಆರೋಗ್ಯಕರ ಚರ್ಚೆಯ ವೇದಿಕೆಯಾಗಿರದೆ ಕದನ ಕಣದಂತೆ ಗೋಚರಿಸುತ್ತಿತ್ತು. ಇಂದು ಸುದ್ದಿಯನ್ನು ಯಥಾವತ್ತಾಗಿ ಪ್ರಸ್ತುತ ಪಡಿಸಿ ತೀರ್ಮಾನವನ್ನು ಜನರಿಗೆ ಬಿಡುವ ಸಭ್ಯತೆಯ ಸಂಪ್ರದಾಯ ಇಲ್ಲವಾಗಿ ವಾಚಕರು ನೋಡುಗರ ಮೇಲೆ ತಮ್ಮ ಅಭಿಪ್ರಾಯವನ್ನು ಹೇರುವುದೇ ಹೆಚ್ಚಾಗಿದೆ. ಯಾವುದೇ ಒಂದು ವಿವಾದ ಬೇಗನೇ ಅಂತ್ಯಗೊಳ್ಳದಂತೆ ಭುಗಿಲೆಬ್ಬಿಸಿ ಮುಗಿಲು ಮುಟ್ಟಿಸುವಲ್ಲಿ ಮಾಧ್ಯಮಗಳ ಪಾತ್ರ ಹಿರಿದು ಬಿಡಿ. ಅನೇಕ ಚಾನಲ್ ಗಳಲ್ಲಿ ನಿರೂಪಕರೇ ಜಡ್ಜ್‌ಗಳು. ಅರಚಾಟ ಕಿರುಚಾಟಗಳಂತಿರುವ ತಿಚಿಡಿ ತೆಗಳು ಕಾರ್ಗಿಲ್, ಉಕ್ರೇನ್‌ನ ಲೈವ್ ಟೆಲಿಕಾಸ್ಟ್‌ನಂತೆ ಭಾಸವಾಗುತ್ತವೆ. ವಿವಾದಿತ ಸುದ್ದಿ ಕೊನೆಗೆ ಹಿನ್ನೆಲೆಗೆ ಸರಿದರೂ ಸತ್ತ ಹಾವನ್ನು ಬಡಿದಂತೆ ಮತ್ತೆ ಮತ್ತೆ ಜಗಿದು ರಂಗೇರಿಸುವ ನೈಪುಣ್ಯತೆ ಮಾಧ್ಯಮದವರಿಗಿದೆ. ವಾರ್ತೆಗಳು ಇಬ್ಬರ ನಡುವಿನ ಚರ್ಚೆಯ ರೂಪದಲ್ಲಿ ಪ್ರಾರಂಭವಾಗಿ, ಕೊನೆಗೆ ಏಕವ್ಯಕ್ತಿ ಅಧಿಪತ್ಯದ ಅಬ್ಬರಕ್ಕೆ ಮತ್ತೊಬ್ಬ ವ್ಯಕ್ತಿ ವಿಧಿಯಿಲ್ಲದೆ ಗೋಣಾಡಿಸುವ ಪ್ರಹಸನದಂತೆ ಮುಂದುವರಿಯುವುದು. ಅದೇನು ವಾರ್ತೆಯೋ, ಚರ್ಚೆಯೋ, ಉಪನ್ಯಾಸವೋ ತಿಳಿಯದೆ ಬೇಸತ್ತು ಟಿವಿ ಆರಿಸುವಾಗ ಬಹಳ ವರ್ಷಗಳ ಹಿಂದಿನ ಆಕಾಶವಾಣಿ ....ವಾರ್ತೆಗಳು.... ಓದುತ್ತಿರುವವರು ರಂಗರಾವ್ ಎಂಬ ತಂಪಾದ ಏರಿಳಿತದ ಧ್ವನಿ ನೆನಪಿನ ಭಾವಕೋಶದಲ್ಲಿ ಅನುರಣಿಸುವುದು.

ನಾಲ್ಕು ದಶಕಗಳ ಹಿಂದೆ... ನಾನು ಐದನೇ ತರಗತಿ ಓದುತ್ತಿದ್ದಾಗಿನ ನೆನಪು. ಪ್ರತಿ ಶುಕ್ರವಾರ ನಮ್ಮ ಶಾಲೆಯಲ್ಲಿ ಕೊನೆಯ ಎರಡು ಪಿರಿಯಡ್‌ಗಳನ್ನು ಕೋಕರಿಕುಲರ್ ಆಕ್ಟಿವಿಟೀಸ್‌ಗೆಂದು ಮೀಸಲಿಟ್ಟಿದ್ದರು. ವಾರಕ್ಕೊಮ್ಮೆ ಭಾವಗೀತೆ, ಜಾನಪದ ಗೀತೆ, ಏಕಪಾತ್ರಾಭಿನಯ, ಪ್ರಬಂಧ, ಚರ್ಚಾಸ್ಪರ್ಧೆ, ಫ್ಯಾನ್ಸಿ ಡ್ರೆಸ್ ಹೀಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ನಮ್ಮ ಮಂಗಾಟದಲ್ಲಡಗಿದ್ದ ಪ್ರತಿಭೆಯನ್ನು ಹೆಕ್ಕಿ ಹೊರ ತರುತ್ತಿದ್ದರು. ನಾವೂ ಪಾಠ ಕೇಳುವ ಕಷ್ಟಕ್ಕಿಂತ ಸ್ಪರ್ಧೆಯಲ್ಲಿ ಪಾರ್ಟಿಸಿಪೇಟ್ ಮಾಡುವುದೇ ಸಲೀಸು ಎಂದರಿತು ಎಲ್ಲಾ ಸ್ಪರ್ಧೆಗಳಿಗೂ ಹೆಸರು ಕೊಡುತ್ತಿದ್ದೆವು. ಹೀಗೇ ... ಒಂದು ಶುಕ್ರವಾರ 'ಶಕ್ತಿ ಹಾಗು ಯುಕ್ತಿ ಎರಡರಲ್ಲಿ ಯಾವುದು ಹಿರಿದು' ಎಂಬ ಬಗ್ಗೆ ಚರ್ಚಾ ಸ್ಪರ್ಧೆ ಏರ್ಪಾಡಾಗಿತ್ತು. ಸಾಮಾನ್ಯವಾಗಿ ಹಿಂದಿನ ದಿನವೇ ಸ್ಪರ್ಧೆಗಳ ಹೆಸರನ್ನು ನೋಟ್ ಮಾಡಿಕೊಳ್ಳುವ ರೂಢಿಯಿತ್ತು. ಹಾಗಾಗಿ ಪಠ್ಯೇತರ ಚಟುವಟಿಕೆಗಳ

ಇನ್ ಚಾರ್ಜ್ ಆನಂದ್ ಸರ್ ನಮ್ಮ ತರಗತಿಗೂ ನೋಟ್ ಬುಕ್ ಹಿಡಿದು ಬಂದರು. ನೋಡಿ...ಎಲ್ಲಾ ಕ್ಲಾಸ್‌ನಿಂದ ಒಟ್ಟು ಇಪ್ಪತ್ತೈದು ಮಕ್ಕಳು ಹೆಸರು ಕೊಟ್ಟಿದ್ದಾರೆ. ನಿಮ್ಮ ಕ್ಲಾಸ್‌ನಲ್ಲಿ ಯಾರ್ಯಾರು ಪಾರ್ಟಿಸಿಪೇಟ್ ಮಾಡುವಿರಿ ಎಂದರು. ಚರ್ಚಾಸ್ಪರ್ಧೆ ಎಂಬ ಪದದ ಅರ್ಥವೇ ಗೊತ್ತಿಲ್ಲದ ನಾನು ಭಂಡಧೈರ್ಯದಿಂದ ಎದ್ದು ನಿಂತೆ. ವೆರಿ ಗುಡ್ ಎಂದು ಸರ್ ಮೆಚ್ಚುಗೆ ಸೂಚಿಸಿದರು. ಅವರ ಮೆಚ್ಚು ನುಡಿ ನನ್ನ ಗೆಳತಿಯರಲ್ಲಿ ಹುಚ್ಚು ಹುರುಪು ಮೂಡಿಸಿತು. ಜಿದ್ದಿಗೆ ಬಿದ್ದಂತೆ ಎಲ್ಲರೂ ಎದ್ದು ನಿಂತರು. ನಮ್ಮ ಸೆಕ್ಷನ್ ನಲ್ಲೇ ಇಪ್ಪತ್ತೆರಡು ಹೆಸರು ದಾಖಲಾದದ್ದು ಅಂದಿಗೆ ದೊಡ್ಡ ದಾಖಲೆಯೇ ಸರಿ. ಎರಡು ಪಿರಿಯಡ್ಡಿನ ಕಾಲಾವಧಿಯಲ್ಲಿ ಇದು ಸಾಧ್ಯವೇ ಎಂಬ ಅನುಮಾನದಿಂದ ಸರ್ ಮಂಡೆ ತುರಿಸಿಕೊಂಡರು.

ಮನೆಗೆ ಬಂದವಳೇ ಅಪ್ಪನ ಮುಂದೆ ಚರ್ಚಾಸ್ಪರ್ಧೆಯ ಪ್ರಪೋಸಲ್ ಇಟ್ಟೆ. ನನ್ನೆಲ್ಲಾ ಸೃಜನಶೀಲ ಕೆಲಸಗಳಿಗೂ ಒತ್ತಾಸೆಯಾಗಿದ್ದ ಅಪ್ಪ ನಾನು ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವುದು ತಿಳಿದು ಸಂತೋಷಗೊಂಡರು. ಚರ್ಚಾಸ್ಪರ್ಧೆಯ ರೂಪುರೇಷೆಗಳನ್ನು ನಿಧಾನವಾಗಿ ವಿವರಿಸಿದರು. ಮನೆಯ ಇತರ ಸದಸ್ಯರೂ ಚರ್ಚಾಸ್ಪರ್ಧೆಯ ಪೂರ್ವತಯಾರಿಯಲ್ಲಿ ಸಹಕರಿಸಲು ಮುಂದಾದರು. ಮನೆಯ ಸದಸ್ಯರ ನಡುವೆಯೇ ಶಕ್ತಿ, ಯುಕ್ತಿಯ ಬಗ್ಗೆ ಚರ್ಚೆ ನಡೆದು ಯುಕ್ತಿಯೇ ಮೇಲು ಎಂದು ತೀರ್ಮಾನವಾಗಿ ಯುಕ್ತಿಯ ಪರವಾಗಿಯೇ ಮಾತನಾಡಲು ಸೂಚಿಸಿದರು. ಅದಕ್ಕೆ ತಕ್ಕಂತೆ ಸವಾಲು ಪಾಟೀಸವಾಲುಗಳು ಸಿದ್ಧವಾಗತೊಡಗಿದವು. ದಶದಿಕ್ಕುಗಳಿಂದ ಚಕಚಕನೆ ಆಳಿಗೊಂದೊಂದು ಪಾಯಿಂಟುಗಳು ಉದುರುತ್ತಿದ್ದರೆ ಅದನ್ನು ದಾಖಲಿಸುವವರ ಕೈ ಆ ವೇಗವನ್ನು ಅನುಸರಿಸಲಾಗದೆ ಸೋಲುತ್ತಿತ್ತು. ಅದರಲ್ಲಿ ಅಸುರರನ್ನು ಯಾಮಾರಿಸಿ ಅವರಿಂದ ಸಮುದ್ರವನ್ನು ಕಡೆಸಿ ಅಮೃತವನ್ನು ಪಡೆದ ಸುರರ ಯುಕ್ತಿಯಿಂದ ಹಿಡಿದು ಗಣೇಶ ಸುಬ್ರಹ್ಮಣ್ಯರ ನಡುವೆ ಲೋಕ ಸುತ್ತುವ ಸ್ಪರ್ಧೆ ಏರ್ಪಟ್ಟಿದ್ದು ....ವಿಷಲ್ ಊದಿದ ಕೂಡಲೇ ಓಡುವ ಅಥ್ಲೀಟ್ ನಂತೆ ತನ್ನ ಮಯೂರ ವಾಹನವನ್ನೇರಿ ಕಾರ್ತಿಕೇಯ ಮಿಂಚಿನಂತೆ ಲೋಕ ಸುತ್ತಲು ಹೊರಟು ಮಾಯವಾಗಿದ್ದು, ತನ್ನ ಮೌಸ್ ಎಂಬ ವಾಹನದಿಂದ ತನ್ನ ಭಾರವನ್ನೂ, ಆ ವೇಗವನ್ನೂ ಸರಿಗಟ್ಟಲಾಗದ್ದನ್ನರಿತ ವಿನಾಯಕ ಯುಕ್ತಿಯಿಂದ ಶಿವಪಾರ್ವತಿಯನ್ನೇ ಸುತ್ತಿ ಸದ್ದಿಲ್ಲದೆ ಗೆದ್ದವರೆಗೂ ವಿಷಯ ಮಂಡನೆಯಾಯಿತು. ಈ ಮಧ್ಯೆ ಭಯವಿಲ್ಲದೆ ವೇದಿಕೆ ಏರುವುದು ಹೇಗೆ, ನಿಲ್ಲುವ ಸ್ಟೈಲ್, ವಾಯ್ಸ್ ಮಾಡ್ಯುಲೇಷನ್ ಗಳ ಪೂರ್ವಭಾವಿ ತಯಾರಿಯೂ ನಡೆಯಿತು. ಕೂಡು ಕುಟುಂಬದ ಸದಸ್ಯರೆಲ್ಲಾ ತಲೆಗೊಂದೊಂದು ವಿಚಾರ ತುಂಬಿ ನನ್ನ ಎಳೆ ತಲೆ ಓವರ್ ಲೋಡ್ ಆಗಿ ಕಣ್ಣು ಒತ್ತರಿಸಿ ಬಂದು ಶಿವಾ ಅಂತ ಸುಮ್ಮನೆ ರಗ್ಗು ಹೊದ್ದು ಮಲಗಿದೆ.

ಮರುದಿನ ಎದ್ದು ಯಾವ ಅಳುಕೂ ಇಲ್ಲದೆ ಆರಾಮವಾಗಿಯೇ ಶಾಲೆಗೆ ಹೊರಟೆ. ಗೆಳತಿಯರೆಲ್ಲರೂ ಒತ್ತಡಕ್ಕೊಳಗಾದವರಂತೆ ಕೈಯಲ್ಲಿ ಉದ್ದುದ್ದ ಚೀಟಿ ಹಿಡಿದುಕೊಂಡು ಪ್ರೇಯರ್ ಹಾಲಿನಲ್ಲಿ ....ಊಟದ ಪಿರಿಯಡ್ಡಿನಲ್ಲಿ.... ಉರು ಹೊಡೆದದ್ದೇ ಹೊಡೆದದ್ದು. ಸಂಜೆ ಸ್ಪರ್ಧೆ ಪ್ರಾರಂಭವಾಯಿತು. ಶಕ್ತಿಯ ಪರವಾಗಿ... ಕೆಲವರು, ವಿರುದ್ಧವಾಗಿ ಹಲವರು ಮಾತನಾಡಿದರು. ಕೆಲವರು ಹೆದರಿ ಧ್ವನಿ ನಡುಗಿಸಿ ಎಲ್ಲಾ ಮರೆತು ಅರ್ಧದಲ್ಲೇ ಮುಗಿಸಿ ಹೋದರೆ, ಇನ್ನು ಕೆಲವರು ಚೀಟಿ ತೆರೆದು ಓದಿ ಪೂರೈಸಿದರು. ನನ್ನ ಸರದಿ ಬಂದಾಗ ಕುಳಿತ ಸ್ಥಳದಿಂದ ಮೆಲ್ಲನೆದ್ದೆ. ವೇದಿಕೆ

ಏರಿ ನಿಂತು ಎಲ್ಲರನ್ನೂ ಒಮ್ಮೆ ದೃಷ್ಟಿಸಿದೆ. ನೂರಾರು ಜೋಡಿ ಕಣ್ಣುಗಳು ನನ್ನತ್ತಲೇ.... ಕೈಕಾಲುಗಳಲ್ಲಿ ನಡುಕ ಪ್ರಾರಂಭವಾಯಿತು. ಅಂಗೈ ಬೆವರಿ ಒದ್ದೆಯಾಯಿತು. ಮನೆಯ ಸದಸ್ಯರ ಸಲಹೆಗಳು ದಶದಿಕ್ಕುಗಳಿಂದ ಪ್ರತಿಧ್ವನಿಸಿ ಯಾವುದನ್ನು ಮೊದಲು ಪ್ರಾರಂಭಿಸುವುದೆಂಬ ಗೊಂದಲ ಶುರುವಾಯಿತು. ಒಂದು ಡೀಪ್ ಬ್ರೀಥ್ ಶ್ವಾಸಕೋಶದೊಳಗೆ ಹೋಗಿ ತಣ್ಣಗೆ ಹೊರಬಂತು. ಧೈರ್ಯ ತಂದುಕೊಂಡು "ಯುಕ್ತಿ ...." ಎನ್ನುತ್ತಾ ಪ್ರಾರಂಭಿಸಿದೆ. ಮುಂದೆ ಮಾತೇ ಹೊರಡದಾಯಿತು. ಕಣ್ಣೊಂದನ್ನು ಹೊರತುಪಡಿಸಿ ಉಳಿದ ಇಂದ್ರಿಯಗಳೆಲ್ಲಾ ಸ್ತಬ್ಧವಾದವು. ನನ್ನ ಪಾರಿ ನೋಡಿ ಎಲ್ಲವನ್ನೂ ಗ್ರಹಿಸಿದ ಆನಂದ್ ಸರ್ "ಮಾತಾಡು .... ಹೆದ್ರುಕೋಬೇಡ..." ಎಂದು ಹುರಿದುಂಬಿಸಿದರು. ತಲೆಯ ತುಂಬಾ ಶಕ್ತಿ... ಯುಕ್ತಿ.. ಸಮುದ್ರ ಮಂಥನ, ಗಣೇಶ ಸುಬ್ರಹ್ಮಣ್ಯ ಎನ್ನುತ್ತಾ ಹಿರಿಯರು ಹಾಕಿಕೊಟ್ಟ ಪಾಯಿಂಟುಗಳೆಲ್ಲಾ ಗಿರಗಿರನೆ ತಿರುಗುತ್ತಾ ಚೆಲ್ಲಾಪಿಲ್ಲಿಯಾಗಿ ಪರಿತಪಿಸುವಂತಾಯ್ತು. ನನ್ನ ಮೆದುಳಿನ ಅಂತರ್ಜಾಲದಲ್ಲಿ ನೆಟ್ ವರ್ಕ್ ಇಶ್ಯೂ ತಲೆದೋರಿತು. ಮತ್ತೊಮ್ಮೆ " ಯುಕ್ತಿ ..." ಎಂದೆ. ಎಲ್ಲರೂ ಕಿಸಕ್ಕೆಂದರು. ಬಾಡಿಯ ವೈಬ್ರೇಶನ್, ವಿಷಯದ ಕಲಸು ಮೇಲೋಗರದ ಇರುಸುಮುರುಸಿನೊಂದಿಗೆ ಅವಮಾನವೂ ಜೊತೆಯಾಯ್ತು. ಇನ್ನು ಸಮಯ ವ್ಯರ್ಥ ಮಾಡುವುದು ಒಳಿತಲ್ಲವೆನಿಸಿ ಮತ್ತೊಮ್ಮೆ "ಯುಕ್ತಿ ..." ಎಂದು ಹೇಳಿ ವೇದಿಕೆಯಿಂದ ಕೆಳಗಿಳಿದೆ . ಎಲ್ಲರೂ "ಹೋ....." ಎಂದರು. ಮನೆಯ ಹಿರಿಯರು ರಾತ್ರಿಯೆಲ್ಲಾ ತಲೆಕೆಡಿಸಿಕೊಂಡು ನೋಟ್ ಮಾಡಿಕೊಟ್ಟಿದ್ದ ಪಾಯಿಂಟುಗಳನ್ನೆಲ್ಲಾ ಗಾಳಿಗೆ ತೂರಿ ಒಂದೇ ಒಂದು ಪದವನ್ನು ಮೂರು ಬಾರಿ ಉಚ್ಚರಿಸುವ ಮೂಲಕ ಸ್ಪರ್ಧೆಗೆ ಬೆನ್ನು ತಿರುಗಿಸಿ ವೇದಿಕೆಯಿಂದ ಕೆಳಗಿಳಿದಿದ್ದೆ.

ನಂತರದ ದಿನಗಳಲ್ಲಿ ಅನೇಕ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದೆನಾದರೂ ನನ್ನ ಮೊದಲ ಚರ್ಚಾಸ್ಪರ್ಧೆ, ಅಂದಿನ ಮುಗ್ಧತೆ ಇಂದಿಗೂ ನನ್ನ ಮನದಲ್ಲಿ ಆಗಾಗ ನೆನಪಿನ ಕಚಗುಳಿಯನ್ನು ಇಡುತ್ತದೆ. ಇಂದಿನ ಮಕ್ಕಳಿಗೆ ಸಾಕಷ್ಟು ಎಕ್ಸ್‌ಪೋಶರ್ ದೊರೆತು ಸ್ಟೇಜ್ ಫಿಯರ್ ಮಾಯವಾಗಿದೆ. ಒಮ್ಮೊಮ್ಮೆ ಅದು ಅನುಭವದ ಮೂಸೆಯಲ್ಲಿ ಹದಗೊಂಡು, ಮರೆಯಾದ ಮುಗ್ಧತೆಯಂತಿರದೆ ಅಸ್ವಾಭಾವಿಕವಾಗಿ ಅರಳಿದ ಪುಷ್ಪದಂತೆ, ಹಾರ್ಮೋನ್ ಇಂಜೆಕ್ಷನ್ ನಿಂದ ಊದುವ ಕೋಳಿ ಮರಿಗಳ ಬೆಳವಣಿಗೆಯಂತೆ, ಕಾರ್ಬೈಡ್ ಬಳಸಿ ಹಣ್ಣಾದ ಫಲದಂತೆ ಗೋಚರಿಸುತ್ತದೆ. ಸ್ವಾಭಾವಿಕವಾದ ಮಾಗುವಿಕೆ ಹಾಗು ಆರೋಗ್ಯಕರವಾದ ಚರ್ಚೆ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಲು ಅತ್ಯಗತ್ಯ. ■

---

ರೋಗಿಯೊಬ್ಬ ಹಲ್ಲಿನ ವೈದ್ಯರ ಹತ್ತಿರ ಹೋದ. ಅವರು ರೋಗಿಯನ್ನು ಕುರ್ಚಿಯಲ್ಲಿ ಕೂರಿಸುತ್ತಿದ್ದಾಗ ರೋಗಿ ಪರ್ಸಿಗೆ ಕೈ ಹಾಕಿದ.

**ವೈದ್ಯರು :** ಬೇಡ ನೀವು ಈಗಲೇ ನನ್ನ ಫೀಸ್ ಕೊಡುವುದು ಬೇಡ.

**ರೋಗಿ :** ನಾನೆಲ್ಲಿ ನಿಮಗೆ ಫೀಸ್ ಕೊಡುತ್ತಿದ್ದೀನಿ. ನೀವು ನನಗೆ ಅರವಳಿಕೆ ಮದ್ದು ನೀಡುವ ಮೊದಲು ನನ್ನ ಪರ್ಸಿನಲ್ಲಿರುವ ದುಡ್ಡನ್ನು ಎಣಿಸಿಬಿಡುತ್ತೇನೆ.

# ಚಿನ್ನದ ಚೌಕ

*(ಅತ್ತೆ ಸೊಸೆಯರ ನಡುವೆ ನಡೆದ ಸಂವಾದರೂಪದ ಒಂದು ಪ್ರಹಸನ)*

**– ಶಾಂತಾ ನಾಗಮಂಗಲ**

ವೀಣಾ : ಅತ್ತೆ, ವಿರೂಪಣ್ಣ ಅಳಿಯಂಗೆ ಮದವೇಲಿ ಚಿನ್ನದ ಚೌಕ ಕೊಟ್ಟಿದ್ದಾನಂತೆ. ನಮ್ಮ ಮಾವ ಹೇಳಿದ್ರು.

ಅತ್ತೆ : ಎಂಥ ಮಾರಾಯ್ತಿ ನೀ ಹೇಳುದು. ಚಿನ್ನದ ಚೌಕ ಯಾರಾದರು ಕೊಡಲಿಕ್ಕುಂಟಾ ?

ವೀಣಾ : ಹಾಂ . ಕೊಟ್ಟಿದ್ದಾರಂತೆ. ಮಾವ ಮದುವೆಗೆ ಹೋದವ ಹೇಳಿದ್ದು, ಬುರುಡೆ ಬಿಟ್ಟಿರಲ್ಲ.

ಅತ್ತೆ : ಓ. ನೀವು ಘಟ್ಟದವರು. ಎಂಥದೆಲ್ಲ ಕೊಡ್ತೀರಿ ಮಾರಾಯ್ತಿ. ಎಂಥಕ್ಕೆ ಅದು. ಪಾಪ ! ಆ ಮಾಣಿ.

ವೀಣಾ : ಪಾಪ ಎಂತಕ್ಕೆ ಅತ್ತೆ. ಖುಶಿ ಅಲ್ಲವಾ ?

ಅತ್ತೆ : ಖುಶಿಯಾ ! ಅದನ್ನು ಹಾಕುವುದು ಹೇಗೆ ? ಹಾಕಿದರು ತುಂಬಾ ಒಳಗಿರ್ತದಲ್ಲ. ಯಾರು ನೋಡ್ತಾರೆ ಅದನ್ನು. ನೋಡದ ಮೇಲೆ ಚಿನ್ನದ್ದು ಯಾಕೆ ?

ವೀಣಾ : ಹಾಕಲಿಕ್ಕೇನು ಕಷ್ಟ . ಎಲ್ಲರೂ ಚೌಕ ಹಾಕುವ ಹಾಗೆ ಅವನೂ ಹಾಕುವ.

ಅತ್ತೆ : ಎಲ್ಲರೂ ಹಾಕುವ ಹಾಗೆ ಹಾಕಿದರೆ ಚುಚ್ಚುವುದಿಲ್ಲವೇ ಮಾರಾಯ್ತಿ?

ವೀಣಾ : ಚುಚ್ಚುವುದಾ? ಚೌಕ ಚುಚ್ಚತ್ತೆ ಯಾಕೆ ?

ಅತ್ತೆ : ಹಾಗಿದ್ರೆ ಹಾಳೆಯಂತೆ ತೆಳುವಾಗಿರ್ತದಾ ಅದು ?

ವೀಣಾ : ಗೊತ್ತಿಲ್ಲ ಎಷ್ಟು ಪವನು ಚಿನ್ನದ್ದು ಅದು ಅಂತಾ. ತೆಳು ದಪ್ಪ ಚಿನ್ನದ ವಜನ್ ಇದ್ದಂತೆ ಇರತ್ತೆ ಅತ್ತೆ.

ಅತ್ತೆ : ಆದ್ರೂ ಮಾರಾಯ್ತಿ, ಅದಕ್ಕೆ ದಾರ ಹೇಗೆ ಹೊಂದಿಸೋದು ?

ವೀಣಾ : ಎಲ್ಲಾ ಚೌಕಕ್ಕೂ ಹೇಗೆ ದಾರ ಹೊಂದಿಸ್ತಾರೋ ಹಾಗೆ. ಇದರಲ್ಲೆಂತ ಸಂಶಯ ನಿಮಗೆ ಅತ್ತೆ ?

ಅತ್ತೆ : ನಂಗೆ ಒಂದು ಸಮ ತಿಳೀತಿಲ್ಲಪ್ಪಾ. ನೀವು ಘಟ್ಟದ ಮೇಲವರ ಗಮ್ಮತ್ತೇ ಗಮ್ಮತ್ತು. ಎಂಥಕ್ಕೆ ಚಿನ್ನದ ಚೌಕ ಕೊಡುದು. ಕಷ್ಟ ಕಷ್ಟ. ಅದನ್ನು ತೊಳೆಯೋದು ಹೇಗೆ ಮಾರಾಯ್ತಿ ?

ವೀಣಾ : ಅವರಲ್ಲಿ ಉಂಟು ಗಟ್ಟಿ ಆಸ್ತಿ, ಕೊಟ್ಟಿದ್ದಾರೆ ಅತ್ತೆ. ತೊಳೆಯೋದೆಂತ ಕಷ್ಟ. ಚಿನ್ನದ್ದು ತೊಳೆಯೋದ್ಯಾಕೆ ಬೇಕು ?

(ಇಷ್ಟು ಮಾತುಕತೆ ಮುಗಿದಿತ್ತು. ತೋಟಕ್ಕೆ ಹೋಗಿದ್ದ ಅತ್ತೆಯ ಮಗ, ಅಂದರೆ ವೀಣಾಳ ಪತಿ ಬಂದು ಹಜಾರದಲ್ಲೇ ಇದ್ದ ಕುರ್ಚಿಯ ಮೇಲೆ

ಕೂತರು. ತೋಟದ ಕೆಲಸಕ್ಕೆ ಹೋಗಿದ್ದರಿಂದ, ಪಂಚೆ ಉಟ್ಟಿದ್ದರು. ಮೇಲೆ ಬನಿಯನ್ ಹಾಕಿರಲಿಲ್ಲ. ಅತ್ತೆಯ ಗೊಂದಲ ಇನ್ನೂ ತೀರಿಲ್ಲ. )

ಅತ್ತೆ : ಸರಿ ಮಾರಾಯ್ತಿ. ನಿಮ್ಮ ವಿರೂಪಣ್ಣ ಅಳಿಯಂಗೆ ಕೊಟ್ಟ ಚಿನ್ನದ ಚೌಕ ಎಷ್ಟು ಅಗಲ ಇರಬಹುದು ?

ವೀಣಾ : ( ಪತಿಯ ಕೊರಳಿನಲ್ಲಿದ್ದ ಕರಡಿಗೆಯನ್ನು ತೋರಿಸಿ ) ಇಷ್ಟಗಲ ಇರಬಹುದು. ಹೀಗೇ ಇರಬಹುದು.

ಅತ್ತೆ : ಅಯ್ಯೋ, ಎಂಥ? ಹಾಗಿದ್ರೆ ನೀನು ಚಿನ್ನದ ಚೌಕ ಎಂದದ್ದು ಏನನ್ನು? ಕರಡಿಗೆಯನ್ನೇ?

ವೀಣಾ : ಮತ್ತೆ ! ಇಷ್ಟೊತ್ತು ನೀವೇನೆಂದುಕೊಂಡಿರಿ? ನಮ್ಮ ಕಡೆ ಕರಡಿಗೆಗೆ ಚೌಕ ಅಂತಾ ಹೇಳ್ತಾರೆ. ನಾನು ಅದನ್ನೇ ಹೇಳಿದ್ದು.


ಅತ್ತೆ : ಅಯ್ಯೋ ! ಘಟ್ಟದ ಮೇಲಿನವರ ಭಾಷೆ. ರಾಮ ರಾಮ ! ಮಾರಾಯ್ತಿ, ನಾವು ಲಂಗೋಟಿಗೆ ಚೌಕ ಅಂತಾ ಹೇಳೋದು.

ಈಗ ವೀಣಾಳಿಗೆ ಅತ್ತೆಯ ಪ್ರಶ್ನೆಗಳು, ಸಂಶಯಗಳು ಎಷ್ಟು ವ್ಯಾಲಿಡ್ ಎಂಬುದು ತಿಳಿದು ನಗು ತಡೆಯಲಾಗಲಿಲ್ಲ.

ವೀಣಾ ಮೂಲತಃ ದಾವಣಗೆರೆ ಕಡೆಯವಳು. ಮದುವೆಯಾಗಿ ಹೋದದ್ದು ಉಡುಪಿಗೆ. ದಾವಣಗೆರೆ ಕಡೆಯಲ್ಲಿ ಶಿವಲಿಂಗವನ್ನು ಇರಿಸಿಕೊಳ್ಳುವ ಕರಡಿಗೆಯನ್ನು ಚೌಕ ಎಂದು ಕರೆಯುತ್ತಾರಂತೆ. ಉಡುಪಿ ಅಥವಾ ಘಟ್ಟದ ಕೆಳಗೆ ಚೌಕ ಎಂದರೆ ಲಂಗೋಟಿ . ಹೀಗೆ ಒಂದು ಶಬ್ದವನ್ನು ಬೇರೆ ಬೇರೆ ಅರ್ಥದಲ್ಲಿ ಬಳಸುವ ಪ್ರಾದೇಶಿಕ ಭಿನ್ನತೆಯಿಂದಾದ ಗೊಂದಲದ ಪ್ರಹಸನ. ಇದು ನೈಜ ಘಟನೆಯನ್ನಾಧರಿಸಿದ್ದು.

■

---



# ಅಯ್ಯೋ ಅಲ್ಲಿಡ್ರೀ

**– ಬೇಲೂರು ರಾಮಮೂರ್ತಿ**

ಸೋಮು ಕೆಲಸ ಮಾಡುತ್ತಿದ್ದ ಹಳೆಯ ಕಂಪನಿಯಲ್ಲಿ ಒಬ್ಬರು ಸಾಹೇಬರಿದ್ದರು. ಅವರ ಕೋಣೆಗೆ ಏನು ತಗೊಂಡು ಹೋದ್ರು ಅಯ್ಯೋ ಅಲ್ಲಿಡ್ರೀ ಅನ್ನೋರು. ಅಂದರೆ ಈಗಾಗಲೇ ನಾನು ಬೇಕಾದಷ್ಟು ಕೆಲಸ ಮಾಡುತ್ತಿದ್ದೀನಿ. ನೀವು ತಂದಿರೋದನ್ನು ಈಗ ನೋಡೋಕೆ ಆಗಲ್ಲ. ಅದಕ್ಕೆ ಅಲ್ಲಿಡಿ ಆಮೇಲೆ ನೋಡ್ತೀನಿ ಅಂತ. ಅವರಿಗೆ ನಿಕ್ ನೇಮ್ ಇ.ಡಿ. ಅಂತನೇ ಇಟ್ಟಿದ್ದರು. ಒಂದು ಸಾರಿ ಕಾಫಿಯ ಸಮಯ. ಕಾಫಿ ಕೊಡುವವನು ಒಳಗೆ ಹೋಗಿ ಸರ್ ಅಂದಾಗ ತಲೆಎತ್ತಿ ನೋಡದೇ ಅದಕ್ಕೂ ಅಯ್ಯೋ ಅಲ್ಲಿಡ್ರೀ ಅಂದರು. ಕಾಫಿ ತಂದವನು ಸರಿ ಅಲ್ಲಿಡ್ರೀ ಅಂದ್ರೆ ಅಲ್ಲಿಟ್ಟು ಹೋಗೋಣ ಅಂತ ಕಾಫಿಯನ್ನು ಟೇಬಲಿನ ಒಂದು ಮೂಲೆಗೆ ಇಡುವಾಗ ಕಾಫಿ ಘಮ ಸಾಹೇಬರ ಮೂಗಿಗೆ ಹೊಡೆದು ತಲೆಎತ್ತಿ ನೋಡಿ ನೀನೇನಯ್ಯಾ, ಕಾಫಿ ಅಂತ ಹೇಳಬಾರದಿತ್ತಾ ಕೊಡು ಇತ್ಲಾಗೆ ಅಂದು ಕಾಫಿ ಕುಡಿದರು. ಸಾಹೇಬರು ಹೇಳಿದ ಕೆಲಸವನ್ನಷ್ಟೇ ಮಾಡಿ ಅದನ್ನು ಅವರ ಬಳಿಗೆ ತಗೊಂಡು ಹೋದರೆ ನೇರವಾಗಿ ನೋಡುತ್ತಿದ್ದರು. ಮಿಕ್ಕಿದ್ದನ್ನು ಅಯ್ಯೋ ಅಲ್ಲಿಡ್ರೀ ಕಥೆನೇ. ಒಂದು ಸಾರಿ ಎಂ.ಡಿ. ಸಾಹೇಬರು ಮಧ್ಯಾನ್ಹ ಮೂರು ಗಂಟೆಗೆ ಒಂದು ಮೀಟಿಂಗ್ ಕರೆದು ಅದರ ವಿವರಗಳನ್ನು ಕಳಿಸಿದ್ದಾರೆ. ಅದನ್ನು ತಂದವನು ಬಾಗಿಲು ಸದ್ದು ಮಾಡಿ ಒಳಗೆ ಹೋದಾಗ ಯಥಾಪ್ರಕಾರ ಸಾಹೇಬರು ಯಾರು ಎನ್ನೋದನ್ನೂ ನೋಡದೇ ಅಯ್ಯೋ ಅಲ್ಲಿಡ್ರೀ ಅಂದರು. ಅವನು ಟೇಬಲಿನ ಮೇಲಿಟ್ಟು ಹೋದ. ಇವನು ಎಂ.ಡಿ. ಸಾಹೇಬರ ಕಛೇರಿಯಿಂದ ಬಂದಿರುವವನು, ಅಂದ ಮೇಲೇ ಏನಾದರೂ ಮುಖ್ಯವಾದ ವಿಚಾರವನ್ನು ತಂದಿರುತ್ತಾನೆ ಎನ್ನುವುದನ್ನು ಸಾಹೇಬರು ಯೋಚಿಸಲಿಲ್ಲ. ಅವರ ಕೆಲಸದಲ್ಲಿ ಮಗ್ನರಾಗಿದ್ದರು. ಸಾಹೇಬರ ಪಿ.ಎ.ಗೂ ಈ ಮೀಟಿಂಗ್ ವಿಚಾರ ಗೊತ್ತಿಲ್ಲ. ಗೊತ್ತಿದ್ದರೆ ಅವನು ಸಾಹೇಬರಿಗೆ ನೆನಪು ಮಾಡಿ ಕಳಿಸುತ್ತಿದ್ದ.

ಮಧ್ಯಾನ್ಹ ಊಟಕ್ಕೆ ಹೋದ ಸಾಹೇಬರು ಏನೋ ರುಚಿಯಾಗಿತ್ತು ಅಂತ ಒಂದಿಷ್ಟು ಹೆಚ್ಚಿಗೇ ತಿಂದಿದ್ದರ ಫಲ ಮತ್ತೆ ಬಂದು ಕ್ಯಾಬಿನ್ನಲ್ಲಿ ಕೂತಾಗ ನಿದ್ದೆ ಎಳೆದುಕೊಂಡು ಹೋಯಿತು. ನಿದ್ದೆಯಲ್ಲೂ ಅಯ್ಯೋ ಅಲ್ಲಿಡ್ರೀ ಅನ್ನೋದು ಬಿಡಲಿಲ್ಲ. ಮೂರು ಗಂಟೆಯಾಗಿ ಹತ್ತು ನಿಮಿಷ ಆಯಿತು. ಎಂ.ಡಿ. ಆಫೀಸಿಂದ ಫೋನು. ಯಾಕೆ ಇನ್ನೂ ಮೀಟಿಂಗಿಗೆ ಬರಲಿಲ್ಲ ಅಂತ. ಆಗ ಸಾಹೇಬರು ಗಾಬರಿಯಿಂದ ಯಾವ ಮೀಟಿಂಗು ಅಂತ ಕೇಳಿದರು. ಎಂ.ಡಿ. ಸಾಹೇಬರ ಪಿ.ಎ. ಇದೇನು ಹೀಗೆ ಕೇಳ್ತೀರ, ಮಧ್ಯಾನ್ಹ ಮೂರು ಗಂಟೆಗೆ ಎಂ.ಡಿ.ಯವರ ಜೊತೆ ಮೀಟಿಂಗ್ ಇದೆ ಅಂತ ನಾನು ನಮ್ಮ ಕಛೇರಿಯವನ ಹತ್ತಿರ ನಿಮಗೆ ಮಾಹಿತಿ ಕಳಿಸಿದ್ದೆ. ಅವನು ನಿಮ್ಮ ಟೇಬಲಿನಲ್ಲಿಯೇ ಅದನ್ನು ಇಟ್ಟು ಬಂದಿದ್ದಾನೆ. ಅಂದಾಗ ಸಾಹೇಬರು ಮತ್ತಷ್ಟು ಗಾಬರಿಯಿಂದ ಟೇಬಲ್ ಎಲ್ಲಾ ಕೆದಕಿದರೆ ಒಂದು ಮೂಲೆಯಲ್ಲಿ ಮೀಟಿಂಗ್ ಮಾಹಿತಿ ಇದ್ದ ಪತ್ರ ಸಿಕ್ಕಿತು. ಈಗ ಬಂದೆ ಅಂತ ಟೈ ಸರಿಪಡಿಸಿಕೊಂಡು ಹೋಗುವ ಮುನ್ನ ಅವರ ಪಿ.ಎ. ಗೆ ಏನ್ರೀ ಮಾಡ್ತಿದೀರ ಎಂ.ಡಿ. ಆಫೀಸಿನಲ್ಲಿ ಮೂರು ಗಂಟೆಗೆ ಮೀಟಿಂಗ್ ಇದೆ ಅಂತ ನನಗೆ ನೆನಪು ಮಾಡಬಾರದೇನ್ರೀ ಅಂತ ರೇಗಿದರು. ಮೀಟಿಂಗ್ ಇರುವುದು ನನಗೆ ಗೊತ್ತಿಲ್ಲ. ಸರ್. ನಾನು ಮಾಹಿತಿ ನೋಡಿಲ್ಲ ಅಂದ.

ಸಾಹೇಬರಿಗೆ ಮತ್ತೂ ಸಿಟ್ಟು ಬಂದು. ನಾನು ನೋಡ್ಲಿಲ್ಲ ನನಗೆ ಗೊತ್ತಿಲ್ಲ ಅನ್ನೋದಕ್ಕೇನ್ರೀ ನಿಮಗೆ ಸಂಬಳ ಕೊಡೋದು. ಗೊತ್ತಿಲ್ಲದಿದ್ದರೆ ತಿಳ್ಕೊಬೇಕ್ರೀ ಅಂದು ರೇಗಿ ಮೀಟಿಂಗಿಗೆ ಹೋದಾಗ ಅರ್ಧ ಗಂಟೆ ತಡವಾಗಿತ್ತು. ಸಾಹೇಬರ ಪುಣ್ಯ ಅವತ್ತು ಎಂ.ಡಿ.ಯವರೂ ಊಟಕ್ಕೆ ಹೋದವರು ತಡವಾಗಿ ಬಂದರು.

ಮೊದಮೊದಲು ಸಾಹೇಬರು ಎಲ್ಲ ಕಾಗದಪತ್ರಗಳನ್ನೂ ವಿವರವಾಗಿ ನೋಡುತ್ತಿದ್ದರು. ಯಾವುದೋ ಒಂದು ಪತ್ರ ನೋಡುತ್ತಿದ್ದಾರೆ ಎಂದರೆ ಇನ್ಯಾರಾದರೂ ಬಂದು ಸರ್ ಅಂತ ಇನ್ನೊಂದು ಪತ್ರ ತೋರಿಸಿದರೆ ಅದನ್ನೂ ನೋಡೋರು. ಆದರೆ ಬರ್‍ತಾ ಬರ್‍ತಾ ಇದು ಜಾಸ್ತಿಯಾದಾಗ ಅಯ್ಯೋ ಅಲ್ಲಿಡ್ರೀ ಅನ್ನೋದನ್ನು ಅಭ್ಯಾಸ ಮಾಡಿಕೊಂಡರು. ಸಾಹೇಬರಿಗೆ ಮೊದಲು ಒಬ್ಬಳು ಪಿ.ಎ. ಇದ್ದಳು. ಗೀತ ಅಂತ. ಅವಳನ್ನು ಸಾಹೇಬರು ಏನಮ್ಮಾ ನಿನಗೆ ಏನು ಕೆಲಸ ಕೊಟ್ಟರೂ ನಾನು ಏನಮ್ಮಾ ನಾನು ಕೊಟ್ಟ ಕೆಲಸ ಮುಗೀತಾ ಅಂತ ಕೇಳಬೇಕಾ ಇಲ್ಲಾ ಕೈ ಮುಗೀತಾ ಕೇಳಬೇಕಾ ಅಂತ ರೇಗಿಸಿದ್ದರು. ಅವಳಿಗೆ ಬೇರೆ ಕಡೆಗೆ ವರ್ಗವಾದ ಮೇಲೆ ಬಂದಿದ್ದು ಈ ಪಿ.ಎ. ಪದ್ಮನಾಭ್.

ಅವತ್ತು ಬೆಳಗ್ಗೆ ಸಾಹೇಬರು ಆಫೀಸಿಗೆ ಬರುತ್ತಿರುವಾಗ ಕಾರ್ ಪಾರ್ಕಿಂಗ್ ಜಾಗದಲ್ಲಿ ಸಿಕ್ಕಿದ ಜನರಲ್ ಮ್ಯಾನೇಜರ್ ಅವರು ಏನ್ರೀ ನೀವು ನೆನ್ನೆ ಗೀತ ಮಗನ ಹುಟ್ಟಿದ ಹಬ್ಬಕ್ಕೆ ಬರಲೇ ಇಲ್ಲ ಅಂತ ಕೇಳಿದರು. ಸಾಹೇಬರು ಅಚ್ಚರಿಯಿಂದ ಯಾವ ಗೀತ ಯಾವ ಹುಟ್ಟಿದ ಹಬ್ಬ ಅಂತ ಕೇಳಿದರು. ಅದಕ್ಕೆ ಅವರು ಇದೇನ್ರೀ ಹೀಗೆ ಕೇಳ್ತೀರ. ನಿಮ್ಮ ಪಿ.ಎ. ಆಗಿ ಐದು ವರ್ಷ ಕೆಲಸ ಮಾಡಿದ ಗೀತನಾ ನೀವು ಮರೆತೇಬಿಡೋದಾ. ಅವಳು ಬೇರೆ ವಿಭಾಗದಲ್ಲಿ ಕೆಲಸ ಮಾಡುತ್ತಿರಬಹುದು. ಆದರೆ ಆಕೆನೂ ನಮ್ಮ ಕಂಪನಿಯವರೇ ಅಲ್ವಾ ಅಂದರು. ಆಗ ಸಾಹೇಬರು, ಸರ್ ನನಗೆ ಆಹ್ವಾನ ಇರಲಿಲ್ಲ. ಗೀತ ನನಗೆ ಗೊತ್ತು. ನಾನು ಆಕೆನ ಮರೆತಿಲ್ಲ. ಆದರೆ ಆಹ್ವಾನ ಇಲ್ಲದೇ ಬರೋದು ಹೇಗೆ ಸರ್. ಅವರ ಮಗನ ಹುಟ್ಟಿದ ಹಬ್ಬ ಅಂತ ನನಗೆ ಈಗಲೇ ಗೊತ್ತಾಗಿದ್ದು ಅಂದರು. ಅದಕ್ಕೆ ಜನರಲ್ ಮ್ಯಾನೇಜರ್ ಇಟ್ಸ್ ಓಕೆ ಅಂದು ಹೊರಟುಹೋದರು.

ಸಾಹೇಬರು ಕ್ಯಾಬಿನ್ನಿಗೆ ಹೋಗಿ ಕೂತು ಮೊದಲು ಮಾಡಿದ ಕೆಲಸ ಗೀತಗೆ ಫೋನ್ ಮಾಡಿದ್ದು. ಏನಮ್ಮಾ ನಿನ್ನ ಮಗನ ಹುಟ್ಟಿದ ಹಬ್ಬಕ್ಕೆ ನನ್ನನ್ನು ಕರೆಯಲೇ ಇಲ್ವಲ್ಲಾ ಜನರಲ್ ಮ್ಯಾನೇಜರು ಯಾಕೆ ಬರಲಿಲ್ಲ ಅಂತ ಕೇಳಿದಾಗಲೇ ನನಗೆ ಗೊತ್ತಾದದ್ದು. ಯಾಕೆ ನನ್ನನ್ನು ಮರೆತುಬಿಟ್ಯಾಮ್ಮ ಅಂತ ಕೇಳಿದರು. ಅದಕ್ಕೆ ಗೀತ ಅಯ್ಯೋ ನಿಮ್ಮನ್ನು ಮರೆಯೋದುಂಟಾ ಸರ್ ನನಗೆ ಕೆಲಸ ಕಲಿಸಿದವರೇ ನೀವು. ನಾನು ಮೂರು ದಿವಸದ ಹಿಂದೆ ನಿಮ್ಮ ಕ್ಯಾಬಿನ್ನಿಗೆ ಬಂದಿದ್ದೆ ಸರ್. ನೀವು ಯಾವುದೋ ಕಡತದಲ್ಲಿ ಮುಳುಗಿದ್ದಿರಿ. ನಾನು ಒಳಗೆ ಬಂದು ಸರ್ ನನ್ನ ಮಗನ ಹುಟ್ಟಿದ ಹಬ್ಬ ಅಂತ ಹೇಳೋಷ್ಟರಲ್ಲಿ ನೀವು ಅಯ್ಯೋ ಅಲ್ಲಿಡ್ರೀ ಅಂದಿರಿ. ನನ್ನ ಕಡೆ ತಲೆ ಎತ್ತಿ ನೋಡಲೂ ಇಲ್ಲ. ನಾನು ನೀವು ನನ್ನನ್ನು ಗಮನಿಸಲ್ಲ ಅಂದು ಮತ್ತೊಮ್ಮೆ ಸರ್ ನಾನು ಗೀತ ಅಂದರೂ ನೀವು ಅಯ್ಯೋ ಅಲ್ಲಿಡ್ರೀ ಅಂದುಬಿಟ್ಟಿರಿ. ನಾನು ಸರಿ ಅಂದ್ಕೊಂಡು ಆಹ್ವಾನಪತ್ರಿಕೆ ನಿಮ್ಮ ಟೇಬಲ್ ಮೇಲಿಟ್ಟು ಬಂದೆ ಸರ್. ಅಂದಳು

ಸಾಹೇಬರಿಗೆ ಅದೇನೋ ಹೊಳೆದು ಅವತ್ತು ನೀವು ಮಲ್ಲಿಗೆ ಹೂವು

ಮುಡ್ಕೊಂಡು ಬಂದಿದ್ರಾ ಅಂತ ಕೇಳಿದರು. ಅದಕ್ಕೆ ಗೀತ ನಿಮಗೆ ಹೇಗೆ ಗೊತ್ತು ಸರ್. ಸಾಹೇಬರು ನೀವು ಮಲ್ಲಿಗೆ ಹೂವು ಮುಡ್ಕೊಂಡು ನಮ್ಮ ಕ್ಯಾಬಿನ್ನಿಗೆ ಬಂದು ಹೋದ ಮೇಲೂ ಅಲ್ಲಿ ಮಲ್ಲಿಗೆ ಹೂವಿನ ಪರಿಮಳ ಇತ್ತು. ನಾನು ಸುತ್ತಮುತ್ತ ನೋಡಿದೆ. ಪಿ.ಎ.ನ ಕರೆದು ಇದೇನ್ರೀ ಇಲ್ಲಿ ಮಲ್ಲಿಗೆ ಹೂವಿನ ವಾಸನೆ ಬರ್ತಿದೆ ಅಂತ ಕೇಳಿದ್ದಕ್ಕೆ ಅವನು ಸರ್ ನೀವು ಬಹುಶ: ಇದೇ ಡ್ರೆಸ್ ಹಾಕ್ಕೊಂಡು ನಿಮ್ಮ ಮನೆಯವರ ಜೊತೆ ನೆನ್ನೆ ಷಾಪಿಂಗ್ ಹೋಗಿದ್ದಿರಬಹುದು ಅಂದುಬಿಟ್ಟ. ಅಂದರು. ಗೀತಾ ಸರ್ ನಾನು ಅವತ್ತು ನಿಮ್ಮ ಕ್ಯಾಬಿನ್ನಿಗೆ ಬಂದಾಗ ನಿಮ್ಮ ಯಾವ ಸ್ಟಾಫೂ ಇರಲಿಲ್ಲ. ಅವರೆಲ್ಲ ಊಟಕ್ಕೆ ಹೋಗಿದ್ದರು. ನಾನು ಬಂದಿದ್ದು ಹೋದದ್ದು ಯಾರಿಗೂ ಗೊತ್ತಾಗಿಲ್ಲ. ನೀವು ನನ್ನ ಆಹ್ವಾನಪತ್ರಿಕೆ ನೋಡ್ಲೇ ಇಲ್ವಾ ಸರ್ ಅಂತ ಕೇಳಿದಳು. ಸಾಹೇಬರು ಇನ್ನು ಮಾತು ಬೆಳೆಸುವುದು ಬೇಡವೆಂದು ಹೋಗ್ಲಿ ಬಿಡ್ರೀ ಈ ಶನಿವಾರ ನಾನೂ ನನ್ನ ಮಿಸೆಸ್ಸೂ ನಿಮ್ಮ ಮನೆಗೆ ಬರ್ತೀವಿ. ಐ ಆಮ್ ಸಾರಿ ಹುಟ್ಟಿದ ಹಬ್ಬಕ್ಕೆ ಬರೋಕೆ ಆಗಲಿಲ್ಲ ಅಂತ ಗೀತಂಗೆ ಸಮಾಧಾನ ಮಾಡಿ ಕಳಿಸಿದರು.

ಅಯ್ಯೋ ಅಲ್ಲಿಡ್ರೀ ಅನ್ನೋದನ್ನು ಬಿಡಬೇಕು ಅಂತ ಸಾಹೇಬರು ಬಹಳ ಪ್ರಯತ್ನ ಪಡುತ್ತಿದ್ದಾರೆ. ಆದರೆ ಅವರಿಂದ ಆಗ್ತಿಲ್ಲ. ಒಂದೊಂದು ಸಾರಿ ಮನೆಯಲ್ಲೂ ಪೇಪರ್ ಓದ್ತಾ ಕೂತಿರುವಾಗ ಅವರ ಹೆಂಡತಿ ಕಾಫಿನೋ ಕುರುಕಲೋ ತಂದು ಕೊಡುವಾಗಲೂ ಅಯ್ಯೋ ಅಲ್ಲಿಡ್ರಿ ಅಂದಿದಾರೆ. ಆಗ ಅವರ ಹೆಂಡತಿ ತಲೆ ಮೇಲೆ ಒಂದು ಮೊಟಕಿ ಇದು ಮನೆ ಆಫೀಸಲ್ಲ ಅಂದು ಹೋಗಿದ್ದಾರೆ. ಸಾಹೇಬರ ಹೆಂಡತಿಯೂ ಇದನ್ನು ಬಿಡಿಸೋಕೆ ಪ್ರಯತ್ನ ಪಟ್ಟರೂ ಆಗದೇ ಹೋಗ್ಲಿ ಅವರ ಹಣೆಬರಹ ಅಂತ ಸುಮ್ಮನಾಗಿದ್ದಾರೆ.

ಸಾಹೇಬರು ಅಯ್ಯೋ ಅಲ್ಲಿಡ್ರೀ ಅಂತಾರೆ ಅನ್ನೋ ದೂರು ಎಲ್ಲ ಕಡೆಯೂ ಇದೆ. ಅದಕ್ಕೆ ಒಂದೊಂದು ಸಾರಿ ಜನರಲ್ ಮ್ಯಾನೇಜರ್ ಅವರು ನೋಡ್ರೀ ಅವರ ಕ್ಯಾಬಿನ್ನಿಗೆ ಹೋದಾಗ ಇದನ್ನು ಅವರ ಕೈಗೇ ಕೊಡಿ. ಅಯ್ಯೋ ಅಲ್ಲಿಡ್ರೀ ಅಂದರೆ ಕೇಳಬೇಡಿ ಅಂತ ಹೇಳಿ ಕಳಿಸಿರುತ್ತಾರೆ. ಅವತ್ತು ಸಾಹೇಬರ ಮುಂದೆ ಮೂರು ಜನ ಮೀಟಿಂಗಿಗೆ ಕೂತಿದ್ದರು. ಸಾಹೇಬರು ಕಡತದಲ್ಲಿ ಮುಳುಗಿಯೇ ಮಾತಾಡುತ್ತಿದ್ದರು. ಬಾಗಿಲು ತೆಗೆದುಕೊಂಡು ಸಾರ್ ಅನ್ನೋ ಧ್ವನಿ ಕೇಳಿದಾಗ ಸಾಹೇಬರು ಅಯ್ಯೋ ಅಲ್ಲಿಡ್ರೀ ಅಂದರು. ಅವನು ಅಲ್ಲಿಟ್ಟು ಹೋದ. ಅದು ಸಾಹೇಬರಿಗೆ ಪ್ರಿಯವಾದ ಹಲಸಿನ ಹಣ್ಣು. ಎದುರಿಗೆ ಕೂತಿದ್ದವರು ಇದು ನಮಗೇ ಇರಬೇಕು ಅಂತ ಸುಮಾರು ಇಪ್ಪತ್ತು ತೊಳೆಗಳನ್ನು ಮೂರು ಜನರೂ ಮುಕ್ಕಿ ಮುಗಿಸಿದರು. ನಡುನಡುವೆ ಹಲಸಿನ ಹಣ್ಣಿನ ವಾಸನೆ ಬರುತ್ತಿರುವಾಗ ಸಾಹೇಬರು ಮೂಗು ಸವರಿಕೊಳ್ಳುತ್ತಿದ್ದರು. ನಂತರ ತಲೆಎತ್ತಿ ಅವನಿಗೆ ಹಲಸಿನ ಹಣ್ಣು ತಗೊಂಡುಬಾ ಅಂದಿದ್ದೆ ಬರೀ ವಾಸನೆ ಬರ್ತಿದೆ ಆದರೆ ಹಣ್ಣೇ ಬರಲಿಲ್ಲ ಅಂದರು. ಎದುರಿಗೆ ಕೂತಿದ್ದವರು ಸರ್ ಹಲಸಿನಹಣ್ಣು ಬಂದಿದ್ದೂ ಆಯಿತು ನಾವು ತಿಂದದ್ದೂ ಆಯಿತು ಅಂದಾಗ ಸಾಹೇಬರಿಗೆ ಅಚ್ಚರಿ. ಸರ್ ಅವನು ಹಲಸಿನ ಹಣ್ಣು ತಂದಾಗ ಅಯ್ಯೋ ಅಲ್ಲಿಡ್ರೀ ಅಂತ ನಮ್ಮ ಕಡೆ ತೋರಿಸಿದಿರಿ. ಅವನು ನಮ್ಮ ಮುಂದಿಟ್ಟ. ಅದು ನಮಗೇ ಇರಬೇಕು ಅಂತ ನಾವು ತಿಂದೆವು ಅಂದಾಗ ಸಾಹೇಬರು ಇಂಗು ತಿಂದ ಮಂಗನಂತಾದರು. ಅವರೇ ಎಷ್ಟೊ ಪ್ರಯತ್ನ ಪಟ್ಟರೂ ಅಯ್ಯೋ ಅಲ್ಲಿಡ್ರೀ ಅನ್ನೋದನ್ನು ಬಿಡೋಕೆ ಆಗ್ತಿಲ್ಲ. ಕೆಲವು ಅಭ್ಯಾಸಗಳು ದೂರವಾಗೋದು ಕಷ್ಟ. ■

# ಯಶೋಗಾಥೆ.....!

**– ವಿ.ವಿಜಯೇಂದ್ರ ರಾವ್**

ಎಂ.ಜಿ.ರೋಡಿನಲ್ಲಿರುವ ವಿದೇಶಿ ಬ್ಯಾಂಕಿನ ಚೀಫ್ ಮ್ಯಾನೇಜರ್, ದಿನಾಲು ಆಫೀಸಿಗೆ ಹೋಗುವುದಕ್ಕೆ ಮುಂಚೆ, ಆ ರಸ್ತೆಯ ಒಂದು ಮೂಲೆಯಲ್ಲಿ ಬೂಟ್ ಪಾಲೀಶ್ ಹಾಕಿಸಿಕೊಂಡು ಹೋಗುವ ಪದ್ಧತಿ ಇಟ್ಟುಕೊಂಡಿದ್ದರು.

ಒಂದು ದಿನ, ಹಾಗೆ ಅವನು ಪಾಲಿಶ್ ಮಾಡುತ್ತಿದ್ದಾಗ, ಅವನಿಟ್ಟಿದ್ದ ಚೇರಿನಲ್ಲಿ ಕುಳಿತು ದಲಾಲ್ ಸ್ಟ್ರೀಟ್ ಜರ್ನಲ್ ನೋಡುತ್ತಾ ಇದ್ದಾಗ, ಅವನು ಈ ದಿನ ಹೇಗಿದೆ ಸಾರ್, ಸ್ಟಾಕ್ ಮಾರ್ಕೆಟ್ ಪರಿಸ್ಥಿತಿ? ಎಂದು ಕೇಳಿದಾಗ, ಮ್ಯಾನೇಜರ್ – ನಿನಗ್ಯಾಕಯ್ಯಾ, ಅದನ್ನು ಕಟ್ಟಿಕೊಂಡು ಏನು ಮಾಡುತ್ತಿ? ಎಂದು ಹಾಸ್ಯ ಮಾಡಿದರು. ಆಗ ಅವನು, ನಾನು ನಿಮ್ಮ ಬ್ಯಾಂಕ್‌ನಲ್ಲಿ 50 ಲಕ್ಷ ರೂಪಾಯಿ ಡೆಪಾಸಿಟ್ ಇಟ್ಟಿದ್ದೇನೆ. ಅದರಲ್ಲಿ ಸ್ವಲ್ಪ ಭಾಗವನ್ನು ಸ್ಟಾಕ್ ಮಾರುಕಟ್ಟೆಯಲ್ಲಿ ಹಾಕೋಣ್ವಾ ಅಂತ ಯೋಚಿಸುತ್ತಾ ಇದ್ದೇನೆ ಎಂದಾಗ, ಆಶ್ಚರ್ಯಕರವಾಗಿ ಅವನತ್ತ ನೋಡಿ – ನಿನ್ನ ಹೆಸರೇನಪ್ಪಾ ಎಂದು ಕೇಳಿದರು. ಅವನು – ನನ್ನ ಹೆಸರು ಸಂಪತ್ ರಾಜ್ ಅಂತ ಎಂದು ಹೇಳಿದನು.

ಚೀಫ್ ಮ್ಯಾನೇಜರ್ ಅವಸರವಾಗಿ ಬಂದು, ಅಕೌಂಟ್ಸ್ ಆಫೀಸರ್ ನ ಕರೆದು, ನಮ್ಮ ಗ್ರಾಹಕರಲ್ಲಿ ಸಂಪತ್ ರಾಜ್ ಅಂತ ಇದ್ದಾರಾ? ಎಂದು ಕೇಳಿದಾಗ, ಅವರು – ಹೌದು ಸಾರ್, ನಮ್ಮ ಮುಖ್ಯ ಗ್ರಾಹಕರಲ್ಲಿ ಅವರು ಒಬ್ಬರು. ಅವರ ಹೆಸರಿನಲ್ಲಿ 50 ಲಕ್ಷ ರೂಪಾಯಿ ಇದೆ ಎಂದರು.

ಚೀಫ್ ಮ್ಯಾನೇಜರ್ ತಕ್ಷಣವೇ ಹೊರಗೆ ಬಂದು ಆ ಪಾಲಿಶ್ ಮಾಡುವವನ ಹತ್ತಿರ ಬಂದು –ಮಿ.ಸಂಪತ್ ರಾಜ್, ನಿಮ್ಮನ್ನು ನೋಡಿ ತುಂಬಾ ಹೆಮ್ಮೆಯಾಯಿತು. ಮುಂದಿನ ಸೋಮವಾರ ನಮ್ಮ ಬ್ಯಾಂಕಿನ ಬೋರ್ಡ್ ಮೀಟಿಂಗ್‌ಗೆ ವಿಶೇಷ ಅತಿಥಿಯಾಗಿ ಆಹ್ವಾನಿಸುತ್ತಿದ್ದೇನೆ. ನೀವು ನಿಮ್ಮ ಯಶೋಗಾಥೆಯನ್ನು ನಮ್ಮೆಲ್ಲರಿಗೂ ತಿಳಿಸಿ. ನಿಮ್ಮಿಂದ ನಮಗೆ ಕಲಿಯೋದು ಬಹಳ ಇರುತ್ತೆ ಅನ್ನಿಸುತ್ತೆ. ಖಂಡಿತವಾಗಿ ಬನ್ನಿ ಎಂದರು.

ಬೋರ್ಡ್ ಮೀಟಿಂಗ್‌ನಲ್ಲಿ, ಚೀಫ್ ಮ್ಯಾನೇಜರ್ ಅವನನ್ನು ಎಲ್ಲರಿಗೂ ಪರಿಚಯಿಸುತ್ತಾ, ಇವರು ಸಂಪತ್ ರಾಜ್ ಅಂತ, ಶೂ ಪಾಲಿಶ್ ಉದ್ಯೋಗ ಮಾಡುತ್ತಾರೆ, ಹಾಗೂ ನಮ್ಮ ಬ್ಯಾಂಕಿನ ಬಹು ಮುಖ್ಯ ಗ್ರಾಹಕರು ಕೂಡ. ಇವರು ನಮ್ಮಲ್ಲಿ 50 ಲಕ್ಷ ರೂಪಾಯಿ ಇಟ್ಟಿದ್ದಾರೆ. ಈಗ ಇವರು ಅವರ ಯಶಸ್ಸಿನ ರಹಸ್ಯವನ್ನು ನಮ್ಮ ಮುಂದೆ ಇಡಲಿದ್ದಾರೆ ಎಂದು ಅವನನ್ನು ಮಾತನಾಡಲು ವೇದಿಕೆಗೆ ಕರೆದರು.

ಸಂಪತ್ ರಾಜ್ ತನ್ನ ಆತ್ಮಕಥನ ಶುರು ಮಾಡಿದನು. ನಾನು ನನ್ನ ಹಳ್ಳಿಯಿಂದ ಈ ಊರಿಗೆ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಬಂದೆ. ನಾನು ಮಾಡಿದ ಮೊದಲ ಕೆಲಸವೆಂದರೆ, ಈ ಪಟ್ಟಣಕ್ಕೆ ಹೊಂದುವಂತಹ ಹೆಸರನ್ನು 'ಮುನಿಯ'ನಿಂದ " ಸಂಪತ್ ರಾಜ್ " ಅಂತ ಬದಲಾಯಿಸಿಕೊಂಡೆ. ಎಲ್ಲಾ ಕಡೆ ಕೆಲಸಕ್ಕಾಗಿ ಅಲೆದಾಡಿದೆ, ಎಲ್ಲೂ ಸರಿಯಾದ ಕೆಲಸ ಸಿಗಲಿಲ್ಲ. ಹಾಗೆ ಬೇಜಾರಿನಿಂದ ನಡೆದು ಹೋಗುತ್ತಿದ್ದಾಗ, ನನಗೆ ನೂರು ರೂಪಾಯಿ ನೋಟು ದಾರಿಯಲ್ಲಿ ಸಿಕ್ಕಿತು.

ಆ ದುಡ್ಡಿನಿಂದ ನಾನು ಒಂದು ಡಜನ್ ಸೇಬಿನ ಹಣ್ಣನ್ನು ಕೊಂಡುಕೊಂಡೆ. ಆಗ ನನಗೆ ಎರಡು ಅವಕಾಶ ಇತ್ತು. ಒಂದು ಸೇಬನ್ನು ತಿಂದು ಹಸಿವನ್ನು ನೀಗಿಸಿಕೊಳ್ಳುವುದು. ಇನ್ನೊಂದು ಆ ಹಣ್ಣನ್ನು ಲಾಭಕ್ಕಾಗಿ ಮಾರುವುದು. ನಾನು ಎರಡನೆಯದನ್ನು ಆರಿಸಿಕೊಂಡೆ. ಹಾಗೆ ವ್ಯಾಪಾರ ಮಾಡುತ್ತಾ, ಮಾಡುತ್ತಾ ದುಡ್ಡು ನನ್ನ ಬಳಿ ಸೇರಿದಾಗ, ನಾನು ಒಂದು ಸೆಟ್ ಒಳ್ಳೆಯ ಶೂ ಪಾಲಿಶ್, ಅದರ ಬ್ರಶ್‌ಗಳು ತೊಗೊಂಡು ಮುಂದಿನ ರಸ್ತೆಯ ಬದಿಯಲ್ಲಿ ಶೂ ಪಾಲಿಶ್ ವೃತ್ತಿಯನ್ನು ಪ್ರಾರಂಭಿಸಿದೆ. ನಾನು ಯಾವುದೇ ಶೋಕಿ ಮಾಡಲಿಲ್ಲ. ಒಳ್ಳೆಯ ಮೌಲ್ಯದ ಶೂ ಪಾಲಿಶ್, ಬ್ರಶ್ ಮತ್ತು ಗ್ರಾಹಕರು ಪಾಪ ತುಂಬಾ ಹೊತ್ತು ನಿಲ್ಲಬಾರದೆಂದು ಅವರಿಗೆ ಕೂಡಲು ಒಂದು ಕುರ್ಚಿಯನ್ನು ತಂದು ಹಾಕಿದೆ. ಈ ನನ್ನ ಕಾರ್ಯದಿಂದ ಹೆಚ್ಚು ಹೆಚ್ಚು ಜನ ಪಾಲಿಶ್ ಮಾಡಿಸಿಕೊಳ್ಳಲು ಬರುತ್ತಿದ್ದರು. ನಿಮ್ಮ ಬ್ಯಾಂಕಿನ ಹತ್ತಿರದ ಜಾಗವನ್ನು ನನ್ನ ಸ್ನೇಹಿತ ಕೆಲವು ತಿಂಗಳ ಮೊದಲು ನನಗೆ ಬಿಟ್ಟುಕೊಟ್ಟನು.

..

..

ಕೊನೆಗೆ, ಈಗ ಮೂರು ತಿಂಗಳ ಮುಂಚೆ, ಮುಂಬೈನಲ್ಲಿ ಒಬ್ಬ ದೊಡ್ಡ ಡ್ರಗ್ ಪೆಡ್ಲರ್ ಆಗಿದ್ದ ನನ್ನ ಚಿಕ್ಕಪ್ಪ, ಅವರಿಗೆ ಯಾರೂ ವಾರಸುದಾರರು ಇಲ್ಲದಿದ್ದ ಕಾರಣ, ತನ್ನ ಎಲ್ಲಾ ಆಸ್ತಿಯನ್ನು ನನ್ನ ಹೆಸರಿಗೆ ಬರೆದಿದ್ದರಿಂದ, ನನಗೆ 50 ಲಕ್ಷ ರೂಪಾಯಿ ಬಂದಿತು....! ಎಂದು ಹೇಳಿ ಕುಳಿತನು.

ಓಕೆ, ಓಕೆ...., ಬೈಯ್ಕೊಬೇಡಿ, ಮೇಲಿನ ಕಥನದಿಂದ ಓದೋ ಹವ್ಯಾಸನೇ ಬಿಟ್ಟಿಡಬೇಡಿ. ಪ್ರಪಂಚದಲ್ಲಿ ಎಲ್ಲಾ ತರಹದ ಜನಾನು ಇರ್ತಾರಲ್ವೇ....! ■

## "ಸತ್ತೂ....ಬಿಡಲ್ವಾ.? "

ಮಹೇಶ್, ರಾಧ ಪ್ರೇಮಿಸಿ ಹಿರಿಯರ ಒಪ್ಪಿಗೆಯನ್ನು ಪಡೆದು ಮದುವೆಯಾಗಿದ್ದರು. ಮಹೇಶನಿಗೆ ತಂದೆಯಿಲ್ಲದೆ, ತಾಯಿ ಶಾಂತಮ್ಮ ಮಾತ್ರ ಇದ್ದು ಹೊಸದರಲ್ಲಿ ತನ್ನ ಸೊಸೆ ರಾಧೆಯೊಂದಿಗೆ ಚೆನ್ನಾಗಿ ಮಾತನಾಡಿಕೊಂಡು ಇರುತ್ತಿದ್ದರು. ಮಹೇಶ್ ಸಾಫ್ಟ್‌ವೇರ್ ಇಂಜಿನಿಯರ್‌ಗಳ ಹಣೆಬರಹದಂತೆ ಬೆಳಿಗ್ಗೆ ಏಳಕ್ಕೆ ಮನೆ ಬಿಟ್ಟರೆ, ಮತ್ತೆ ಮನೆಗೆ ಬರುತ್ತಿದ್ದದ್ದು ರಾತ್ರಿ ಒಂಬತ್ತರ ನಂತರವೇ. ಅತ್ತೆ ಸೊಸೆ ಎಷ್ಟೇ ಹೊಂದಿಕೊಂಡಿದ್ದರೂ ಕಾಲ ಕ್ರಮೇಣ ಅದು ಸ್ವಲ್ಪ ಮಟ್ಟಿಗೆ ಸಡಿಲವಾಗಿ, ಆಗಾಗ್ಗೆ ಭಿನ್ನಾಭಿಪ್ರಾಯಗಳು ಬಂದು ಇಬ್ಬರೂ ಬುಸುಗುಡುತ್ತಿದ್ದರು. ಮನಸ್ಥಿತಿ ಹೇಗೆ ಇದ್ದರೂ ರಾತ್ರಿ ಆರರಿಂದ ಒಂಬತ್ತರವರೆಗೆ ಎಡಬಿಡದೆ ಟಿವಿ ಮಾತ್ರ ಒಟ್ಟಿಗೆ ನೋಡುತ್ತಿದ್ದರು ಮಹೇಶ್ ಬರುವವರೆಗೆ.

ಹೀಗೆ ಶಾಂತವಾಗಿ ಸಾಗುತ್ತಿದ್ದ ಅವರುಗಳ ಬಾಳಪಯಣದಲ್ಲಿ ಒಂದು ದಿನ ರಾತ್ರಿ ಶಾಂತಮ್ಮನವರು ಮಲಗಿದವರು ಬೆಳಿಗ್ಗೆ ಏಳದೇ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸೇಬಿಟ್ಟಿದ್ದರು. ಡಾಕ್ಟರ್ ಬಂದು ನಿದ್ರೆಯಲ್ಲೇ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ ಎಂದು ಹೇಳಿದಾಗ ಮಹೇಶ್ ಏನೂ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ಏನೋ... ಏನೂ ನರಳದೇ ಸುಖವಾಗಿ ಪ್ರಾಣ

ಬಿಟ್ಟರು ಅನ್ನೋದೆ ಸಂತೋಷ ಎಂದಾಗ, ರಾಧೆಯು ಅನುಮೋದಿಸಿದಳು.

ಇನ್ನು ಮೂರನೆಯ ದಿನದಿಂದ ಶಾಸ್ತ್ರೋಕ್ತವಾಗಿ ಅವನ ಅಮ್ಮನ ಕರ್ಮಾದಿ ಕಾರ್ಯಗಳನ್ನು ತನ್ನ ನೆಂಟರಿಷ್ಟರ ಸಮ್ಮುಖದಲ್ಲಿ ಮಾಡಿ, ಅದರ ಅಂಗವಾಗಿ ಉಚ್ಚಿಷ್ಠ ಪಿಂಡವನ್ನು ಕಾಗೆಗೆ ಇಟ್ಟು, ಕಾ..ಕಾ ಎಂದು ಕರೆದನು. ಅಲ್ಲೇ ಹಲವಾರು ಕಾಗೆಗಳು ಸುತ್ತಾಡುತ್ತಿದ್ದರೂ ಯಾವುದೂ ಅದರ ಬಳಿಗೆ ಹೋಗುತ್ತಿರಲಿಲ್ಲ. ಮಹೇಶ್ ಅಂತೂ ಕಾಗೆ ಅದನ್ನು ತಿಂದ ಮೇಲೆ, ಬಾಕಿ ಎಲ್ಲರಿಗೆ ಊಟ ಎಂದು ಹೇಳಿದನು. ಇದನ್ನು ನೋಡುತ್ತಿದ್ದ ಅವನ ನೆಂಟರಿಷ್ಟರು ಗಂಟೆ ಮೂರರ ಹತ್ತಿರ ಸಮೀಪಿಸಿ ಎಲ್ಲರ ಹೊಟ್ಟೆ ಚುರುಗುಟ್ಟುತ್ತಿದ್ದರಿಂದ ಎಲ್ಲರೂ ತಮ್ಮ, ತಮ್ಮ ವಿಶಿಷ್ಠವಾದ ಸ್ವರಗಳಲ್ಲಿ ಕಾಗೆಗಳನ್ನು ಕರೆದರೂ ಯಾವುದೂ ಜಪ್ಪಯ್ಯ ಅಂದರೂ ಹತ್ತಿರ ಬರಲಿಲ್ಲ. ಇತ್ತ ಮಹೇಶ್ ತನ್ನಿಂದ ಏನಾದರೂ ಅಪಚಾರ ಆಯ್ತೇನೋ ಅಂತ ಚಿಂತಾಕ್ರಾಂತನಾದನು.

ಇದನ್ನೆಲ್ಲಾ ಗಮನಿಸುತ್ತಿದ್ದ ಸೊಸೆ ರಾಧೆಯು, ತನ್ನ ಅತ್ತೆಯ ಫೋಟೋ ಇಟ್ಟು ದೀಪ ಹಚ್ಚಿದ್ದ ರೂಮಿಗೆ ಹೋಗಿ, ಆ ರೂಮಿನಲ್ಲಿ ಇದ್ದವರನ್ನು ದಯಮಾಡಿ ಸ್ವಲ್ಪ ಹೊತ್ತು ಆಚೆಗೆ ಹೋಗಿ ಎಂದು ವಿನಂತಿಸಿ, ಫೋಟೋವಿಗೆ ಕೈ ಮುಗಿಯುತ್ತಾ ಬಾಗಿಲು ಹಾಕಿಕೊಂಡಳು. ಸುಮಾರು ಹದಿನೈದು ನಿಮಿಷಗಳ ನಂತರ ಬಾಗಿಲು ತೆಗೆದಿದ್ದೇ ತಡ, ಎಲ್ಲಿ ಅಡಗಿದ್ದವೋ, ಕಾಗೆಗಳು ಗುಂಪಾಗಿ ಬಂದು ಆ ಪಿಂಡವನ್ನು ಸಂತೋಷದಿಂದ ಒಂದು ಅಗುಳು ಸಹ ಬಿಡದಂತೆ ಖಾಲಿ ಮಾಡಿದಾಗ, ಮಹೇಶನಿಗೆ, ಬಾಕಿ ಎಲ್ಲಾ ನೆಂಟರಿಗೂ ಸಂತೋಷವಾಗಿ, ನಂತರ ಎಲ್ಲರೂ ತೃಪ್ತಿಕರವಾಗಿ ಊಟ ಮಾಡಿದರು.

ಹೀಗೆ, ಮುಂದಿನ ಎಲ್ಲಾ ದಿನಗಳಲ್ಲೂ, ವೈಕುಂಠ ಸಮಾರಾಧನೆ ಮುಗಿಯುವವರೆಗೂ, ಸೊಸೆ ರಾಧ... ಅತ್ತೆ ಜೊತೆಗೆ ಏಕಾಂತವಾಗಿ ಮಾತನಾಡಿದ ನಂತರ ಕಾಗೆ ಬಂದು ತಿಂದು ಹೋಗುತ್ತಿತ್ತು.

ಮಹೇಶನಿಗೆ, ಈಗ ಎಲ್ಲಾ ಕೆಲಸ, ಕಾರ್ಯಗಳೂ ಮುಗಿಯಿತು. ಎಲ್ಲರೂ ಅವರವರ ಮನೆಗೆ ಹೋಗೂ ಆಯಿತು. ಇನ್ನಾದರೂ ನನಗೆ ಹೇಳೇ, ಆ ಕೋಣೆಯಲ್ಲಿ ಬಾಗಿಲು ಹಾಕಿಕೊಂಡು ಏನು ಮಾಡುತ್ತಿದ್ದೆ ? ಅಂದಿನಿಂದ ನನ್ನ ತಲೆಯಲ್ಲಿ ಕುತೂಹಲ ಸುಮ್ಮನೇ ಕೊರೆಯುತ್ತಿದೆ ಎಂದು ತನ್ನ ಹೆಂಡತಿ ರಾಧೆಗೆ ಪೀಡಿಸಿದನು.

ಅದಕ್ಕೆ ರಾಧ, ಅದು ಏನಿಲ್ರೀ, ನಾನು, ನಿಮ್ಮ ಅಮ್ಮ ದಿನಾ ಸಂಜೆ ಆರರಿಂದ ಒಂಬತ್ತರವರೆಗೆ ಬರುತ್ತಿದ್ದ ದಾಸ ಪುರಂದರ, ದೊರೆಸಾನಿ, ಕನ್ನಡತಿ, ಜೊತೆ ಜೊತೆಯಲಿ, ಹಿಟ್ಲರ್ ಕಲ್ಯಾಣ, ಗೀತ, ಗಿಣಿರಾಮ, ರಾಮಾಚಾರಿ ಇತ್ಯಾದಿ ಧಾರಾವಾಹಿಗಳನ್ನು ಒಟ್ಟಿಗೆ ನೋಡುತ್ತಿದ್ದವಲ್ಲ. ನಿಮ್ಮಮ್ಮಂಗೆ ಅದೆಲ್ಲಾ ಅಂದ್ರೆ ಪ್ರಾಣ, ಯಾವಾಗಲೂ ಅದರ ಬಗ್ಗೆಯೇ ಯೋಚಿಸಿ ನನ್ನ ಹತ್ತಿರ ಚರ್ಚಿಸುತ್ತಿದ್ದರು.ಅವರು ಇದ್ದದ್ದಕ್ಕಿದ್ದ ಹಾಗೆ ಸತ್ತಿದ್ದರಿಂದ, ಅವರಿಗೆ ಅದೆಲ್ಲಾ ಏನಾಯಿತೋ ಅನ್ನೋ ಕೆಟ್ಟ ಕುತೂಹಲ ಇರುತ್ತೆ ಎಂದೆನಿಸಿ, ಆ ರೂಮಿನ ಬಾಗಿಲು ಹಾಕಿ, ಎಲ್ಲದರ ಸಂಕ್ಷಿಪ್ತ ಕಥೆಯನ್ನು ಕೈ ಮುಗಿದು ಅವರ ಫೋಟೋ ಮುಂದೆ ಹೇಳುತ್ತಿದ್ದೆ ಎಂದಳು. ಇದನ್ನು ಕೇಳಿ ಬೆಚ್ಚಿಬಿದ್ದು ಮೂರ್ಛೆ ಹೋದ ಮಹೇಶ್‌ನನ್ನು ಎಬ್ಬಿಸಲು ರಾಧೆ ಹರಸಾಹಸ ಪಟ್ಟಳು....!

■

# ಪೋಸ್ಟ್ ಆಫೀಸಿನಲ್ಲಿ ಟ್ರೈನ್ ಟಿಕೆಟ್!

**– ಇ.ಆರ್. ರಾಮಚಂದ್ರನ್**

'ಇನ್ನು ಮೇಲೆ ಪೊಸ್ಟಾಫೀಸಿನಲ್ಲೇ ರೈಲ್ವೆ ಟಿಕೆಟ್ ದೊರಕುತ್ತೆ ಅಜ್ಜಿ! ಸ್ಟೇಷನ್ ತನಕ ಹೋಗಿ ಟಿಕೆಟ್ ಬುಕ್ ಮಾಡೋದು ತಪ್ಪುತ್ತೆ. ಓದಿದೆಯಾ ಇವತ್ತಿನ ಪೇಪರ್ನಲ್ಲಿ?'

ಅಡುಗೆ ಮನೆಯಲ್ಲಿದ್ದ ಅಜ್ಜಿಗೆ ಕೂಗಿ ಹೇಳಿದೆ.

ಅಜ್ಜಿ ಮೊದಲಿನಿಂದ ಟ್ರೈನ್‌ನಲ್ಲೇ ಎಲ್ಲಾ ಕಡೆ ಓಡಾಡಿದವರು. ನಾಲಕ್ಕೂ ಕಡೆ ಹೋಗುವ ಹಳಿಗಳನ್ನು ಜೋಪಾನವಾಗಿ ದಾಟಿ, ಎಷ್ಟೋ ರೈಲ್ವೆ ಸ್ಟೇಷನ್ನ ನೀರು ಕುಡಿದು ಕೆಲವು ಸರ್ತಿ ಪ್ಲಾಟ್ಫಾರ್ಮನಲ್ಲೇ ಮಲಗಿ ಪಳಗಿದ ಜೀವ ಅದು.

ಹಾಲಿಗೆ ಬಂದು ಸೋಫಾದಲ್ಲಿ ಕುಳಿತು ಅಜ್ಜಿ 'ನಾನೂ ನೋಡ್ದೆ ಅದನ್ನ. ಯಾಕೆ ಇದೆಲ್ಲ ಮಾಡ್ತಾ ಇದಾರೊ! ಈಗಲೇ ಎಲ್ಲಾದರಲ್ಲೂ ಕನ್ಫೂಷನ್ ಇದೆ. ಇದು ಬೇರೆ ಸೇರ್ಕೊಳುತ್ತೆ'.

ನಮ್ಮ ಪುಢಾರಿಗಳಿಗೆ ಎಲೆಕ್ಷನ್ಗೆ ಟಿಕೆಟ್ ಸಿಗದಿದ್ದರೆ ಮುಖದಲ್ಲಿ ಹಾಳು ಸುರೀತಿರುತ್ತೆ, ಜೀವನದಲ್ಲಿ ಜಿಗುಪ್ಸೆಯಾಗಿರುತ್ತಾರೆ ಅಂತ ಎಲ್ಲೋ ಓದಿದ್ದೆ. ಅಜ್ಜಿ ಮಾತಾಡೋ ರೀತಿ ನೋಡಿದ್ರೆ ಅವರಿಗೆ ಗ್ರಾಜುಏಟ್ ಕಾನ್ಸ್ಟಿಟುಎನ್ಸಿಗೂ ಸೀಟು ಸಿಗದಿದ್ದ ಪುಢಾರಿಯ ತರಹ ಕಾಣಿಸ್ತು. ಅಜ್ಜಿಯ ಓಡಾಟದಲ್ಲಿ ಡರ್ಬಿಲಿ ಗೆದ್ದ ಕುದುರೆಯ ಹುರುಪು ಇರಲಿಲ್ಲ.

ಸ್ವಲ್ಪ ಕೆದಕಿನೋಡುವಾ ಅಂತ ಅನ್ನಿಸ್ತು. ಒಂದೆರೆಡು ಸಿಕ್ಸರ್ ಹೊಡೆದ ಮೇಲೇನೇ ಕೆ ಎಲ್ ರಾಹುಲ್ ಯಾವಾಗಲೂ ಫಾರ್ಮಗೆ ಬರೋದು.

'ಯಾಕಜ್ಜಿ ನೀನು ಇಷ್ಟು ಸುಲಭವಾಗಿ ಇದನ್ನ ತಳ್ಳಿ ಹಾಕ್ದೆ? ಎಲ್ಲರಿಗೂ ಇದು ಒಳ್ಳೆದಲ್ವಾ?'

'ಏನೋಪ್ಪ... ಪೋಸ್ಟ್ ಆಫೀಸಿನಲ್ಲಿ ಕೆಲಸ ಮಾಡೋವ್ರಿಗೆ ಈಗಲೇ ಎಷ್ಟು ಫಜೀತಿ ನೋಡು. ಮೊನ್ನೆ ಮಾರತ್ಹಳ್ಳಿ ಪೋಸ್ಟ್ ಆಫೀಸ್ ಮ್ಯಾನೇಜರ್ ನಮ್ಮ ಸುಲೋಚನ ಹೇಳ್ತಿದ್ರು... 'ನಮ್ಮನ್ನು ಈಗ ಕೇಳೊವ್ರು ಯಾರೂ ಇಲ್ಲ... ರಿಟೈರ್ ಆಗಿ ಹೋದವನ ಜಾಗಕ್ಕೆ ಇನ್ನೊಬ್ಬನ್ನ ಹಾಕಲ್ಲ.....ಒಬ್ಬೊಬ್ರೇ ಸುಮಾರು ಎಕ್ಸ್ಟ್ರಾ ಕೆಲಸ ಮಾಡ್ಬೇಕು.. ಬೆಳಿಗ್ಗೆ ಹೋದ ತಕ್ಷಣ ನಾವೇ ಧೂಳು ಹೊಡೆದು ಕಸ ಗುಡಿಸಿ ಬೆವರು ಒರೆಸ್ಕೊಂಡು ಫ್ಯಾನ್ ಹಾಕ್ಕೊಂಡು ಆಗಿ ಕೂರಕ್ಕಿಲ್ಲಾ ಅಷ್ಟರಲ್ಲಿ ಐವತ್ತು ಜನ ಸ್ಪೀಡ್ ಪೋಸ್ಟಗೆ ಕ್ಯೂ ನಿಂತಿರ್ತಾರೆ. ರಸೀತಿಗೆ ಆ ಸುತ್ತಿಗೆ ತರಹ ರಬ್ಬರ್ ಸ್ಟಾಂಪ್ ಇರೋದನ್ನ ಹಿಡಕೊಂಡು ಸ್ಟಾಂಪ್ ಹೊಡೆದು ಹೊಡೆದು ನನ್ನ ಬಲಗೈ ಬಿದ್ದೋಗೋ ಹಾಗೆ ಆಗಿದೆ. ಅದರ ಜೊತೆ ಇನ್ನು ಮೇಲೆ ಬೆಂಗಳೂರಿನಿಂದ ಗದಗಕ್ಕೆ ಟಿಕೆಟ್ ಮಾಡಿ; 3 ದಿವಸವಾದ ಮೇಲೆ ಗದಗದಿಂದ ಸಾಗರ; ಸಾಗರದಿಂದ ಮೈಲಾಡುದುರ್ರೈ ಟ್ರೈನ್‌ನಲ್ಲಿ ಅವರ ಚಿಕ್ಕಮ್ಮನ ಪ್ರಸವಕ್ಕೆ ವಾಣಿಯಂಬಾಡಿಗೆ ಹೋಗುವುದಕ್ಕೆ ಟಿಕೆಟ್ ಸ್ಲೀಪರ್ ಸಮೇತ ಆರು ಟಿಕೆಟ್ ಮೂರು ಹಾಫ್ ಮಕ್ಕಳಿಗೆ ಬುಕ್ ಮಾಡಿ ಅಂತ ಬರ್ತಾರೆ... ಇದನ್ನೆಲ್ಲಾ ನಾವು ಹೇಗೆ ಮಾಡೋದು' ಅಂತಾರೆ ಸುಲೋಚನ'.

'ಅಜ್ಜಿ! ಅದೆಲ್ಲಾ ಇರಲಿ....ನೀನು ಹಳೇನರಸೀಪುರಕ್ಕೆ ನಿನ್ನ ಫ್ರೆಂಡು ನೋಡಕ್ಕೆ ಹೋಗ್ತಿಯಲ್ಲಾ .. ಸ್ಟೇಷನ್ಗೆ ಹೋಗಿ ಟಿಕೆಟ್ ಬುಕ್ ಮಾಡ್ಬೇಕಿಲ್ಲ.. ಇನ್ಮೇಲೆ ಪಕ್ಕದ ರೋಡ್ನಲ್ಲಿರೊ ಪೋಸ್ಟ್ ಆಫೀಸಿಗೆ ಹೋಗಿ ಬುಕ್ ಮಾಡ್ಬಹುದು.'

' ಪೋಸ್ಟ್ ಆಫೀಸಿನಲ್ಲಿ ಟಿಕೆಟ್ ಮಾರೋದು ಸರಿಯಿಲ್ಲಾ ಅಂತ ಅನ್ಸುತ್ತೆ... ಇನ್ನು ಮುಂದೆ ಸ್ಟೇಷನ್ಗೆ ಸ್ಟೇಷನ್ನೇ ಇಲ್ಲಿಗೆ ಬರುತ್ತೆ ನೋಡ್ಕೊ.. ಪೋಸ್ಟ್ ಆಫೀಸ್ ಪ್ಯೂನ್‌ಗಳು ನಮಗೂ ಕೆಂಪು ಶರ್ಟು ಕೊಡಿ ಅಂತ ಮುಷ್ಕರ ಹೂಡ್ತಾರೆ. ಅದು ಕೊಟ್ರೆ ತೋಳ ಬಂದಿ ಕೇಳ್ತಾರೆ. ಈ ವರ್ಷ ಸ್ಟೀಲ್ ಫ್ಯಾಕ್ಟರಿಗಳು ಕರೋನದಿಂದ ಮುಚ್ಚಿತ್ತು ಮುಂದಿನ ವರ್ಷ ತೋಳು ಪೂರ್ತಿ ಮುಚ್ಕೊ ಹಾಗೆ ತೋಳ ಬಂದಿ ಕೊಡ್ತಿವಿ ಅಂದ್ರೆ ಕೇಳ್ತಾರಾ ಹಮಾಲಿಗಳು? ಮುಷ್ಕರ ಹೂಡ್ತಾರೆ...ಟಿಕೆಟ್ಗೆ ಫಾರ್ಮ ಫಿಲ್ ಮಾಡಿದ ಮೇಲೆ..ಮೈಲಿ ಉದ್ದ ಕ್ಯೂ ಇರುತ್ತೆ. ತಳ್ಳೋ ಗಾಡೀಲಿ ಮದ್ಯೆ ಕೈಗೂಸು ಮಕ್ಕಳ ಕಿರಿಚಾಟ, ಚಾಯ್..ಚಾಯ್ ಅಂತ ಕೂಗಾಟ, ಮಕ್ಕಳಿಗೆ ಗಿಲಕಿ, ಹುಡುಗ್ರುಗೆ ಪೀಪಿ, ಹುಡುಗೀರ್ಗೆ ಬ್ರೋಚು, ಬಾಚಣಿಗೆ ಅದೆಲ್ಲಾ ಹಾಕ್ಕೊಂಡು ತಳ್ಳೊ ಗಾಡಿನೋವ್ರು ಬರ್ತಾರೆ ಪೋಸ್ಟ್ ಆಫೀಸಿಗೆ'.

'ಆದೇನು ಮಹಾ...ಕರಗದ ಮದ್ಯೆ ಇದೆಲ್ಲಾ ಇದ್ದೇ ಇರುತ್ತೆ.. ಕರಗ ನಡೀತಿಲ್ವಾ?'

'ಅಲ್ವೋ ಇದು ಕರಗ ಅಲ್ಲ! ಸ್ವಲ್ಪ ತಿಳುಕೋಳೊ! ಕಂಪಾರ್ಟಮೆಂಟಲ್ಲಿ ಕರ್ಚೀಫ್ ಹಾಕಿ ಸೀಟು ಬುಕ್ ಮಾಡ್ತಾರಲ್ಲಾ.. ಆ ಪದ್ಧತಿ ಇಲ್ಲೂ ಬರುತ್ತೆ.. ಕ್ಯೂ ಮದ್ಯೆ ಕರ್ಚೀಫು ಹಾಕಿ ವಿಧಾನ ಸೌಧಕ್ಕೆ ಹೋಗಿ ಮುಖ ತೋರಿಸಿ ಮಮೂಲು 40 % ಅಡ್ಜಸ್ಟ್ ಮಾಡಿ, ಓಡಿ ಬಂದು ಮತ್ತೆ ಕ್ಯೂನಲ್ಲಿ ನಿಲ್ತಾರೆ.. ಅವರು ಕೇಳಿದ್ದು ರೂಟು, ಸ್ಲೀಪರ್ ಸಿಕ್ಲಿಲ್ಲಾ ಅಂದ್ರೆ ಬೇರೆ ಫಾರ್ಮ ಫಿಲ್ ಮಾಡ್ಬೇಕಾಗುತ್ತೆ'.

'ಅಜ್ಜಿ ಇದೆಲ್ಲಾ ಚಿಲ್ರೆ ಸಮಾಚಾರ... ದೇಶದಲ್ಲಿ ಒಂದುವರೆ ಲಕ್ಷ ಪೋಸ್ಟ್ ಆಫೀಸಿದೆ. ಅದರಲ್ಲಿ ನಲವತ್ತೈದು ಸಾವಿರ ಪೋಸ್ಟ್ ಆಫೀಸಿನಲ್ಲಿ ಟಿಕೆಟ್ ಮಾರೋದನ್ನ ಶುರು ಮಾಡ್ತಾರೆ.. ಈಗ ಹೇಗೂ ಕಾಗದ ಬರಿಯೋರು ಕಡಿಮೆ.. ಪೋಸ್ಟಮನ್, ಪೋಸ್ಟವುಮನ್ ಬೆಳಿಗ್ಗೆ ಸುಮ್ನೆ ಒಂದು ರೌಂಡು ಹಾಕಿ ಬರ್ತಾರೆ.. ನೀಲಿ ಇನ್ಲೆಂಡು ಕಾಗದದಲ್ಲಿ ..ಉಭಯ ಕುಶಲೋಪರಿ ಕ್ಷೇಮ ಅಂತ ಯಾರೂ ಈಗ ಬರೆಯಲ್ಲ ..ಎಲ್ಲಾ ದಿನಚರಿ ವಿಚಾರಣೆ ವಾಟ್ಸಪ್ನಲ್ಲೇ ಮುಗಿದು ಹೋಗುತ್ತೆ. ಇನ್ನು ಮನಿಯಾರ್ಡರ್ ಯಾರೂ ಈಗ ಕಳಿಸಲ್ಲಾ.. ಎಲ್ಲಾ ಗೂಗಲ್ ಪೇ ನಲ್ಲಿ ನಡೆಯುತ್ತೆ.. ಈ ವರ್ಷವೂ ನಿಮಗೆ ಕೆಲಸ ಸಿಗಲ್ಲಾ ಅಂತ ಕಾಗದ ಬರೀತಿದ್ದ ಎಂಪ್ಲಾಯ್ಮೆಂಟು ಎಕ್ಸ್ಚೇಂಜ್ ಅವರ ಆಫೀಸೇ ಈಗ ಕ್ಲೋಸ್ ಆಗಿದೆ! ಅವರಿಗೇ ಕೆಲಸ ಇಲ್ಲ. ಪೋಸ್ಟ್ ಆಫೀಸಿನವರಿಗೆ ಕೆಲಸವೇ ಇಲ್ಲ. ರೈಲ್ವೆ ಟಿಕೆಟ್ ಪೋಸ್ಟ್ ಆಫೀಸಿನವರ ಹತ್ರ ಮಾರ್ಸೋದು ಒಳ್ಳೆದು'.

' ತತ್ಕಾಲ್, ಸೀನಿಯರ್ ಕನ್‌ಸಿಷನ್, ಸ್ಟೂಡೆಂಟ್ ಕನ್‌ಸಿಷನ್, ಪಾಸ್ ಅದೆಲ್ಲಾ ಮಾಡಕ್ಕೆ ಅವರಿಗೆ ಕಷ್ಟ ಆಗುತ್ತೆ ಕಣೋ! ಇದೆಲ್ಲಾ ಚಿಲ್ರೆ ವಿಷಯ. ಅವರಿಗೆ ಏನಿದ್ರೂ ಇಂದಿರ ವಿಕಾಸ್ ಪತ್ರ, ಕಿಸಾನ್ ವಿಕಾಸ್ ಪತ್ರ, ಪ್ರಧಾನ ಮಂತ್ರಿ ಯೋಜನ ಆ ತರಹದ್ದು ಮಾಡಿ ಅವರಿಗೆ ಅಭ್ಯಾಸ.'

'ಇದೆಲ್ಲಾ ಶುರು ಮಾಡಿದ್ದು ಸೀನಿಯರ್ ಸಿಟಿಜನ್‌ಗಳಿಗೆ. ಈಗ ಅದೆಲ್ಲಾ ಬೇಡವೇ ಬೇಡಾ ಅಂತ ಮೋದಿಯವರು ಸೀನಿಯರ್ ಸಿಟಿಝುನ್ ಅವರ ರೈಲ್ವೆ ಕನ್ಸಿಷನ್ ಈ ವರ್ಷದಿಂದ ತೆಗೆದು ಹಾಕೀದಾರೆ! ದಿನ ಬಿಟ್ಟು ದಿನ ಪೆಟ್ರೋಲ್ ಮತ್ತು

ಡೀಸಲ್ ಬೆಲೆ ಕುದರಿಸಿ ಅದರ ಮಾರಾಟದಿಂದ ಬಂದ ಹಣ ಬುಲೆಟ್ ಟ್ರೈನ್‌ಗೆ ಆಗುತ್ತೇಂತ ಹಾಗೆ ಮಾಡೀದಾರಂತೆ.. ಮುಂದೆ ಬುಲೆಟ್ ಟ್ರೈನಿಗೆ ದುಡ್ಡು ಸಾಲದಿದ್ರೆ ಸ್ಟೂಡೆಂಟ್ ಕನ್ಸಿಷನ್ನೂ ಹೋಗುತ್ತೆ.'

'ಮುಂದೆ ಪೋಸ್ಟ್ ಆಫೀಸ್ ಮ್ಯಾನೇಜರ್ರೂ ಬಿಳಿ ಪ್ಯಾಂಟ್, ಬಿಳಿ ಶರ್ಟ, ಕರಿಕೋಟು, ಟೈ ಹಾಕಿಕೊಂಡು ಬನ್ನಿ ಅಂತ ಆರ್ಡರ್ ಬರುತ್ತೆ.. ಪೋಸ್ಟ್ ಆಫೀಸಿಗೆ ಹೋಗಿ ಬರುವರಿಗೆ ಬಾಗಿಲಲ್ಲಿ ನಿಂತು ಟಿಕೆಟ್ ಅಥವ ಆಧಾರ್ ಕಾರ್ಡು ತೋರಿಸಿ ಅಂತ ಕೇಳ್ತಾರೆ ನೋಡ್ಕೊ.'


'ಅಜ್ಜಿ! ಇದೆಲ್ಲಾ ಆಗೊಲ್ಲ.. ಆದರೂ ಅಷ್ಟು ತಲೆ ಹೋಗುವ ಸಮಾಚಾರ ಅಲ್ಲ. ಒಂದು ಕನ್ಫ್ಯೂಷನ್ ಆಗಬಹುದು. ಪೋಸ್ಟ ಆಫೀಸಿನವರು ಕಳಿಸುವ ಪಾರ್ಸಲ್ಲೂ ರೈಲ್ವೆನವರು ಕಳಿಸುವ ಪಾರ್ಸಲ್‌ಗೂ ಕನ್ಫ್ಯೂಷನ್ ಆಗಿ ಒಬ್ಬರದು ಸಾಮಾನು ಇನ್ನೊಬ್ಬರಿಗೆ ಹೋಗಬಹುದು. ಉದಾಹರಣೆಗೆ ನೀನು ಹರಿದ್ವಾರದಿಂದ ಪೋಸ್ಟ್ ನಿಂದ ತರಿಸುವ ರಾಮಚರಿತ ಮಾನಸದ ಪುಸ್ತಕ, ಕೆಸೆಟ್ ಹಾಡುಗಳು, ನಮ್ಮ ಪೋಸ್ಟ್ ಆಫೀಸಿಗೆ ಬಂದು ಅಲ್ಲಿಂದ ಕೇರಳದ ಮರಿಯಮ್ಮನ ಮನೆಗೆ ರೈಲ್ವೆ ಪಾರ್ಸೆಲ್ನಿಂದ ಹೋಗಿ ಸೇರಬಹುದು. ನೀನು ಆಗಾಗ್ಗೆ ಅಮೆರಿಕಕ್ಕೆ ಸೂರಿ ಮನೆಗೆ ಚಟ್ನಿಪುಡಿ, ಸಾರಿನ ಪುಡಿ, ಗೊಜ್ಜವಲಕ್ಕಿ, ಲೇಹ್ಯ ನಮ್ಮ ಪೋಸ್ಟಾಫಿಸಿನಲ್ಲಿ ಅದಲು ಬದಲಿಯಾಗಿ, ಸೌದಿ ಅರೇಬಿಯಾದ ಗುಲ್ಷನ್ ಗುಲ್ಷನ್ಗೆ ಕುಟುಂಬಕ್ಕೆ ಹೋಗಿ ಸೇರಬಹುದು.'

' ಆ ತರಹ ಖಂಡಿತ ಆಗುತ್ತೆ.'

'ಅವರು ಥ್ಯಾಂಕ್ಸ್ ಅಜ್ಜಿ ಎಂದು ರಿಟರ್ನ ಗಿಫ್ಟ್ ಕಳುಹಿಸಿದ ಹಂದಿ ಮಾಂಸ, ಕುರಿ ಕುರ್ಮ, ಮೇಕೆ ಹಾಲು ನಿನಗೆ ಖಂಡಿತ ಬಂದು ಸೇರುತ್ತೆ ನೋಡ್ಕೊ!.

'ಈ ತರಹ ಕನ್ಫ್ಯೂಷನ್ ಆದ್ರೆ ಇದು ಬೇಡವೇ ಬೇಡ! ರೈಲ್ವೆ ಬುಕಿಂಗ್ ಅಲ್ಲೇ ಇರ್ಲಿ ಸಧ್ಯ! ■

---




ಸರ್ಕಾರದವರು..ಪೆಟ್ರೋಲ್,ಡಿಸೇಲ್ ಗಳ ಬೆಲೆ ಏರಿಸೋದಕ್ಕೆ ಅಗುತ್ತೆ, ಆದರೆ ಪರಿಹಾ ರದ ದರ ₹25000 ನೇ ಇದೆ ಅಲ್ವೇನೋ.!

# ಭರ್ಜರಿ ಭೋಜನ

**– ಮಹಾಂತೇಶ ಬಾಗೇವಾಡಿ**

ನನ್ನ ಹೆಂಡತಿ ದೀಪಾವಳಿ ಹಬ್ಬಕ್ಕೆ ಈ ಸಲ ನಮ್ಮೂರಿಗೆ ಬಂದು ಬಿಡಿ ಅಂದಾಗ ನನಗೂ ಕೂಡಾ ಖುಷಿಯಾಗಿ ನಾನು ಕೂಡಾ ಅಷ್ಟೇ ಸಂಭ್ರಮದಿಂದ ನನ್ನ ಹೆಂಡತಿಯ ಊರಿಗೆ ಹೋದೆ.

ಮರುದಿನ ದೀಪಾವಳಿ ಅಮವಾಸ್ಯೆಯ ನನ್ನ ಅತ್ತೆ ಭರ್ಜರಿ ನಳಪಾಕವನ್ನೆ ಮಾಡಿದರು. ಕಡಬು, ನಿಬ್ಬಟ್ಟು, ಗೋದಿ ಹುಗ್ಗಿ, ತುಂಬ ಎನಗಾಯಿ ಬದನೆಕಾಯಿಪಲ್ಯ, ಹಪ್ಪಳ, ಸೆಂಡಿಗೆ, ಮಾವಿನಕಾಯಿ ಉಪ್ಪಿನಕಾಯಿ, ನಿಂಬೆಕಾಯಿ ಉಪ್ಪಿನಕಾಯಿ ಊಟದ ಭರ್ಜರಿ ಭೋಜನ ರೆಡಿಯಾಯಿತು.

ಆದರೆ ಬೆಳಿಗ್ಗೆ ಉಪಹಾರ ಮಾಡುವಾಗ ಈ ಭರ್ಜರಿ ಭೋಜನದ ಕಡೆ ಗಮನ ಹರಿಸಿದ್ದರಿಂದ ಉಪಹಾರ ಉಪ್ಪಿಟ್ಟು ಕಡಿಮೆ ತಿನ್ನುವದಕ್ಕೆ ಆಯಿತು.

ಅದು ಅಲ್ಲದೆ ಐನೋರಗೆ ಹಿಂದಿನ ದಿನಾನೇ ಹೇಳಿದ್ದರು. ಹನ್ನೊಂದು ಘಂಟೆಗೆಲ್ಲಾ ನಮ್ಮ ಮನೆಗೆ ಬಂದು ಪಾದಾಹಾಕಿ, ಪಾದಪೂಜೆ ಮುಗಿಸಿಕೊಂಡು ಹೋಗಿ ಅಬ್ಬಾಬ್ಬ ಅಂದ್ರು ಒಂದು ಘಂಟೆ ಐನೋರ ಪೂಜೆಗೆ ತಂಗೊಡ್ರು ಹನ್ನೆರಡು ಘಂಟೆ ಹೊಡೆಯುತ್ತೆ ಆಮೇಲೆ ಗ್ರಾಮದೇವತೆಗಳಿಗೆ ಎಡೆನೀಡಿ ತೆಂಗಿನಕಾಯಿ ಒಡೆಯಿಸಿಕೊಂಡು ಬರಲು ಒಂದು ಘಂಟೆ ಹೋದರು.

ಒಂದು ಘಂಟೆಗೆ ನಮ್ಮ ಹಬ್ಬದ ಊಟ ಶುರುವಾಗುತ್ತೆ, ಅಂತಾ ನನ್ನ ಲೆಕ್ಕಾಚಾರವಾಗಿತ್ತು.

ಆದರೆ ಐನೋರು ಒಂದು ಘಂಟೆಯಾದರೂ ಬರುತ್ತಿಲ್ಲ. ಅತ್ತೆ ನಾಲ್ಕ ಸಾರಿ ಐನೋರ ಮನೆಗೆ ಹೋಗಿ ಬಂದ್ರು ಐನೋರ ಸಿಗತಾನೆ ಇಲ್ಲಾ, ಮತ್ತೆ ಮಾವ ಅವರು ಎರಡು ಸಾರಿಹೋಗಿ ಬಂದರು. ಪ್ರಯೋಜನ ಆಗಲಿಲ್ಲ.

ಅತ್ತೆಯವರು ದೇವರ ನಾಮ ಸ್ಮರಣೆ ಮಾಡಿ, ಹರಿನಾಮ ಸ್ಮರಣೆ ಆಯಿತು. ಎರಡು ಘಂಟೆಯಾದರೂ ಐನೋರ ಸುಳಿವು ಇಲ್ಲ. ಎಲ್ಲರ ಹೊಟ್ಟೆ ಹಸಿವಿನಿಂದ ತಾಳಹಾಕುತ್ತಿದೆ.

ಎರಡು ಮೂಕ್ಕಾಲು ಆದರೂ ಐನೋರು ಬರಲಿಲ್ಲ.

ಕೊನೆಗೆ "ಸಹನಾವವತು ಸಹನೌವ ಗುಣತು

ಸಹವೀರಂಕ್ಕರ ವಾವಹೈ

ತೆಜಸ್ವಿನಾಮ ಗೀತ ಮಸ್ತು, ಮಹಾವಿಘ್ನ ಸಾವ ಹೈ

ಓಂ ಶಾಂತಿ ಶಾಂತಿ ಶಾಂತಿ ಹೀ"

ಅಂತಾ ಕಣ್ಣತೆರೆದು ನೋಡುತ್ತೇವೆ. ಐನೋರ ಮಗಾ ಎದುರಿಗೆ ನಿಂತಿದ್ದಾನೆ.

ಮೊಬೈಲ್ ನೋಡುತ್ತಾ ಪಬ್ಜಿ ಗೇಮ್ ಆಡೋದರಲ್ಲಿ ಬಿಜಿಯಾಗಿದ್ದಾನೆ.

ಇಷ್ಟು ಯಾಕೆ ತಡವಾಯಿತು ಐನೋರೆ ಅಂದ್ರೆ ಪಬ್ಜಿ ಆಟ ಆಡುತ್ತಾ ಸರ್ಜಿಕಲ್

ಸ್ಟ್ರೈಕ್ ಆಟ ಮುಗಿಸೋದರಲ್ಲಿ ಇಷ್ಟು ಹೊತ್ತಾಯಿತು ಅಂದರು.

ನಮ್ಮ ಮುಖದಲ್ಲಿ ಮೂಡಿದ ಹಸಿವಿನ ಚಿತ್ತಾರದ ತಾಳ್ಮೆಯನ್ನು ನೋಡಿ ಐನೋರು ತಿಳಿದುಕೊಂಡರು. ಇವರಿಗೆ ಹಸಿವಾಗಿದೆ. ಅಂತಾ ನೇರವಾಗಿ ಪಾದಪೂಜೆ ಮುಗಿಸಿ ಮಂತ್ರ ಹೇಳಿ, ದಕ್ಷಿಣೆ ತೆಗೆದುಕೊಂಡು ಅಲ್ಲಿಂದ ಹೋದರು.

ಆಗ ಅತ್ತೆಯವರು ಗ್ರಾಮದೇವತೆಗಳಿಗೆ ಎಡೆಹಿಡಿದುಕೊಂಡು ಬರಬೇಕು.

ಅಂದಾಗ ಅಯ್ಯೋ ಶಿವನೆ "ಭರ್ಜರಿ ಭೋಜನ" ಮುಗಿದ ಮೇಲೆ ಹೋಗಬಹುದಲ್ಲಾ. ಅಂದಾಗ ನನ್ನ ಅತ್ತೆ ಪೂಜೆ ಪುನಸ್ಕಾರದಲ್ಲಿ ತುಂಬಾ ಕಟ್ಟುನಿಟ್ಟು, ಗ್ರಾಮದೇವತೆಗೆ ಎಡಿಹಿಡಿದುಕೊಂಡು ತಾಯಿ ಒಡೆಯಿಸಿಕೊಂಡು ಬರಬೇಕು.

ಅಂದಾಗ ಹಸಿವಿಗೆ ಸಮಾಧಾನ ಹೇಳಿ, ಹೇಳಿ ನಮಗೂ ಸಾಕಾಗಿತ್ತು. ಅತ್ತೆಯವರಿಗೂ ನಮ್ಮ  ಕಷ್ಟವು ತಿಳಿಯಿತು. ಅವರಿಗೂ ನೋಡಲಾಗಲಿಲ್ಲ.

ನಾನೆಲ್ಲ ದೇವಸ್ಥಾನಕ್ಕೆ ಹೋಗಿ ಬರುತ್ತೇನೆ. ನೀವೆಲ್ಲರೂ ಊಟ ಮಾಡಿ ಅಂತಾ ಪರವಾನಿಗೆ ಕೊಟ್ಟಾಗ ಅವರಿಗೆ ಎಡಿಹಚ್ಚಿ ಕೊಡುವವರು ಒಬ್ಬರು, ತೆಂಗಿನಕಾಯಿ ತೊಳೆದು ಅಗರಬತ್ತಿ, ಬತ್ತಿ ಎಣ್ಣೆ ಹಾಕಿಕೊಟ್ಟೆವು.

ಅತ್ತೆ ಇಷ್ಟೇಕೆ ಅವಸರ ಅಂದಾಗ ನಾನು ನನ್ನ ಹೆಂಡತಿ, ಅತ್ತೆ ಮಾವ ಮುಖ ನೋಡಿಕೊಂಡೆವು. ಪಕ್ಕದಲ್ಲೆ ಇದ್ದ ನನ್ನ ಮಕ್ಕಳು ಆಗಲೇ ಕಡಬು ಸವಿಯುತ್ತಿದ್ದರು. ಸರಿ ಅಂತಾ ಅತ್ತೆಯವರು ಹೊರಗೆ ಹೋಗುವದಷ್ಟೇ ತಡಾ "ಭರ್ಜರಿ ಭೋಜನ" ಸವಿಯಬೇಕು. ಅಂದಾಗ ನನ್ನ ಹೆಂಡತಿಯ ಅವಳ ಗೆಳತಿ ಸಾವಿತ್ರಿದು ಹೊಸದಾಗಿ ಮದುವೆಯಾಗಿತ್ತು. ಅವಳ ಗಂಡ ದೀಪಾವಳಿ ಹಬ್ಬಕ್ಕೆ ಊರಿಗೆ ಬಂದಿರುವ ವಿಷಯ ಹೇಳಲು ಆಗಲೇ ಬಂದಳು. ರೇಷ್ಮೆ ಉಟಗೊಂಡು, ಅವರ ಯಜಮಾನರನ್ನೂ ಕರೆದುಕೊಂಡು "ಭರ್ಜರಿ ಭೋಜನ" ಮುಗಿಸಿಕೊಂಡು ತಾಂಬೂಲ ಸವಿಯುತ್ತಲೇ ಬಂದಿದ್ದರು.

ನನ್ನ ಹೆಂಡತಿಯದು ಹೊಟ್ಟೆ ತಾಳಹಾಕುತ್ತಿದ್ದರೂ, ಸಾವಿತ್ರಿ ಉಟ್ಟ ರೇಷ್ಮೆ ಸೀರೆ ಬೆಲೆ ಕೇಳಬೇಕು ಎನಿಸಿತು. ಕೇಳಿದಳು. ರವಿಕೆಯನ್ನು ಗಮನಿಸಿದಾಗ ತೋಳುಗಳೆರಡರಲೂ, ತ್ರಿಕೋನ ಆಕಾರದಲ್ಲಿ ವಿನ್ಯಾಸ ಮಾಡಲಾಗಿತ್ತು.

ನನ್ನ ಹೆಂಡತಿಗೂ ಕುತೂಹಲ ತಡೆಯಲಾಗಲಿಲ್ಲ. ಸಾವಿತ್ರಿ ಇದೇನೆ? ರವಿಕೆ ಡಿಜೈನ ಅಂದಾಗ, ತ್ರಿಕೋನ ಆಕಾರದಲ್ಲಿ ಎರಡು ರಂದ್ರ ಇದೆ ಅಲ್ವಾ. ಕೋರೋನಾ ವ್ಯಾಕ್ಸಿನ, ಪಸ್ಟ ಡೋಸ ಹಾಗೂ ಸೆಕೆಂಡ ಡೋಸ ಡಿಜೈನ ಕಣೇ ಇದು ಅಂದಾಗ ಹೌದಾ ಅಂತಾ ನಾವು ಹುಬ್ಬೇರಿಸಿದೆವು.

ನನಗೆ ಹಸಿವು ತಡೆಯಲು ಆಗಲಿಲ್ಲ. ಮೊಗಸಾಲೇಯಿಂದ ನಿಧಾನಕ್ಕೆ ಅಡುಗೆಮನೆಗೆ ಹೋಗಿ ನಾನು ನನ್ನ ಹೆಂಡತಿಯನ್ನೂ ಊಟಕ್ಕೆ ಕರೆದೆನು. ಸಾವಿತ್ರಿಗೆ ಕೇಳುವ ಹಾಗೆ ಆಗ ಅಯ್ಯೋ ನೀವಿನ್ನು ಊಟ ಮಾಡಿಲ್ವಾ, ಸರಿ ಅಂತಾ ಹೊರಟಳು. ಆಗ "ಭರ್ಜರಿ ಭೋಜನ" ಕ್ಕೆ ತಡೆ ಹಾಕಲು ಬರುತ್ತಿರುವರೆ ಅಂತಾ ನೋಡಿಯೇ ನನ್ನ ಹೆಂಡತಿ ನೋಡಿ ಬಂದು ಎಲ್ಲರೂ "ಭರ್ಜರಿ ಭೋಜನ " ಸವಿದೆವು.

■

# ಗಾದೆ ಗೌರಜ್ಜಿ

**ಹಿಂದಿನವರು ಸಂಭಾಷಣೆಯಲ್ಲಿ ಮಾತುಮಾತಿಗೂ ಗಾದೆಗಳನ್ನು ಸೇರಿಸುತ್ತಿದ್ದರು...ಈಗಿನವರಿಗೆ ಆ ರೂಢಿ ತಪ್ಪಿದೆ... (ಮಾತೇ ಅಪರೂಪ...ಗಾದೆಗಳಿಗೆ ಹೋದ್ರಿ..).**

**ಗಾದೆ ಗೌರಜ್ಜಿ ಜೊತೆ ಒಂದು ಸಂಭಾಷಣೆ.** "ಏನಜ್ಜೀ, ಚೆನ್ನಾಗಿದೀರಾ?"

"ಏನೋ ಹೀಗಿದೀನಿ ನೋಡಪ್ಪಾ– ಊರು ಹೋಗು ಅನ್ನುತ್ತೆ, ಕಾಡು ಬಾ ಅನ್ನುತ್ತೆ"

"ಯಾಕಜ್ಜೀ ಹಾಗಂತೀರಾ?:"

"ಮತ್ತಿನ್ನೇನಪ್ಪಾ? ನನ್ನಂಥೋರು ಇನ್ನೆಷ್ಟು ಕಾಲ ಬದುಕಿರ್ಬೇಕು? ಊರಿಗೆ ಆಳಲ್ಲ– ಸ್ಮಶಾನಕ್ಕೆ ಹೆಣ ಅಲ್ಲ. "

"ಬಿಡ್ತು ಅನ್ನಿ ಅಜ್ಜಿ, ನಿಮ್ಮಂಥೋರು ಇರ್ಬೇಕು ಮನೇಲಿ. ಚಿಕ್ಕೋರು ತಪ್ಪು ಮಾಡದ ಹಾಗೆ ನೋಡ್ಕೊಳ್ಳಕ್ಕೆ, ತಿದ್ದಿ ಬುದ್ಧಿ ಹೇಳೋಕೆ. "

"ಅದೇನೋ ನಿಜಾನಪ್ಪ – ಮನೆಗೊಂದು ಮುದಿ ಮೊರಡು, ಒಲೆಗೊಂದು ಕೊದೆ ಕೊರಡು ಅಂತಾರಲ್ಲ. ಆದ್ರೂ ಈಗಿನವು ನನ್ನ ಮಾತೆಲ್ಲಿ ಕೇಳ್ತಾವೆ? ಏತಿ ಅಂದ್ರೆ ಪ್ರೇತಿ ಅಂತಾವೆ. "

"ಅಂದ ಹಾಗೆ.... ಎಲ್ಲಿ ನಿಮ್ಮ ಮೊಮ್ಮಕ್ಳು? ಕಾಣ್ತಾ ಇಲ್ಲ. "

"ಅವೇನು ಬೆಲ್ಲ ಜಜ್ಜಿದ ಕಲ್ಲೇ, ಒಂದೇ ಕಡೆ ಕೂತಿರಕ್ಕೆ? ಕಾಲಿಗೆ ಚಕ್ರ ಕಟ್ಕೊಂಡೋರಂಗೆ ಓಡಾಡ್ತಿರ್ತವೆ. "

"ಅದ್ಸರಿ, ಹೋದ್ವಾರ ನಾ ಬಂದಾಗ ನೀವಿರ್ಲಿಲ್ವಲ್ಲಾ... ಎಲ್ಹೋಗಿದ್ರಿ?"

"ಮಗ್ಳ ಮನೇಗೆ ಹೋಗಿದ್ನಪ್ಪಾ.... ಅವ್ಳಿಗೆ ಹುಶಾರಿರ್ಲಿಲ್ಲ. "

"ಮತ್ತೇ... ಆವತ್ತು ಮಗಳೇನೋ ಅಂದ್ಲೂಂತ ಇನ್ನಲ್ಲಿಗೆ ಕಾಲಿಡಲ್ಲ ಅಂದಿದ್ರಿ?"

"ಆದ್ರೂ ಮನಸ್ಸು ಕೇಳ್ಬೇಕಲ್ಲ? ಅಂಗಾಲಿಗೆ ಹೇಸಿಗೆ ಇಲ್ಲ, ಕರುಳಿಗೆ ನಾಚಿಕೆ ಇಲ್ಲ ನೋಡು."

"ಅಜ್ಜೀ.. ಆ ರಾಮಣ್ಣನ ಮಗ್ಳು ಕಾಲೇಜಲ್ಲಿ ಏನೋ ಗಲಾಟೆ ಮಾಡ್ಕೊಂಡ್ಳಂತೆ??"

"ಸುಮ್ನಿರಪ್ಪಾ.. ಮಾಡಿದೋರ ಪಾಪ ಆಡಿದೋರ ಬಾಯಲ್ಲೀಂತ; ನಮಗ್ಯಾಕೆ ಬಿಡು."

"ರಾಮಣ್ಣ ಈಗ ಮಗಳ್ನ ಕಾಲೇಜಿಗೂ ಕಳಿಸಲ್ವಂತೆ?"

"ಊರು ಸೂರೆ ಹೋದ್ಮೇಲೆ ಕೋಟೆ ಬಾಗ್ಲು ಹಾಕಿದ್ರಂತೆ. ಅದಿರ್ಲಿ, ನಿನ್ಮಗ ಏನ್ಮಾಡ್ತಿದಾನೆ?"

"ಅವ್ನಿಗೇನಜ್ಜೀ.. ಚೆನ್ನಾಗಿ ತಿಂದುಂಡು ಗೂಳಿ ತರ ಇದಾನೆ."

"ಬಿಡ್ತು ಅನ್ನೋ... ಮಗ ಉಂಡ್ರೆ ಕೇಡಲ್ಲ, ಮಳೆ ಬಂದ್ರೆ ಕೇಡಲ್ಲ."

"ಅವ್ನು ತಿನ್ನೋದ್ರಲ್ಲಿ ಮುಂದೆ, ಓದೋದ್ರಲ್ಲಿ ಹಿಂದೆ. ಪ್ರಪಂಚ ಜ್ಞಾನ ಮಾತ್ರ ಚೆನ್ನಾಗಿದೆ."

"ಸರಿ ಬಿಡು, ಓದು ಒಕ್ಕಾಲು, ಬುದ್ಧಿ ಮುಕ್ಕಾಲು ಅಂತ. ಹೇಗಾದ್ರೂ ಬದುಕ್ಕೋತಾನೆ."

"ನಿಮ್ ತಮ್ಮನ ಮನೆಯವ್ರು ಹೇಗಿದಾರಜ್ಜಿ?"

"ಹೇಗಿರ್ತಾರೆ? ಎಲ್ಲಿದ್ದೀಯೋ ಬಸವಾ ಅಂದ್ರೆ ನೀನು ನಿಲ್ಸಿದಲ್ಲೇ ಅಂತ; ಆರಕ್ಕೇರ್ಲಿಲ್ಲ, ಮೂರಕ್ಕಿಳೀಲಿಲ್ಲ. ಸಂಸಾರ ನಡೀತಿದೆ. "

"ಸರಿ ಅಜ್ಜಿ, ಬರ್ತೀನಿ. ಬಹುಶಃ ಮುಂದಿನ ವಾರ ಬರಕ್ಕಾಗಲ್ಲ ಅನ್ಸತ್ತೆ. "

"ನಂಗೊತ್ತಿಲ್ವೆ ನಿನ್ನ? ಬಂದೇ ಬರ್ತೀಯ......... ಬಂದೆ ಗವಾಕ್ಷಿಲೀಂತ.

...ಅಜ್ಜಿ ಮಾತಲ್ಲಿ ನಮ್ಮ ಗಾದೆಗಳ ಕಡು ಸತ್ಯ ಅರಿವಾಯಿತೇ?